

ಸಂಚಿಕೆ ೧೦೯

ಸಂಚಯ

ಕನ್ನಡ ಸಾಹಿತ್ಯ, ಸಂಸ್ಕೃತಿ ಪತ್ರಿಕೆ

ಸಂಚಿಕೆಯ ಗ್ಯಾಲರಿ

ಎಂ.ಆರ್. ಭಗವತಿ ಅವರ ಫೋಟೋ





■ ಸಂಚಿಕೆ: ೧೮೯

ಸಂಚಯ

ಕನ್ನಡ ಸಾಹಿತ್ಯ, ಸಂಸ್ಕೃತಿ ಪತ್ರಿಕೆ

■ ತ್ರೈಮಾಸಿಕ ■ ಅಕ್ಟೋಬರ್-ಡಿಸೆಂಬರ್ ೨೦೧೫

ಒಳ್ಳೆಯತನವು ಕೆಟ್ಟು ಹೋದರೆ, ಅದರಿಂದ
ಬರುವ ದುರ್ವಾಸನೆಯಂತಹ ವಾಸನೆ ಇನ್ನೊಂದಿಲ್ಲ.
ಅದೊಂದು ಹೆಣ; ಮನುಷ್ಯರದಾಗಬಹುದು
ದೇವತೆಗಳದಾಗಬಹುದು.

ಹೆನ್ರಿ ಡೇವಿಡ್ ಥೋರೋ
(ವಾಲ್ಡನ್ ಕೃತಿಯಲ್ಲಿ)

ಸಂಪಾದಕ :
ಡಿ.ವಿ. ಪ್ರಹ್ಲಾದ್

ಸಂಪರ್ಕ ವಿಳಾಸ
ನಂ. ೧೦೦, ೨ನೇ ಮುಖ್ಯರಸ್ತೆ,
೬ನೇ ಬ್ಲಾಕ್, ೩ನೇ ಹಂತ, ೩ನೇ ಘಟ್ಟ
ಬನಶಂಕರಿ, ಬೆಂಗಳೂರು - ೫೬೦ ೦೮೫
ಫೋನ್‌ನಂ.:೦೮೦-೨೬೭೯೧೯೨೫
ಮೊಬೈಲ್: ೯೮೪೪೦ ೬೩೫೧೪
email:
sanchaya.sahityapatrike@gmail.com

● ಮುಖಪುಟ ಫೋಟೋ: ಎಂ.ಆರ್. ಭಗವತಿ, ಪುಟವಿನ್ಯಾಸ: ಎಂ.ಆರ್. ಗುರುಪ್ರಸಾದ್

ಚಂದಾವಿವರ

ರೂ. ೩೦೦ - ಒಂದು ವರ್ಷಕ್ಕೆ (ನಾಲ್ಕು ಸಂಚಿಕೆಗಳಿಗೆ)
ರೂ. ೬೦೦ - ಎರಡು ವರ್ಷಕ್ಕೆ (ಎಂಟು ಸಂಚಿಕೆಗಳಿಗೆ)
ರೂ. ೧೦೦೦ (ಬೆಂಬಲಧನ) (ಹನ್ನೆರಡು ಸಂಚಿಕೆಗಳ ಮೂರು ವರ್ಷಕ್ಕೆ)

ಮೂರು ವರ್ಷಕ್ಕೆ ಚಂದಾ ನವೀಕರಿಸುವವರಿಗೆ 'ಸಂಚಯ' ಪ್ರಕಟಿಸಿದ ಒಂದು ಪುಸ್ತಕ ರಿಯಾಯ್ತಿ ದರದಲ್ಲಿ ನೀಡಲಾಗುವುದು. ('ಒಂದು ಮರ ನೂರು ಸ್ವರ' ಅಥವಾ 'ಸಮಗ್ರ ಕಾಮರೂಪಿ')

ಚೆಕ್/ಡಿ.ಡಿ. ಮೂಲಕ ಚಂದಾ ಕಳಿಸುವವರು **'ಸಂಚಯ', ಬೆಂಗಳೂರು** ಎಂಬ ಹೆಸರಿಗೆ ಕಳುಹಿಸಿ ಅಥವಾ **1821101004682ಗೆ ಕೆನರಾ ಬ್ಯಾಂಕ್, ಬೆಂಗಳೂರಿನ ಗಿರಿನಗರ ಶಾಖೆ ಉಳಿತಾಯ ಖಾತೆ ಸಂ.:** **1821101004682**ಗೆ
ಐಎಫ್‌ಎಸ್‌ಸಿ ಕೋಡ್: CNRB 0001821 - ಜಮಾ ಮಾಡಬಹುದು.

ಹೊಳೆದದ್ದು ತಾರೆ ಉಳಿದದ್ದು ಆಕಾಶ!

ಪ್ರಿಯ ಓದುಗರೇ

ರೇಸಿನಲ್ಲಿ ಹಿಂದೆ ಉಳಿದ ಕ್ರೀಡಾಪಟುವಿನ ಹಾಗೆ ಒಂದು ಸಂಚಿಕೆಯ(ಮೂರು ತಿಂಗಳ) ಕಾಲಮಾನದಷ್ಟು ತಡವಾಗಿ ನಾವು ಸಾಗುತ್ತಿದ್ದೇವೆ. ಒಂದೋ ಕಾಲವನ್ನು ಜಗ್ಗಿ ನಿಲ್ಲಿಸಬೇಕು ಅಥವಾ ಎರಡು ಸಂಚಿಕೆಗಳನ್ನು ಒಂದಾಗಿಸಿ ನಾವು ಮುಂದಕ್ಕೆ ಲಂಘಿಸಬೇಕು. ಎರಡನೆಯದೇ ನಮ್ಮ ಅನಿವಾರ್ಯ ಆಯ್ಕೆ. ಭಗವದ್ಗೀತೆ ಕುರಿತು ಒಂದು ವಿಶೇಷಾಂಕ ರೂಪಿಸಲಾಗುತ್ತದೆ. ಅದು ಸಂಯುಕ್ತ ಸಂಚಿಕೆ; ಗಾತ್ರದಲ್ಲೂ, ಕಾಲದಲ್ಲೂ, ವಾಚ್ಯಾರ್ಥ-ಸೂಚ್ಯಾರ್ಥಗಳಲ್ಲೂ- 'ಮತ್ತೊಮ್ಮೆ ಭಗವದ್ಗೀತೆ' ಎಂದು ಅದರ ತಲೆಬರಹ.

ಈಚೆಗೆ ಭಗವದ್ಗೀತೆಯನ್ನು ಕುರಿತಾಗಿ ನಮ್ಮ ಸಾಹಿತ್ಯ ಸಾಮಾಜಿಕ ವಲಯಗಳಲ್ಲಿ, ಮಾಧ್ಯಮಗಳಲ್ಲಿ ಬಿರುಸಿನ ಚರ್ಚೆಗಳು, ವಾದ-ವಿವಾದಗಳು ನಡೆದಿವೆ. ಇವುಗಳಲ್ಲಿ ಬಹುಪಾಲು ಏಕಪಕ್ಷೀಯ ಅಥವಾ ಆಧಾರರಹಿತ ಹೇಳಿಕೆ, ಪ್ರತಿ ಹೇಳಿಕೆಗಳ ಹಣಾಹಣಿಯಾಗುತ್ತಿದೆ. ಕನ್ನಡದ ಸಾಹಿತ್ಯ ಪರಂಪರೆಯು ಗೀತೆಯನ್ನು ಕುರಿತು ತನ್ನದೇ ರೀತಿಗಳಲ್ಲಿ ಕಾಲಕಾಲಕ್ಕೆ ಮರು ವ್ಯಾಖ್ಯಾನಕ್ಕೆ, ಓದಿಗೆ ಒಳಪಡಿಸಿಕೊಂಡಿದೆ. ಯಾವುದೇ ಗ್ರಂಥವನ್ನು ಕುರಿತು ನಡೆಯಬಹುದಾದ ಆರೋಗ್ಯಕರ ವಾಗ್ವಾದಗಳು ಒಂದು ಸುಸಂಸ್ಕೃತ ಸಮಾಜದ ಪ್ರತಿಬಿಂಬವೂ ಆಗಿರುತ್ತದೆ. ಆದಕಾರಣ ಭಗವದ್ಗೀತೆಯನ್ನು ಸಕಾರಣವಾಗಿ ಮೆಚ್ಚುವ ಹಾಗೂ ನಿರಾಕರಿಸುವ ಎರಡೂ ಸಾಧ್ಯತೆಗಳು ಯಾವತ್ತಿಗೂ ಇರುತ್ತದೆ. ಪಠ್ಯಗಳು ಬೀಜದ ಹಾಗೆ, ಅದಕ್ಕೆ ರೂಪುಗೊಳ್ಳುವ ವ್ಯಾಖ್ಯಾನಗಳು ಕೊನರಿ ಬೆಳೆಯುವ ಮರದ ಹಾಗೆ, ಕಾಲಕಾಲಕ್ಕೆ ಅದು ಹೊಸ ಚಿಗುರು, ಹೂ-ಹಣ್ಣುಗಳನ್ನು ತೊಡುತ್ತಲೇ ಇರಬೇಕಾಗುತ್ತದೆ. ಅದು ಪಠ್ಯದ ಜೀವಂತಿಕೆಯ ಲಕ್ಷಣ, ಆದಕಾರಣ 'ಸಂಚಯ'ಕ್ಕೆ ಭಗವದ್ಗೀತೆ ಕುರಿತಾಗಿ ಒಂದು ವಿಶೇಷಾಂಕ ರೂಪಿಸುವ ಸಂಕಲ್ಪ.

ಈ ಸಂಚಿಕೆ ಮೂರು ಭಾಗಗಳನ್ನು ಹೊಂದಿರುತ್ತದೆ. ಮೊದಲ ಭಾಗದಲ್ಲಿ ವಿಶ್ವದ ವಿವಿಧ ದಾರ್ಶನಿಕರು, ಮತಾಚಾರ್ಯರು ಹಾಗೂ ಚಿಂತಕರು ಕಂಡುಕೊಂಡ ಭಗವದ್ಗೀತೆಯ ಬಗೆಗಿನ ನೋಟಗಳಿದ್ದರೆ, ಎರಡನೆಯ ಭಾಗದಲ್ಲಿ ಈಗಿನ ಕನ್ನಡದ ಹಾಗೂ ಇತರ ಭಾಷೆಗಳ ವಿವಿಧ ದೃಷ್ಟಿಕೋನದ ಆಲೋಚನೆಯ ಬರಹಗಳಿರುತ್ತವೆ. ಮೂರನೆಯ ಮಜಲಿನಲ್ಲಿ ಜನಸಾಮಾನ್ಯರು ತಮ್ಮ ಬದುಕಿನಲ್ಲಿ ಕಂಡುಕೊಂಡ

ಗೀತೆಯ ಕುರಿತಾದ ಆಯ್ದ ಬರಹಗಳು ಇರುತ್ತವೆ. 'ಸಂಚಯ'ದ ಓದುಗವಲಯಕ್ಕೂ ಈ ಸಂಚಿಕೆಗೆ ಬರೆಯಲು ಸ್ವಾಗತ.

ಇನ್ನು ನಮ್ಮ ಸುತ್ತಲ ಆಗುಹೋಗುಗಳ ಬಗ್ಗೆ ಬರೆಯಬೇಕೆನ್ನಿಸಿದರೂ ನಮ್ಮ ಮಾಧ್ಯಮಗಳ ಹಾಗೂ ಸಾರ್ವಜನಿಕ ವ್ಯಕ್ತಿಗಳ ಸಂವಾದದ ಸ್ವರೂಪ ಆತಂಕ ಹುಟ್ಟಿಸುತ್ತದೆ.

ನೂರು ವರ್ಷ ತುಂಬಿದ ಕನ್ನಡ ಸಾಹಿತ್ಯ ಪರಿಷತ್ತು ಮತ್ತೊಮ್ಮೆ ಹೊಸ ಅಧ್ಯಕ್ಷರು ಹಾಗೂ ಕಾರ್ಯಪಡೆಯೊಂದನ್ನು ಚುನಾಯಿಸಿ ಕನ್ನಡಿಗರ ಮುಂದಿರಿಸಿದೆ. ಇವತ್ತು ನಡೆಯುತ್ತಿರುವ ಸಾಹಿತ್ಯದ ಬರಹ-ಓದು-ಪ್ರಕಟಣೆ ಹಾಗೂ ಸಂವಹನ ಪ್ರಕ್ರಿಯೆಗೂ ಪರಿಷತ್ತಿಗೂ ಯಾವುದೇ ಜೀವಂತ ಸಂಬಂಧ ಈಗ ಉಳಿದಿಲ್ಲ. ಯಾವ ಕ್ರಿಯಾಶೀಲ ಲೇಖಕರೂ ಪರಿಷತ್ತಿನ ಜೊತೆಯಲ್ಲಿ ಇಲ್ಲ. ಇದ್ದರೂ ಸಮ್ಮೇಳನಕ್ಕೆ ಅಧ್ಯಕ್ಷರಾಗುವುದೋ ಗೋಷ್ಠಿಯೊಂದಕ್ಕೆ ಭಾಗವಹಿಸುವುದೋ ಇಷ್ಟೇ. ಬರೀ ಹೊರಗಿನವರಾಗಿ, ಸಾಹಿತಿಗಳಲ್ಲದವರ ಸಾಹಿತ್ಯೇತರ ಅಬ್ಬರ, ಆರ್ಭಟ ಪರಿಷತ್ತಿನಲ್ಲಿ ಹಾಸುಹೊಕ್ಕಾಗಿದೆ, ಚೆನ್ನಾಗಿ ಬರೆಯಬಲ್ಲ ಗಟ್ಟಿ ಲೇಖಕರು ಅದರಿಂದ ದೂರ ಉಳಿದಿದ್ದಾರೆ. ಇಂಥಾದ್ದೊಂದು ಕಂದಕ ಯಾಕಾಯ್ತು ಅನ್ನುವ ಪ್ರಶ್ನೆಯನ್ನೂ ಯಾರೂ ಹಾಕಿಕೊಂಡ ಹಾಗಿಲ್ಲ. ಅವರ ಬರಹಗಳ ಪ್ರಕಟಣೆ, ಪುಸ್ತಕಗಳ ಪ್ರಕಟಣೆ ಎಲ್ಲವೂ ಸಣ್ಣ ಸಂಸ್ಥೆಗಳ ವ್ಯಕ್ತಿಗತ ಪ್ರಯತ್ನಗಳ ಪಾಲಾಗಿದೆ. ಜಾತಿಯ ಲಾಬಿಗಾರಿಕೆ ಹಣದ ಹರಿವು ಅಸಾಹಿತಿಗಳ ಭಟ್ಟಂಗಿ ಕೆಲಸಗಳು ಕನ್ನಡದ ಕಾಳಜಿಯ ಹೆಸರಿನ ಹಿಂದೆ ಛದ್ಮವೇಷಧಾರಿಯಾಗಿ ಕೆಲಸ ಮಾಡುತ್ತಿದೆ. ಸಪಾಟು ದೂರದೃಷ್ಟಿಯ ಕೆಲವರಿಗೆ ಅದು ನ್ಯೂಟ್ರಲ್ ಸ್ಪೇಸ್ ಆಗಿ ಕನ್ನಡದ ಪ್ರಾತಿನಿಧಿಕ ಸಂಸ್ಥೆಯಾಗಿಯೂ ಕಾಣುತ್ತಿದೆ. ಹಳೇ ಪುಸ್ತಕಗಳ ಮರು ಮುದ್ರಣ ಹಾಗೂ ಸಮ್ಮೇಳನಗಳನ್ನು ಬಿಟ್ಟು ಯಾವ ಅರ್ಥಪೂರ್ಣ ಕೆಲಸವೂ ನೂರು ವರ್ಷ ತುಂಬಿದ ಪರಿಷತ್ತಿನ ಕಣ್ಣಮುಂದಿಲ್ಲ. ಹೆಚ್ಚು ಅನುದಾನ ತರುವ ದೊಡ್ಡ ದೊಡ್ಡ ಕಟ್ಟಡ ಕಟ್ಟುವ ಆಲೋಚನೆಗಳೇ ಗಾಢವಾಗಿದೆ. ಕನ್ನಡವನ್ನು ಕಟ್ಟಡದಲ್ಲಿ ಕಟ್ಟಲಾಗದು ಅನ್ನುವ ಸರಳ ಸತ್ಯ ಹೇಗೆ ಅರ್ಥಮಾಡಿಸುವುದು? ಅದರ ಐತಿಹಾಸಿಕ ಪರಿಷತ್ ಪತ್ರಿಕೆಯಾಗಲಿ, ಇನ್ನ್ಯಾವುದೇ ಸಾಹಿತ್ಯ ಭಾಷೆಗೆ ಸಂಬಂಧಿಸಿದ ನಿಜವಾದ ಕೆಲಸಗಳಾಗಲಿ ಇವರ ಆದ್ಯತೆಯಲ್ಲಿ ಇಲ್ಲ.

ದೇವನೂರರ ಆತಂಕ ನಿಜ. ನಮ್ಮ ಮಾತುಗಳು ಅದರಲ್ಲೂ ಲೇಖಕರ ಮಾತುಗಳು ಹಾಗೂ ನಮ್ಮ ಸಮಾಜದ ಆಗುಹೋಗುಗಳು ತಮ್ಮ ತಾಳ ತಪ್ಪಿದೆ, ನಾವು ಕಟ್ಟಿಕೊಡುವ ಪರಿಷತ್ತು ನಾವು ಆಡುತ್ತಿರುವ ಮಾತು ಅದರ ಹಿಂದಿರಬೇಕಿದ್ದ ನೈತಿಕ ಶಕ್ತಿ ಕಳಕೊಂಡಿದೆ. ತಲುಪಬೇಕಾದವರ ಕಿವಿಗಳಿಗೆ ಅದರ ಒಡಲು ಧ್ವನಿ ಸ್ಪಷ್ಟವಾಗಿ ಗೋಚರಿಸುತ್ತಿದೆ. ಬಡಿವಾರ ಹಾಗೂ ಸೋಗಲಾಡಿತನ ಸಾಹಿತ್ಯಕ್ಕೆ ಶಕ್ತಿ ಕೊಡುವುದಿಲ್ಲ. ಹಣವಾಗಲಿ, ಮಾಧ್ಯಮಗಳ ದೊಂಬರಾಟವಾಗಲಿ ಕನ್ನಡವನ್ನು ಉದ್ಧರಿಸಲಾಗುವುದಿಲ್ಲ.

ಒಂದು ತೀವ್ರ ವಿಷಾದದಿಂದಲೇ ಈ ಟಿಪ್ಪಣಿ ಮುಗಿಸುತ್ತಿರುವೆ. ಮತ್ತೆ ಮುಂದಿನ ವಿಶೇಷಾಂಕಕ್ಕೆ.

ಮತ್ತೆ ಮುಂದಿನ ಸಂಚಿಕೆಗೆ-

ನಿಮ್ಮ

ಸಂಪಾದಕ


ಇನ್ನೊಂದು ಮಾತು ಸೇವಿಸುವುದಾದರೆ; ನಿಮ್ಮಗಳ ಚಂದಾ ನವೀಕರಿಸಿ. ಆದಷ್ಟು ಮೂರು ವರ್ಷಕ್ಕೆ ಚಂದಾ ಹಣ ಕೊಟ್ಟು ಪತ್ರಿಕೆಯ ಆರ್ಥಿಕ ಸುಭದ್ರತೆ ಹಾಗೂ ಸಂಪಾದಕನ ನಿರಾಳತೆಗಳಿಗೆ ನೆರವು ನೀಡಿ.



ಈ ಸಂಚಿಕೆಯಲ್ಲಿ...

ಶತಮಾನದ ಮೇರು ವಿದ್ವಾಂಸ: ಟಿ.ವಿ. ವೆಂಕಟಾಚಲಶಾಸ್ತ್ರೀ

ಡಾ. ಎಚ್.ಎಸ್. ಸತ್ಯನಾರಾಯಣ



ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀಯವರು ಜನಿಸಿದ್ದು (೨೯-೮-೧೯೩೩) ಇಂದಿನ ರಾಮನಗರ ಜಿಲ್ಲೆಗೆ ಸೇರಿರುವ ಕನಕಪುರ (ಆಗ ಕಾನಕಾನಹಳ್ಳಿ) ತಾಲೂಕಿನ ಹಾರೋಹಳ್ಳಿಯಲ್ಲಿ, ತಂದೆ- ಶ್ರೀ ತೋಗೆರೆ ವೆಂಕಟ ಸುಬ್ಬಾಶಾಸ್ತ್ರೀ- ತಾಯಿ ಶ್ರೀಮತಿ ಸುಬ್ಬಮ್ಮ. ಕನಕಪುರದಲ್ಲಿ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆ ಶಿಕ್ಷಣ ಮುಗಿಸಿ, ಇಂಟರ್‌ಮೀಡಿಯೆಟ್ ವ್ಯಾಸಂಗಕ್ಕಾಗಿ ಮೈಸೂರು ಸೇರಿ ಅಲ್ಲಿಯೇ ಬಿ.ಎ. ಆನರ್ಸ್, ಕನ್ನಡ ಎಂ.ಎ. ಹಾಗೂ ಕನ್ನಡ ನೇಮಿನಾಥ ಪುರಾಣಗಳ ತೌಲನಿಕ ಅಧ್ಯಯನ ಎಂಬ ಮಹಾಪ್ರಬಂಧಕ್ಕೆ ಪಿಎಚ್.ಡಿ. ಪದವಿಯನ್ನೂ ಪಡೆದರು. ಕನಕಪುರದ ರೂರಲ್ ಕಾಲೇಜು, ಬೆಂಗಳೂರಿನ ಸೇಂಟ್ ಜೋಸೆಫರ ಕಾಲೇಜು ಮತ್ತು ಉಸ್ಮಾನಿಯ ವಿಶ್ವವಿದ್ಯಾನಿಲಯಗಳಲ್ಲಿ ಕೆಲ ವರ್ಷ ಕನ್ನಡ ಅಧ್ಯಾಪಕರಾಗಿ ಕೆಲಸ ಮಾಡಿ, ೧೯೬೮ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಅಧ್ಯಾಪಕರಾದರು. ಮುಂದೆ ಪ್ರೊಫೆಸರ್, ನಿರ್ದೇಶಕ ಪದವಿಗಳು ಸಹಜವಾಗಿ ಒದಗಿ ಬಂದವು.

ಶಾಸ್ತ್ರಿಗಳ ಒಡಹುಟ್ಟಿದವರು ಹತ್ತು ಮಂದಿಯಾದರೂ ಉಳಿದದ್ದು ಏಳು ಮಂದಿ. ಇವರೇ ಹಿರಿಯ ಮಗ. ಎಂದೂ ಕಷ್ಟಗಳನ್ನು ಬಾಯಿಬಿಟ್ಟು ಹೇಳಿಕೊಳ್ಳದ ತಂದೆ, ಅಗ್ಗದ ಬೆಲೆಯ ಹಸಿ ಸೌದೆ, ಅದನ್ನು ಉರಿಸಲು ಸೀಮೆಎಣ್ಣೆ ಮಣ್ಣಿನ ಒಲೆಗಳ ಮೇಲೆ ಬೇಯಲಿಟ್ಟ ದಬ್ಬಣಸಾಲೆ ಅಕ್ಕಿ- ಹೀಗೆ ಅಡುಗೆ ಮಾಡುತ್ತಲೇ ಆಯುಷ್ಯದ ಬಹುಭಾಗವನ್ನು ಕಳೆದು ನಿತ್ರಾಣರಾದ ತಾಯಿ, 'ಹೊಟ್ಟೆ ತುಂಬ ಹಿಟ್ಟು ಬಾಯಿ ತುಂಬ ಅನ್ನ' ಎಂಬಂತಹ ಸ್ಥಿತಿಯಲ್ಲೂ ವೆಂಕಟಾಚಲಶಾಸ್ತ್ರೀಗಳನ್ನು ಕುಟುಂಬದ ಮೊದಲ ಸ್ನಾತಕೋತ್ತರ ಪದವೀಧರರನ್ನಾಗಿಯೂ, ಡಾಕ್ಟರೇಟ್ ಪದವೀಧರರನ್ನಾಗಿಯೂ ಮಾಡುವಲ್ಲಿ ಸಫಲರಾದರು. ತಮ್ಮ ಮನೆಯ ಆರ್ಥಿಕ ಸ್ಥಿತಿಗತಿಯ ಅರಿವನ್ನು ಎಳವೆಯಿಂದಲೂ ಪರಿಚಯ ಮಾಡಿಕೊಂಡೇ ಬೆಳೆದ ಶಾಸ್ತ್ರಿಗಳು ತಮ್ಮ ಓದಿನ ಗುರಿಯತ್ತ ಒಮ್ಮನಸ್ಸಿನಿಂದ ಸಾಗಿದರು. ಸ್ವಭಾವತಃ ಸುಲಭಗ್ರಾಹಿ ವಿದ್ಯಾರ್ಥಿಯಾಗಿದ್ದ ಶಾಸ್ತ್ರಿಗಳಿಗೆ ವಿದ್ಯೆ ಸಹಜವಾಗಿ ಒಲಿಯಿತು. ಮುಂದೆ ಕೆಲಸ ಸಿಕ್ಕಿದಾಗ ತಂದೆ-ತಾಯಿಯರನ್ನ ಸುಖವಾಗಿ ನೋಡಿಕೊಂಡರು. ಸೋದರಿಯರ ಮದುವೆಯ ಜವಾಬ್ದಾರಿ ನಿರ್ವಹಿಸಿ ತಂದೆಗೆ ನೆರವಾದರು. ಸಾಲ ಮಾಡಬಾರದು, ಸುಳ್ಳಾಡಬಾರದು, ಕಷ್ಟಗಳನ್ನು ಧೈರ್ಯದಿಂದ ಎದುರಿಸಬೇಕು, ಗುರುಹಿರಿಯರನ್ನು ಗೌರವಾದರಗಳಿಂದ ನಡೆಸಿಕೊಳ್ಳಬೇಕು ಇತ್ಯಾದಿ ಗುಣಸಂಸ್ಕಾರಗಳೆಲ್ಲವೂ ತಂದೆಯಿಂದ ಎರವಲಾಗಿ ಬಂದವು. ಇವುಗಳಲ್ಲಿ ಸಾಲ ಮಾಡಬಾರದೆಂಬುದೊಂದನ್ನು ಶಾಸ್ತ್ರಿಗಳಿಗೆ ಪಾಲಿಸಲಾಗಲಿಲ್ಲ, ಎಲ್ಲ ಜವಾಬ್ದಾರಿಗಳಿಗೆ ಹೆಗಲು ಕೊಡಲು ಅದು ಅನಿವಾರ್ಯವಾಯಿತು. ಉಳಿದೆಲ್ಲವನ್ನೂ ಎಂದಿಗೂ ತಪ್ಪದಂತೆ ಪಾಲಿಸಿದ ತೃಪ್ತಿಯಿದೆ.

ಸಾಹಿತ್ಯಾಧ್ಯಯನವೂ ತಂದೆಯಿಂದಲೇ ಸ್ಫೂರ್ತಿಗೊಂಡಿತೆನ್ನಬಹುದು. ತಂದೆಯವರು ರಾಮಕೃಷ್ಣ-ವಿವೇಕಾನಂದರನ್ನು, ಗಳಗನಾಥ, ವೆಂಕಟಾಚಾರ್ಯರ ಕಾದಂಬರಿಗಳನ್ನೂ ಇಂಗ್ಲಿಷ್ -ಕನ್ನಡ ಭಾಷೆಗಳಲ್ಲಿ ಹೃದ್ಯವಾಗಿ ಓದಿಕೊಂಡಿದ್ದರ ಜೊತೆಗೆ ಇತರೆ ಗಂಭೀರ ಸಾಹಿತ್ಯ ಕೃತಿಗಳನ್ನೂ ಸ್ನೇಹಿತರಿಂದ ಎರವಲು ತಂದು ಓದುತ್ತಿದ್ದರು. ಶಾಸ್ತ್ರೀಗಳಿಂದಲೂ ಅದನ್ನು ಓದಿಸುತ್ತಿದ್ದರು. ಬಹುರಂಜನೀಯವಾಗಿ ಕಥೆ ಹೇಳುವುದರಲ್ಲೂ ಇವರ ತಂದೆ ಪಳಗಿದ್ದರು. ಮಕ್ಕಳಿಲ್ಲದ ದೊಡ್ಡಪ್ಪನವರ ಪ್ರೀತಿ-ಆಸರೆಯೂ ಶಾಸ್ತ್ರೀಗಳಿಗೆ ಸಂದಿತು. ಒಬ್ಬ ತಮ್ಮ, ಐವರು ತಂಗಿಯರನ್ನು ವಿದ್ಯಾವಂತರನ್ನಾಗಿಸಿ, ಅವರೆಲ್ಲ ನೆಮ್ಮದಿಯ ಬದುಕು ಕಟ್ಟಿಕೊಳ್ಳಲು ನೆರವಾಗುವುದರ ಜೊತೆಗೆ, ತಮ್ಮ ಸಂಸಾರ, ಮಕ್ಕಳ ಜವಾಬ್ದಾರಿ-ಎಲ್ಲದರಲ್ಲೂ ಯಾವುದೇ ಕೊರತೆಯಾಗದಂತೆ ತಮ್ಮ ಕರ್ತವ್ಯವನ್ನು ಶಾಸ್ತ್ರೀಗಳು ಯಶಸ್ವಿಯಾಗಿ ನಿಭಾಯಿಸಿದರು. ಇವೆಲ್ಲದರ ಜೊತೆಜೊತೆಗೆ ಸಾಧ್ಯವಾದುದು ಇವರ ಪ್ರವೃತ್ತಿ ಬದುಕಿನ ಸಾಹಸಗಾಥೆ. ಸ್ವಕುಟುಂಬದ ವಿಚಾರದಲ್ಲೂ ಮಹಾ ಕುಟುಂಬವತ್ಸಲ.

ಮನೆಯ ವಾತಾವರಣದಿಂದ ಶಾಸ್ತ್ರೀಗಳ ಸಾಹಿತ್ಯಾಸಕ್ತಿ ಮೊಳಕೆ ಒಡೆಯಿತಾದರೂ ಅಧ್ಯಾಪಕರ ಪ್ರವಚನದಿಂದಲೂ ಅದು ಚಿಗುರೊಡೆಯಿತು. ಒಬ್ಬ ವಿದ್ಯಾರ್ಥಿಯ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ಮನೆಯ ಹಿಂದೆ ಶಾಲೆ, ಶಾಲೆಯ ಹಿಂದೆ ಮನೆ ಇರುತ್ತದೆನ್ನುವುದು ಇವರ ವಿಚಾರದಲ್ಲಿ ನಿಜವಾಯಿತು. ಇವರ ಸ್ಮರಣಶಕ್ತಿ, ಉತ್ಸಾಹಗುಣ, ವಿಚಾರ ಶಕ್ತಿಗಳನ್ನು ಕಂಡು ಶಿಕ್ಷಕರು ಮೆಚ್ಚುಗೆಯೊಂದಿಗೆ ವಾತ್ಸಲ್ಯಭಾವವನ್ನೂ ತೋರುತ್ತಿದ್ದರು. ಎಚ್.ಪಿ. ಶಿವರಾಮಯ್ಯ, ಪಂಡಿತ ಶಾಮಾಚಾರ್ಯ, ಪಂಡಿತ ಎಚ್. ಹನುಮಂತಪ್ಪ ಮುಂತಾದ ಕನ್ನಡ ಬೋಧಕರು ತಮ್ಮ


ಆಕರ್ಷಕ ವ್ಯಕ್ತಿತ್ವ ಮತ್ತು ಬೋಧನೆಗಳಿಂದ ಶಾಸ್ತ್ರೀಗಳ ಮನ ಗೆದ್ದಿದ್ದರು. ಅವರುಗಳು ಪ್ರಾಚೀನ ಕನ್ನಡ ಕಾವ್ಯದ ಸೊಗಸನ್ನು ಮನದಟ್ಟು ಮಾಡಿಸುವ ಕ್ರಮ ಆಕರ್ಷಕವಾಗಿತ್ತು. ಶಾಸ್ತ್ರೀಗಳಿಗೆ ಹಳಗನ್ನಡದ ಬಗೆಗಿನ ಒಲವು ಈ ಹಂತದಿಂದಲೇ ಆರಂಭವಾಯಿತು.

ಕಾಲೇಜು ವ್ಯಾಸಂಗಕ್ಕೆಂದು ಮೈಸೂರಿಗೆ ಬಂದಾಗ ಗುರುಗಳಾಗಿ ದೊರೆತವರು ಎಸ್. ಅನಂತರಂಗಾಚಾರ್, ಉ.ಕಾ. ಸುಬ್ಬರಾಯಾಚಾರ್‌ರಂಥ ಉದ್ದಾಮ ಪಂಡಿತರುಗಳು. ಇವರಲ್ಲಿ ಅನಂತ ರಂಗಾಚಾರ್ ಪದ್ಯಗಳನ್ನು ಶ್ರವ್ಯವಾಗಿ, ಗಂಭೀರವಾಗಿ ವಾಚಿಸುತ್ತಿದ್ದರು. ಅವರ ವಾಚನದ ವೈಖರಿ, ಹಳಗನ್ನಡ ಭಾಷೆಯ ರಾಜಗಾಂಭೀರ್ಯ, ಇವೆಲ್ಲವೂ ಕನ್ನಡವನ್ನು ವಿಶೇಷವಾಗಿ ಕಲಿಯಬೇಕೆಂಬ ಆಸೆಯನ್ನು ಬಲವಾಗಿಸಿತು. ಮಹಾರಾಜ ಕಾಲೇಜಿನಲ್ಲಿ ಬಿ.ಎ. ಆನರ್ಸ್ ಓದುವಾಗ ಪಾಂಡಿತ್ಯ, ಚಾರಿತ್ರ್ಯ, ಶಿಷ್ಯವಾತ್ಸಲ್ಯಗಳಿಂದ ನಾಡಿನಲ್ಲೇ ಖ್ಯಾತರಾಗಿದ್ದ ಗುರುಪರಂಪರೆ ದೊರೆತಿತು. ಪಂಪಭಾರತ ಮತ್ತು ಸಾಹಿತ್ಯ ವಿಮರ್ಶೆಯನ್ನು ಕುವೆಂಪು ಬೋಧಿಸುತ್ತಿದ್ದರು. ಇವರ ಜೊತೆಗೆ ಡಿ.ಎಲ್.ಎನ್.ರ 'ಸಾಹಿತ್ಯ ಚರಿತ್ರೆ', ಎಸ್. ಅನಂತರಂಗಾಚಾರ್‌ರ 'ಶಬ್ದಮಣಿದರ್ಪಣ', ತ.ಸು. ಶಾಮರಾಯರ 'ವಚನ ಸಾಹಿತ್ಯ', ಎಸ್.ವಿ. ಪರಮೇಶ್ವರಭಟ್ಟರ 'ಭರತೇಶವೈಭವ', ಎಸ್. ಶ್ರೀಕಂಠಶಾಸ್ತ್ರೀಯವರ 'ಕರ್ನಾಟಕ ಸಾಂಸ್ಕೃತಿಕ ಚರಿತ್ರೆ'ಯ ಬೋಧನೆಗಳು ಶಾಸ್ತ್ರೀಗಳ ಮನಸ್ಸಿಗೆ ಕಸುವು ತುಂಬಿತು. ಕುವೆಂಪು ಅವರ ಕಾವ್ಯಮೀಮಾಂಸೆಯ ಪಾಠಗಳು ''ರಸಾಮೃತವಾಹಿನಿಯ ಮೇಲೆ ಚಂದ್ರನೌಕೆಯಲ್ಲಿ ಕುಳಿತು ಕರ್ಪೂರಶಲಾಕೆಯ ಹುಟ್ಟು ಹಾಕುತ್ತ ಲೀಲಾವಿಹಾರ ಮಾಡುವ ಪ್ರಯಾಣದಂತೆ ಒಂದು ಮಧುರಾನುಭವ'' ಎಂದು ಶಾಸ್ತ್ರೀಗಳು ಇಂದಿಗೂ ಸ್ಮರಿಸುವುದುಂಟು. ಒಬ್ಬೊಬ್ಬ ಗುರುವಿನ ಬೋಧನೆಯೂ ತಮ್ಮ ಗಹನವಾದ ವಿದ್ವತ್ಪ್ರಭೆಯಿಂದ ಶಾಸ್ತ್ರೀಗಳ ಜ್ಞಾನ ಕ್ಷಿತಿಜವನ್ನು ವಿಸ್ತರಿಸುತ್ತಾ ಹೋಯಿತು. ಆಟ-ತಿರುಗಾಟಗಳಲ್ಲಿ ಎಂದೂ ಆಸಕ್ತಿ ಹೊಂದಿರದ ಶಾಸ್ತ್ರೀಗಳು ಶ್ರದ್ಧೆಯಿಂದ ಓದಿ ಪಂಪ, ರನ್ನ, ಜನ್ನ, ಹರಿಹರ, ಕುಮಾರವ್ಯಾಸ ಮುಂತಾದವರಿಂದ ರೂಪಿತಗೊಂಡಿದ್ದ ಕಾವ್ಯ ಪರಂಪರೆಯನ್ನು ಹೃದ್ಗತ ಮಾಡಿಕೊಂಡರು. ಜೊತೆಜೊತೆಗೆ ಕನ್ನಡ-ಸಂಸ್ಕೃತ ಶಾಸ್ತ್ರಗ್ರಂಥಗಳನ್ನು ತಲಸ್ಪರ್ಶಿಯಾಗಿ ಅಭ್ಯಾಸ ಮಾಡಿದರು. ಪುತಿನ, ಬೇಂದ್ರೆ, ಕುವೆಂಪು, ಎಸ್.ವಿ. ಪರಮೇಶ್ವರಭಟ್ಟರ ಕಾವ್ಯಕೃಷಿಯನ್ನೂ ಆಸಕ್ತಿದಾಯಕವಾಗಿ ಓದಿಕೊಂಡರೂ ಅವರ ಹೃದಯದಲ್ಲಿ ನೆಲೆನಿಂತಿದ್ದು ಮಾತ್ರ ಕೇಶಿರಾಜ. ಕೇಶಿರಾಜನ ಶಬ್ದಮಣಿದರ್ಪಣವು ನಿತ್ಯಸಂಗಾತಿಯಾಯಿತು. ಸೃಜನಶೀಲ ಮೇರುಪ್ರತಿಭೆಗಳನ್ನು ಆಸಕ್ತಿದಾಯಕವಾಗಿ ಗಮನಿಸುತ್ತಲೇ ಶಾಸ್ತ್ರೀಗಳು ಪ್ರೊ. ಡಿ.ಎಲ್.ಎನ್.ರ ದಾರಿಗೆ ತಮ್ಮನ್ನು ತೆರೆದುಕೊಂಡರು. ಪರಿಣಾಮವಾಗಿ ಛಂದಃಶಾಸ್ತ್ರ ನಿಘಂಟು, ಕಾವ್ಯಮೀಮಾಂಸೆ, ಗ್ರಂಥ ಸಂಪಾದನೆ, ಭಾಷಾ ವ್ಯಾಕರಣ, ಅನುವಾದ ಮುಂತಾದ ಕ್ಷೇತ್ರಗಳು ಶಾಸ್ತ್ರೀಗಳಿಂದ ಸಂಪನ್ನತೆ ಹೊಂದುವಂತಾಯಿತು. ಯಾವುದೇ ವಿಷಯವನ್ನಾಗಲಿ ಸೂಕ್ಷ್ಮವಾಗಿ-ಸಮಗ್ರವಾಗಿ ನೋಡಬಲ್ಲ ಇವರ ಗುಣದಿಂದಾಗಿ ಪರಸ್ಪರ ಸಂಬಂಧಿಯಾದ ಅನೇಕ ವಿಷಯಗಳಲ್ಲಿ ತಜ್ಞತೆ ಹೊಂದಲು ಸಾಧ್ಯವಾಯಿತು. ಯಾವುದೇ ಒಂದು ಕ್ಷೇತ್ರದ ಸೀಮಿತ ಕೊಳವೆ ದೃಷ್ಟಿಕೋನದ ಜಾಡಿನಿಂದ ವಿಭಿನ್ನವಾಗಿ ನಿಲ್ಲುವ ಟಿ.ವಿ.ವಿ.ಯವರ ಬಹುಶ್ರುತ ಪ್ರತಿಭೆಯು ಇಂದಿಗೂ ಅವರೊಬ್ಬ ಸರಿದೊರೆಯಿಲ್ಲದ ಅಪೂರ್ವ ವಿದ್ವಾಂಸರೆನ್ನಿಸುವಂತೆ ಮಾಡಿದೆ. ಈ ಬಗೆಯ ನಾನಾ ಮಗ್ಗುಲುಗಳಲ್ಲಿ ದುಡಿದಿರುವ ಕಿಟ್ಟೆಲ್, ಆರ್. ನರಸಿಂಹಾಚಾರ್. ಎಂ.ಗೋವಿಂದ ಪೈ ಮುಂತಾದವರ ಪಾಂಡಿತ್ಯ ಪರಂಪರೆಯ ವಾರಸುದಾರರೆನಿಸಿದ್ದಾರೆ.

ಇದುವರೆಗೂ ಶಾಸ್ತ್ರೀಗಳ ಬರವಣಿಗೆಯನ್ನು ಒಟ್ಟಾಗಿ ಸಂಕಲಿಸಿದರೆ ಅದು ೧೦,೦೦೦ ಪುಟಗಳ ವ್ಯಾಪ್ತಿಯನ್ನು ಮೀರುತ್ತದೆ. ಶಾಸ್ತ್ರೀಗಳ ನಿತ್ಯ ಕಾಯಕದ ಫಲವಿದು. ಅವರ ಸಂಶೋಧನಾ ಸಾಗರವನ್ನು ಒಳಹೊಕ್ಕು ನೋಡುವ ಎದೆಗಾರಿಕೆ ಎಷ್ಟು ಜನರಲ್ಲಿದೆಯೋ ತಿಳಿಯದು. ಶಬ್ದ ಶಾಸ್ತ್ರಜ್ಞತೆ, ಶಬ್ದ ವಿಹಾರ ಗುಣ, ಶಬ್ದನಿಷ್ಪತ್ತಿ, ಬೆಳವಣಿಗೆ, ಪ್ರಯೋಗ, ಅರ್ಥಗಳೆಡೆಗಿನ ಅದಮ್ಯ ಕುತೂಹಲ– ಈ ಎಲ್ಲವೂ ಆ ಸಾಗರದಲ್ಲಿ ದೊರಕುವ ಮುತ್ತುಗಳು. ಹಲ್ಮಿಡಿ ಶಾಸನ, ಬಾದಾಮಿ ಶಾಸನ, ಕುಣನ್ವಲ ಶಾಸನಗಳಿಗೆ ಶಾಸ್ತ್ರೀಗಳು ಎಂತವರೂ ತಲೆದೂಗುವ ಅರ್ಥ ಬರೆದಿದ್ದಾರೆ. ಬಳೆಮರ್ದು, ಚಕ್ಕಣ, ಖಿಲ್ವಾಯಿತ, ಗಂಧವಾರಣ ಎಂಬ ಶಬ್ದಗಳಿಗೆ ಅವರು ನೀಡಿರುವ ವಿವರಣೆಗಳು ಬೆರಗು ಮೂಡಿಸುವಂಥದ್ದು. ವಿವಿಧ ಮೂಲಗಳಿಂದ ತಂದ ಆಧಾರ ಸಾಮಗ್ರಿ, ವ್ಯಾಕರಣ ಹಾಗೂ ಭಾಷಾ ಸೂಕ್ಷ್ಮತೆಗಳಿಂದ ಮಾಡಿರುವ ವಿಷಯ ವಿಶ್ಲೇಷಣೆ, ಸಂದೇಹ ನಿವಾರಿಸಿ ನೀಡುವ ಅರ್ಥನಿರ್ಣಯ ವಿಸ್ಮಯಗೊಳಿಸುವಂತದ್ದು. ಶಾಸ್ತ್ರೀಗಳ ನಿಷ್ಕರ್ಷೆ–ನಿರ್ಣಯಗಳು ಅಂತಿಮವಾದವುಗಳು. ಹಾ.ಮಾ. ನಾಯಕರು ಹೇಳುವಂತೆ ಶಾಸ್ತ್ರೀಗಳು ಆರಂಭದಲ್ಲಿ ಪತ್ತೇದಾರಿ ಕಾದಂಬರಿಗಳನ್ನು ಬರೆದರೂ ಅವನ್ನು ಪ್ರಕಟಿಸಲಿಲ್ಲ, ಆದರೆ ಅವರ ಪತ್ತೇದಾರಿ ಸಾಹಸ–ಕವಿಯ ವರ್ಷ ಹುಡುಕುವುದರಲ್ಲಿ, ಪದದ ಅರ್ಥ ಶೋಧಿಸುವುದರಲ್ಲಿ, ಪಠ್ಯದ ಖಚಿತತೆಯನ್ನು ನಿರ್ಧರಿಸುವುದರಲ್ಲಿ, ಛಂದಸ್ಸಿನ ಅರೆಕೊರೆಗಳನ್ನು ಗುರುತಿಸಿ ಸರಿಪಡಿಸುವುದರಲ್ಲಿ–ಸತತವಾಗಿ ನಡೆದಿದೆ. ಈ ಪತ್ತೇದಾರಿ ಸಾಹಸದಿಂದ ಅನೇಕ ಕೇಸುಗಳು ಖುಲಾಸೆಯಾಗಿವೆ.

ಕನ್ನಡ ಛಂದಃಸ್ವರೂಪ, ಕನ್ನಡ ಛಂದೋವಿಹಾರ, ಕನ್ನಡ ಛಂದೋಮೀಮಾಂಸೆ, ಮಹಾಕಾವ್ಯಲಕ್ಷಣ, ಶ್ರೀವತ್ಸ ನಿಘಂಟು, ಶಬ್ದಾರ್ಥ ವಿಹಾರ, ಗಜಶಾಸ್ತ್ರ ಶಬ್ದಕೋಶ, ಕನ್ನಡ ಚೆನ್ನುಡಿ, ಉದಾರಚರಿತರು–ಉದಾತ್ತ ಪ್ರಸಂಗಗಳು, ಮೆಲುಗಾಳಿಯ ಮಾತುಗಳು ಮುಂತಾಗಿ ಐವತ್ತಕ್ಕೂ ಹೆಚ್ಚು ಕೃತಿಗಳನ್ನು ಶಾಸ್ತ್ರೀಗಳು ಪ್ರಕಟಿಸಿದ್ದಾರೆ. ಸಪ್ನಾ ಬುಕ್ ಹೌಸ್ ಶಾಸ್ತ್ರೀಗಳ ಬಹುತೇಕ ಬರವಣಿಗೆಯನ್ನು ಶಾಸ್ತ್ರೀಯ ಎಂಬ ಹತ್ತು ಸಂಪುಟಗಳಲ್ಲಿ ಹೊರತಂದಿದೆ. ಇವುಗಳಲ್ಲಿ ಮೈಸೂರಿನ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯು ೧೯೮೭ರಲ್ಲಿ ಪ್ರಕಟಿಸಿರುವ 'ಕನ್ನಡ ಚಿತ್ರಕಾವ್ಯ' ಶಾಸ್ತ್ರೀಗಳ ಆಚಾರ್ಯ ಕೃತಿಯೆಂದೇ ಬಣ್ಣಿತವಾಗಿದೆ. ಕಾವ್ಯರಚನೆಯ ಒಂದು ಪ್ರಕಾರ ಚಿತ್ರಕಾವ್ಯ. ಈ ಪ್ರಕಾರವು ತುಂಬ ಸಂಕೀರ್ಣವಾದುದು. ಸಂಸ್ಕೃತ ಸಾಹಿತ್ಯದಲ್ಲಿ ಸಮೃದ್ಧವಾದ ಚಿತ್ರಕಾವ್ಯ ನಮ್ಮ ಹಳೆಯ ಕವಿಗಳನ್ನು ಸಾಕಷ್ಟು ಆಕರ್ಷಿಸಿದೆ. ಇದು ಚಮತ್ಕಾರ ಸೃಷ್ಟಿ, ಭಾಷೆ ಮತ್ತು ಅಕ್ಷರಗಳೊಡನೆ ಆಡುವ ಆಟ. ಇದು ಚಿತ್ರವೂ ಹೌದು, ಚಿತ್ರಬಂಧವೂ ಹೌದು. ಚಿತ್ರಕಾವ್ಯ ಪಾಂಡಿತ್ಯದ ಒಗಟು. ನಿಗೂಢವಾದದ್ದನ್ನು ಕಂಡರೆ ಅದನ್ನು ಒಡೆಯುವ ಆಸೆ ಯಾರಿಗಿರುವುದಿಲ್ಲ? ಒಡೆದಾಗ ಆಗುವ ಸಂತೋಷ ಯಾವ ಬಗೆಯದು? ಇಂಥ ಕಾವ್ಯದ ಸ್ವರೂಪವನ್ನೂ ಬೆಳವಣಿಗೆಯನ್ನೂ ಕನ್ನಡ ಚಿತ್ರಕಾವ್ಯ ತನ್ನ ಒಂಬತ್ತು ಅಧ್ಯಾಯಗಳಲ್ಲಿ ಸುದೀರ್ಘವಾಗಿಯೂ ಸೋದಾಹರಣವಾಗಿಯೂ ವಿವರಿಸಿದೆ. ಕನ್ನಡದಲ್ಲಿ ಈ ಬಗೆಯ ಪುಸ್ತಕಗಳಲ್ಲಿ ಇದೇ ಮೊದಲನೆಯದು. ಇದನ್ನು ಮೀರಿಸುವ ಪುಸ್ತಕ ಬಹುಶಃ ಬೇರೆ ಯಾವ ಭಾಷೆಯಲ್ಲೂ ಬಂದಿರಲಾರದು. ಎಂಬ ಹೆಗ್ಗಳಿಕೆಯೂ ಕನ್ನಡ ಚಿತ್ರಕಾವ್ಯಕ್ಕೆ ಸಂದಿದೆ. ಈ ಕೃತಿಯಲ್ಲಿ ಶಾಸ್ತ್ರೀಗಳಿಗಿರುವ ಆಳವೂ ವಿಪುಲವೂ ಆದ ವಿದ್ವತ್ತು, ಸಂಸ್ಕೃತ–ಕನ್ನಡ ಗ್ರಂಥಗಳನ್ನು ಲೀಲಾಜಾಲವಾಗಿ ಉಲ್ಲೇಖಿಸುವ ಸಾಮರ್ಥ್ಯ ಬೆರಗುಗೊಳಿಸುವಂಥವು.

ಶಾಸ್ತ್ರೀಗಳ ಪರಂಪರೆಯನ್ನು ಮುಂದುವರೆಸುತ್ತಿರುವ ಮತ್ತೋರ್ವ ಗಣ್ಯವಿದ್ವಾಂಸರಾದ ಡಾ.ಎನ್.ಎಸ್. ತಾರಾನಾಥ ಅವರು ಅಭಿಪ್ರಾಯಪಟ್ಟಿರುವಂತೆ ಛಂದಸ್ಸಿನ ಕ್ಷೇತ್ರದಲ್ಲಿ ಅವರಷ್ಟು ಅವರ ಸಮಕಾಲೀನ ವಿದ್ವಾಂಸರು ಕೆಲಸ ಮಾಡಿಲ್ಲ. ಛಂದೋಂಬುಧಿಯ ಪರಿಷ್ಕರಣ, ಛಂದಃ ಕೋಶ ರಚನೆ, ಛಂದೋಮೀಮಾಂಸೆ, ಛಂದಃ ಸ್ವರೂಪ ನಿರೂಪಣೆ ಅವರು ಮಾಡಿರುವ ದೊಡ್ಡ ಕೆಲಸಗಳು. ಶಾಸ್ತ್ರೀಗಳ ಕನ್ನಡ ಛಂದಸ್ಸ್ವರೂಪ ನಮ್ಮ ಛಂದಃಶಾಸ್ತ್ರ ಕ್ಷೇತ್ರದ ಮೈಲುಗಲ್ಲು. ೭೦೦ ಪುಟಗಳ ಈ ಕೃತಿಯಲ್ಲಿ ಪ್ರಾಚೀನ-ಆಧುನಿಕ, ಸಂಸ್ಕೃತ, ಕನ್ನಡ ಛಂದಸ್ಸಿನ ತತ್ತ್ವ, ಸ್ವರೂಪ ನಿರೂಪಿತವಾಗಿದೆ. ಇಲ್ಲಿ ಸಂಜ್ಞೆ, ಮೂಲತತ್ತ್ವ, ಆಕರ, ವೈದಿಕ, ಲೌಕಿಕ, ಮಾತ್ರಾ, ಅಂಶ ಹಾಗೂ ಹೊಸಗನ್ನಡ ಛಂದಸ್ಸಿಗೆ ಸಂಬಂಧಿಸಿದ ಆರು ಅಧ್ಯಾಯಗಳಿವೆ. ಶಾಸ್ತ್ರೀಗಳ ಛಂದೋಜ್ಞಾನ ಹಾಗೂ ವ್ಯಾಪಕ ಪ್ರಾಚೀನ ಕನ್ನಡ ವ್ಯಾಸಂಗಗಳು ಇಲ್ಲಿ ವ್ಯಕ್ತಗೊಂಡಿವೆ. ಛಂದಃಪ್ರಕಾರ ಸಮಗ್ರ ಪರಿಚಯವನ್ನು ಮಾಡಿಕೊಡುವ ಈ ಕೃತಿಯು ಶಾಸ್ತ್ರೀಗಳ ಹೆಸರನ್ನು ಛಂದಃಶಾಸ್ತ್ರದೊಂದಿಗೆ ಗಟ್ಟಿಯಾಗಿ ಬೆಸೆಸಿಬಿಟ್ಟಿದೆ.




ಇವುಗಳೊಂದಿಗೆ 'ಶ್ರೀವತ್ಸ ನಿಘಂಟು', 'ಸಾಹಿತ್ಯ ಮಂಥನ', 'ಶಬ್ದಾರ್ಥವಿಹಾರ', 'ಮಹಾಕಾವ್ಯಲಕ್ಷಣ', 'ಹಳೆಯ ಹೊನ್ನು', 'ಜೀವನ ಚರಿತ್ರೆಗಳು', 'ಸಂಪಾದಿತ ಗ್ರಂಥಗಳು', ಅನುವಾದ- ಈ ಎಲ್ಲವನ್ನೂ ಶಾಸ್ತ್ರೀಗಳನ್ನು ವಿದ್ವಾಂಸ ರತ್ನವಾಗಿಸಿದೆ. ಹಿಂದಿನ ವಿದ್ವಾಂಸರ ಅಭಿಪ್ರಾಯಗಳನ್ನು ಉಲ್ಲೇಖಿಸುವುದರಲ್ಲಿ ಸಮುಚಿತತೆಯಿಂದ ನೋಡುವ ಗುಣವೂ ಮಾದರಿಯಾದುದು. ಖಚಿತತೆ ಶಾಸ್ತ್ರೀಗಳ ಪಾಂಡಿತ್ಯದ ಲಕ್ಷಣ. ನಿಜವಾದ ಅರ್ಥದಲ್ಲಿ ಬೆಲೆಬಾಳುವ ಕಾಣಿಕೆಯನ್ನು ಶಾಸ್ತ್ರೀಗಳು ಕನ್ನಡಕ್ಕೆ ನೀಡಿರುವುದರಿಂದಲೇ ಅವರನ್ನು 'ಕನ್ನಡದ ಮೇರು' ಎಂದು ಗುರುತಿಸಲಾಗಿದೆ.

ಪ್ರಶಸ್ತಿ, ಗೌರವ, ಜನಪ್ರಿಯತೆ ಯಾವುದರ ಹಿಂದೆಯೂ ಶಾಸ್ತ್ರೀಗಳ ಮನಸ್ಸು ಹೋಗದು. ಯಾವ ಕ್ಷೇತ್ರದಲ್ಲಿ ಕನ್ನಡದ ಕೆಲಸಗಳಾಗಬೇಕಿವೆ? ಎಂಬುದನ್ನೇ ಸದಾ ಧ್ಯಾನಿಸುವ ಗುಣದ ಶಾಸ್ತ್ರೀಗಳು ನೂರ್ಕಾಲ ಬಾಳಲಿ.

ಮೊಬೈಲ್ : ೮೧೪೭೫೪೪೫೪

ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ ನಮ್ಮ ನಾಡಿನ ಗಣ್ಯ ವಿದ್ವಾಂಸರಲ್ಲಿ ಮುಖ್ಯರು. ಪ್ರೊ. ಡಿ.ಎಲ್. ನರಸಿಂಹಾಚಾರ್, ಪ್ರೊ. ತೀ. ನಂ. ಶ್ರೀಕಂಠಯ್ಯ, ಆ.ನೆ. ಉಪಾಧ್ಯೆ, ಮುಳಿಯ ತಿಮ್ಮಪ್ಪಯ್ಯ ಮುಂತಾದ ಘಟಾನುಘಟಿಗಳ ಮಾರ್ಗದಲ್ಲಿ ಮುಂದುವರಿದು, ಸ್ವಂತ ವಿದ್ವತ್ ಪ್ರಭೆಯ ಮೂಲಕ ಕನ್ನಡ ಶಾಸ್ತ್ರ ಸಾಹಿತ್ಯ ದಿಗಂತಗಳನ್ನು ವಿಸ್ತರಿಸಿದವರು. ವ್ಯಾಕರಣ, ಛಂದಸ್ಸು, ಕಾವ್ಯಮೀಮಾಂಸೆ, ನಿಘಂಟು, ಸಾಹಿತ್ಯ ವಿಮರ್ಶೆ, ಸಂಶೋಧನೆ, ಜೀವನ ಚರಿತೆ, ಗ್ರಂಥ ಸಂಪಾದನೆ, ಅನುವಾದ, ನಾಟಕ, ಪ್ರಬಂಧ ಮುಂತಾದ ಪ್ರಕಾರಗಳಲ್ಲಿ ಕೃಷಿ ಮಾಡುವ ಮೂಲಕ ನಾಡಿನ ಸಾಂಸ್ಕೃತಿಕ ಬದುಕನ್ನು ಶ್ರೀಮಂತಗೊಳಿಸಿದ್ದಾರೆ. ಎಂಬತ್ತಾರರ ಪ್ರಾಯದಲ್ಲಿ ತಮ್ಮ ದಣಿವರಿಯದ ಬರವಣಿಗೆಯಲ್ಲಿ ತೊಡಗಿರುವ ಶಾಸ್ತ್ರಿಯವರು ಆಧುನಿಕ ಕಾಲ ಮತ್ತು ಪ್ರಾಚೀನಕಾಲ ಸಾಹಿತ್ಯ ಸರಪಣಿಯ ಬಹುದೊಡ್ಡ ಕೊಂಡಿಯಂತಿದ್ದಾರೆ. ಸದಾ ಕನ್ನಡದ ಒಳಿತು-ಹಿತವನ್ನು ಚಿಂತಿಸುವ ಇವರು ಪ್ರಚಲಿತ ವಿದ್ಯಮಾನಗಳ ಬಗೆಗೂ ಎಚ್ಚರದ ಕಣ್ಣಾದವರು. ಸಂಚಯಕ್ಕಾಗಿ ನೀಡಿದ ಈ ಸಂದರ್ಶನದಲ್ಲಿ ನಾಡು-ನುಡಿಗಳ ಬಗೆಗಿನ ಕಾಳಜಿಯನ್ನು ತೆರೆದು ತೋರಿದ್ದಾರೆ.



ಡಾ.ಟಿ.ವಿ. ವೆಂಕಟಾಚಲಶಾಸ್ತ್ರೀಯವರ ಸಂದರ್ಶನ

ಡಾ. ಎಚ್.ಎಸ್. ಸತ್ಯನಾರಾಯಣ

■ **ನಿಮ್ಮ ಬದುಕನ್ನು ಪ್ರೇರೇಪಿಸಿರುವ ಪೂರ್ವಸೂರಿಗಳಲ್ಲಿ ಅತ್ಯಂತ ಪ್ರಾತಃಸ್ಮರಣೀಯರು ಯಾರು ಸಾರ್?**

– ಅನೇಕ ಜನ ವಿದ್ವಾಂಸ ರತ್ನರು ನೆನಪಿಗೆ ಬರುತ್ತಾರೆ. ಅವರುಗಳಲ್ಲಿ ಅತ್ಯಂತ ಮುಖ್ಯರೆಂದರೆ ಪ್ರೊ. ಡಿ. ಎಲ್. ನರಸಿಂಹಾಚಾರ್ ಅವರು. ಅವರ ಶಿಷ್ಯತ್ವ, ಪ್ರೀತಿ, ವಾತ್ಸಲ್ಯಗಳು ನನ್ನ ಪಾಲಿಗೆ ದೊರೆತದ್ದು ನನ್ನ ಬದುಕಿನ ಅದೃಷ್ಟಗಳಲ್ಲೊಂದು. ನನ್ನ ವೃತ್ತಿ ಜೀವನ, ಓದು, ಬರಹ, ಸಂಶೋಧನೆ ಎಲ್ಲವುಗಳಲ್ಲೂ ಅವರ ಮಾರ್ಗದರ್ಶನ ದೊಡ್ಡ ಪಾಲನ್ನು ಪಡೆದಿದೆ. ಪ್ರೊ. ಡಿ. ಎಲ್. ಎನ್., ತೀ. ನಂ. ಶ್ರೀ., ಎಂ.ಆರ್.ಶ್ರೀ., ಬಿ.ಎಂ.ಶ್ರೀ., ಗೋವಿಂದ ಪೈ, ಸೇಡಿಯಾಪು, ಎ. ಆರ್. ಕೃಷ್ಣಶಾಸ್ತ್ರಿಗಳು ಮುಂತಾದವರು ದಾರಿದೀಪವಾಗಿದ್ದಾರೆ. ನಾನು ಎಂ.ಎ. ಮಾಡಿದ ಮೇಲೆ ಕೆಲಸಕ್ಕೆ ಪ್ರಯತ್ನ ಮಾಡುವಾಗ ಪ್ರೊ. ಡಿ. ಎಲ್. ಎನ್. ಅವರು ಸ್ವತಃ ತಮ್ಮ ಮಗನ ಕೆಲಸ ಎಂಬ ಆಸಕ್ತಿಯಿಂದ ಪ್ರಯತ್ನಿಸಿದರು. ಕಷ್ಟದಲ್ಲಿದ್ದ ನನ್ನಲ್ಲಿ ಅವರು ತೋರಿದ ಅಂತಃಕರಣ ದೊಡ್ಡದು. ನನ್ನ ಪಿಎಚ್.ಡಿ. ಅಧ್ಯಯನದ ಮಾರ್ಗದರ್ಶಕರೂ ಆಗಿದ್ದರು. ಶಾಸ್ತ್ರ ಸಾಹಿತ್ಯದತ್ತ ನನ್ನ ಒಲವು ಅರಳಿದ್ದು ಡಿಎಲ್‌ಎನ್‌ರ ಪ್ರೇರಣೆಯಿಂದಲೇ ಎಂಬುದನ್ನು ಹೇಳದಿರಲಾರೆ. ಅವರು ಮಾಡುತ್ತಿದ್ದ ಕ್ಲಿಷ್ಟಕರವಾದ ಕೆಲಸಗಳಿದ್ದವಲ್ಲ, ಛಂದಸ್ಸು, ವ್ಯಾಕರಣ, ಸಾಹಿತ್ಯ ಚರಿತ್ರೆ, ನಿಘಂಟು ವಿಚಾರ ಇವೆಲ್ಲವೂ ನನಗೆ ಸ್ಫೂರ್ತಿ ಒದಗಿಸಿದವು. ಜೊತೆಗೆ ಅವರು ನಿಘಂಟು ಕೆಲಸದ ಪ್ರಧಾನ ಸಂಪಾದಕರಾಗಿದ್ದಾಗ ನನ್ನನ್ನು ಅದರಲ್ಲಿ ತೊಡಗಿಸಿ, ಶಬ್ದಸಂಗ್ರಹಕ್ಕೆ ಅವಕಾಶ ಮಾಡಿಕೊಟ್ಟರು. ನಾನು ಬಿಎಂಶ್ರೀ, ಮುದ್ದಣ, ಸಂಸ, ಗೋವಿಂದ ಪೈ, ಕುವೆಂಪು ಮುಂತಾದವರ ಕೃತಿಗಳಿಂದ ಶಬ್ದ ಸಂಗ್ರಹಿಸಿ ಕೊಟ್ಟೆ. ಪ್ರಾಚೀನ ಕಾವ್ಯಗಳಿಂದಲೂ ಸಂಪಾದಿಸಿಕೊಟ್ಟೆ. ಸಂಭಾವನೆಯಾಗಿ ಸಿಗುತ್ತಿದ್ದ ಹದಿನೈದು ರೂಪಾಯಿಗಳಿಂದ ನನಗೆ ತುಂಬಾ ಸಹಾಯವಾಗುತ್ತಿತ್ತು. ಒಟ್ಟಾರೆಯಾಗಿ ಪ್ರೊ.ಡಿ.ಎಲ್.ಎನ್.ರ ಅಂತಃಕರಣ ನನ್ನ ಮನೋಧರ್ಮವನ್ನು ರೂಪಿಸಿತು. ಸರ್ವ ರೀತಿಯಲ್ಲೂ ನನಗೆ ಮಾದರಿ ಎನಿಸಿದವರು ಅವರು. ಶಿಷ್ಯರ ಜೊತೆ ಅಂತರ ಕಾಯ್ದುಕೊಳ್ಳದೆ ವಿಶ್ವಾಸದಿಂದ ಬರಮಾಡಿಕೊಳ್ಳುತ್ತಿದ್ದರು. ಕುವೆಂಪು ಅವರೊಂದಿಗೆ ಈ ಬಗೆಯ ಸಲಿಗೆ ನಮಗೆ ಸಾಧ್ಯವಾಗುತ್ತಿರಲಿಲ್ಲ. ಅವರದು ಶ್ರೀಮದ್ಗಾಂಭೀರ್ಯ. ಡಿಎಲ್‌ಎನ್ ಅವರ ಮನೆಗೆ ಯಾವಾಗ ಬೇಕಾದರೂ ಹೋಗಿಬರಬಹುದಾಗಿತ್ತು.

■ **ನಿಮ್ಮ ದಿನಚರಿಯ ಬಗ್ಗೆ ತುಂಬಾ ಕುತೂಹಲವಿದೆ. ಸ್ವಲ್ಪ ವಿವರಿಸುವಿರಾ?**

– ನಾನು ನಿವೃತ್ತನಾದ ಮೇಲೆ ದಿನಚರಿಯಲ್ಲೂ ಸ್ವಲ್ಪ ಬದಲಾವಣೆಯಾಗಿದೆ. ಪಾಠ ಮಾಡುತ್ತಿದ್ದಾಗಲೂ ಈಗಲೂ ಓದು ನನ್ನ ಮುಖ್ಯ ಕೆಲಸ. ಪಾಠ-ಪ್ರವಚನಗಳಿಗೆ ಸಿದ್ಧತೆ ಮಾಡಿಕೊಳ್ಳುವುದೂ ಇರುತ್ತಿತ್ತು. ಬೆಳಗ್ಗೆಯಿಂದ ರಾತ್ರಿ ಮಲಗುವ ತನಕವೂ ಓದುವುದು ನನ್ನ ದಿನಚರಿಯ ಭಾಗ. ವಾಕಿಂಗ್ ಅದೂ ಇದೂ ಎಂದು ಸ್ವಲ್ಪ ಅಭ್ಯಾಸವಿದ್ದರೂ ಸಮಯದ ಅಪವ್ಯಯ ಮಾಡುವುದು ನನಗೆ ಸಾಧ್ಯವಾಗುತ್ತಿರಲಿಲ್ಲ. ನನ್ನ ಪಾಲಿಗೆ ವಿಶ್ರಾಂತಿ ಎಂದರೆ ಓದುತ್ತಿರುವ ಒಂದು ಪುಸ್ತಕವನ್ನು ಪಕ್ಕಕ್ಕಿಟ್ಟು ಮತ್ತೊಂದನ್ನು ಕೈಗೆತ್ತಿಕೊಳ್ಳುವುದು. ಆಗಬೇಕಾಗಿರುವ ಎಷ್ಟೋ ಕೆಲಸಗಳು ಕಣ್ಣಮುಂದೆ ಸದಾ ಗೋಚರಿಸುತ್ತಿದ್ದವಾದ ಕಾರಣ ನನ್ನ ದಿನಚರಿಯನ್ನು ಓದು-ಬರಹಗಳು ಆವರಿಸಿಕೊಂಡುಬಿಟ್ಟಿವೆ. ಹೆಚ್ಚೂ ಕಡಿಮೆ ಈಗಲೂ

ಇದೇ ದಿನಚರಿ ನನ್ನದು. ಮೊದಲಿಂದಲೂ ಆಟಪಾಠಗಳಿಗೆ ನಾನು ಹೋದವನಲ್ಲ. ನನ್ನ ಸಹಪಾಠಿಯಾಗಿದ್ದ ಸುಜನಾ ಅವರು ''ಏನಯ್ಯ, ನಿನ್ನ ನೊಗವನ್ನು ಕಳಚೋದೆ ಇಲ್ಲವಲ್ಲ ಯಾವಾಗ್ಲೂ ಕಷ್ಟತಪಸ್ವಿ ನೀನು'' ಎಂದು ತಮಾಷೆ ಮಾಡುತ್ತಿದ್ದರು. ಭಾಷೆ, ವ್ಯಾಕರಣ, ಶಾಸ್ತ್ರ ಸಂಬಂಧಿತ ಕೊರತೆಗಳು ಸದಾ ನನ್ನನ್ನು ಕಾಡುತ್ತಿದ್ದವು. ಬೇರೆ ಭಾಷೆಗಳಲ್ಲಿ ಈ ವಿಚಾರದಲ್ಲಿ ಆಗಿರುವ ಕೆಲಸಗಳು ಕನ್ನಡದಲ್ಲೂ ಆಗಬೇಕೆಂಬ ಒಳ ಆಸೆಯೊಂದು ನನ್ನ ಮನದಲ್ಲಿ ಸದಾಕಾಲ ಇದ್ದು, ಅದು ಬಿಡುವಿನ ಸಮಯವನ್ನು ವ್ಯಾಪಿಸಿಕೊಳ್ಳುತ್ತಿತ್ತು. ನನ್ನ ಪಾಠಗಳೂ ವ್ಯಾಕರಣ, ಛಂದಸ್ಸು, ಗ್ರಂಥ ಸಂಪಾದನೆ ಈ ವಿಚಾರಗಳೇ ಆಗಿರುತ್ತಿದ್ದುದರಿಂದ ನನ್ನ ವೃತ್ತಿ-ಪ್ರವೃತ್ತಿಗಳೊಳಗೆ ಅವಿನಾಭಾವ ಸಂಬಂಧವಿದ್ದು ಎಲ್ಲವೂ ನನ್ನ ಅಧ್ಯಯನದ ಒಂದು ಭಾಗವೇ ಆಗಿರುತ್ತಿತ್ತು.

■ **ಪ್ರಾಚೀನ ಕಾವ್ಯಗಳನ್ನು ಅಭ್ಯಾಸ ಮಾಡುವಾಗ ನೀವು ಅದರ ಕಾವ್ಯಲಕ್ಷಣ, ಪದ ಪ್ರಯೋಗ, ಪದಾರ್ಥ, ಅಲಂಕಾರ ಮುಂತಾದ ಸಂಗತಿಗಳತ್ತ ಮುಖ್ಯ ಗಮನಹರಿಸುತ್ತೀರಿ. ಇದರಿಂದ ಕಾವ್ಯದ ರಸಾನುಭವಕ್ಕೆ ಭಂಗವೊದಗುವುದಿಲ್ಲವೆ? ಎಲ್ಲವನ್ನೂ ಸರಿದೂಗಿಸಿಕೊಂಡು ಹೋಗಲು ಎಂಥ ಸಿದ್ಧತೆ ಅಗತ್ಯ?**

– ಮೂಲಭೂತವಾಗಿ ಒಂದು ಕಾವ್ಯ ಅದು ರಗಳೆ ಇರಬಹುದು, ಕಂದ ಇರಬಹುದು, ರಸವನ್ನು ಸಂತೋಷವನ್ನು ನೀಡುವ ಉದ್ದೇಶವುಳ್ಳದ್ದು. ಕಾವ್ಯ ಲಕ್ಷಣ, ಪದಜ್ಞಾನ, ಪುರಾಣಜ್ಞಾನ ಎಲ್ಲವೂ ಇದ್ದಲ್ಲಿ ರಸಾನುಭವ ಇನ್ನಷ್ಟು ಉತ್ತುಂಗಕ್ಕೇರುವುದೇ ವಿನಾ ರಸಭಂಗದ ಪ್ರಶ್ನೆಯೇ ಅಲ್ಲಿ ಬರುವುದಿಲ್ಲ. ಪದವಿರಲಿ, ಪದ ವಿಭಜನೆಯಿರಲಿ, ಕಾವ್ಯದ ಬಂಧವಿರಲಿ, ಅಪರಿಚಿತ-ಸುಪರಿಚಿತ ಪದಗಳಿರಲಿ, ಇವುಗಳನ್ನೆಲ್ಲ ನಾವು ಮೊದಲು ಸ್ಪಷ್ಟಗೊಳಿಸಿಕೊಂಡಿರಬೇಕು. ಇದು ಮೊದಲ ಕೆಲಸ. ಪದ್ಯದ ಮೂಲತಃ ಆಶಯವನ್ನು ಗ್ರಹಿಸದೆ ಏನೋ ಒಂದನ್ನು ಗಾಳಿಯಲ್ಲಿ ತೇಲಿಬಿಟ್ಟಂತೆ ಅರ್ಥೈಸಿಬಿಡಬಾರದು. ಬಹಳ ಜನ ಹೀಗೇ ಮಾಡಿಬಿಡುತ್ತಾರೆ. ವಾಚ್ಯಾರ್ಥವನ್ನು ಒಂದೆರಡು ಬಾರಿ ಓದಿ ಸ್ಪಷ್ಟಪಡಿಸಿಕೊಂಡಾಗಲೇ ಕಾವ್ಯದ ಧ್ವನ್ಯಾರ್ಥ ನಿಮಗೆ ಹೊಳೆಯುವುದು. ಪ್ರಾಚೀನ ಕಾವ್ಯಗಳ ಎಷ್ಟೋ ತಪ್ಪು ವ್ಯಾಖ್ಯಾನಗಳನ್ನು, ಅರ್ಥ ವಿವರಣೆಯನ್ನು ನಾನು ಈ ದೃಷ್ಟಿಕೋನದಿಂದ ಸರಿಪಡಿಸಿರುವ ಅನೇಕ ಉದಾಹರಣೆಗಳನ್ನು ನೀವು ನನ್ನ ಬರವಣಿಗೆಯಲ್ಲಿ ಗಮನಿಸಿರಬಹುದು. ಪದ್ಯದ ಸೂಕ್ಷ್ಮಗಳನ್ನು ತೆಗೆಯುವಾಗ ಕವಿಯ ಆಶಯಕ್ಕೆ ಭಂಗ ಬಾರದಂತೆ, ನಿಷ್ಠೆ ಬಿಡದೆ ಮುಂದುವರಿಯಬೇಕಾಗುತ್ತದೆ. ಕಾವ್ಯ ರಚನಾಕ್ರಮದ ವ್ಯಾಕರಣಕ್ಕೂ ಮಹತ್ವ ನೀಡುವುದು ವ್ಯಾಕರಣವನ್ನು ಬೋಧಿಸುವ ನನ್ನ ಕರ್ತವ್ಯವೂ ಆಗಿತ್ತು. ಈ ಕ್ರಮದಿಂದಾಗಿ ಸಾವಿರ ಪ್ರಶ್ನೆಗಳನ್ನು ನಾನು ಕೇಳಬಹುದಾಗಿತ್ತು.

■ **ನೀವು ಆರಂಭದಲ್ಲಿ ವಿನೋದ ಮುಂತಾದ ಪತ್ರಿಕೆಗಾಗಿ ಹಾಸ್ಯ, ಲಘು ಪ್ರಬಂಧಗಳನ್ನು ಬರೆದುದುಂಟು. 'ಸದ್ದೆಂತೆಂಬರ ಗಂಡ' ಇತ್ಯಾದಿ ಸಂಕಲನಗಳು ಕುತೂಹಲ ಮೂಡಿಸಿದ್ದವು. ಆನಂತರ ಆ ಪ್ರಕಾರಗಳಲ್ಲಿ ಬರವಣಿಗೆಯನ್ನು ಮುಂದುವರೆಸಿಲಿಲ್ಲವೇಕೆ?**

– ಮೊದಮೊದಲು ಈ ಬಗೆಯ ಬರವಣಿಗೆ ನಡೆಸಿದ್ದುಂಟು. ವಿನೋದ, ಜನಪ್ರಗತಿಯಂತಹ

ಪತ್ರಿಕೆಗಳಿಗೆ ಬರೆಯುತ್ತಿದ್ದೆ. ಸಂಭಾವನೆಯಾಗಿ ಸಿಗುತ್ತಿದ್ದ ಎರಡು ರೂಪಾಯಿಯಿಂದ ನನಗೆ ತುಂಬಾ ಪ್ರಯೋಜನವಾಗುತ್ತಿತ್ತು. ಅವರುಗಳು ಸಂಭಾವನೆ ಕೊಡೋದನ್ನ ನಿಲ್ಲಿಸಿದ ಮೇಲೆ ನಾನೂ ಬರೆಯೋದನ್ನ ನಿಲ್ಲಿಸಬೇಕಾಯ್ತು. ಏನಾದರೂ ಬರೆಯಬಹುದು ಅನ್ನಿಸುತ್ತಿತ್ತು. ಮುಂದೆ ನನ್ನ ಗಮನ ಸಂಪೂರ್ಣವಾಗಿ ಶಾಸ್ತ್ರ ಸಾಹಿತ್ಯದತ್ತ ಗಂಭೀರವಾಗಿ ಹೊರಳಿ, ಅಲ್ಲೇ ನೆಲೆ ನಿಂತಿತು. ಮೆಲುಗಾಳಿಯ ಮಾತುಗಳು ಮುಂತಾದ ಬರಹಗಳನ್ನ ಆನಂತರ ಮಾಡಿದ್ದಿದೆ.

- **ನೀವು ಒಂದು ಪುಸ್ತಕಕ್ಕೆ ಛಂದೋವಿಹಾರ ಎಂದು ಹೆಸರಿಟ್ಟದ್ದೀರಿ. ನಮ್ಮೆಲ್ಲರ ಪಾಲಿಗೆ ಕಬ್ಬಿಣದ ಕಡಲೆಯಾಗಿರುವ ಛಂದಸ್ಸಿನ ಸಂಗತಿಗಳು ನಿಮ್ಮ ಪಾಲಿಗೆ ವಿಹಾರವಾಗುವ ಬಗೆ ಹೇಗೆ? ಛಂದಸ್ಸು ಮತ್ತು ಕಾವ್ಯಮೀಮಾಂಸೆ ಕ್ಷೇತ್ರದಲ್ಲಿ ನಿಮ್ಮ ಪಯಣದ ಅನುಭವಗಳೇನು?**

-(ನಗುತ್ತಾ) ವಿಷಯದ ಆಯ್ಕೆ ಯಾವಾಗಲೂ ನಮ್ಮ ಅಭಿರುಚಿಯನ್ನು ಅವಲಂಬಿಸಿರುತ್ತೆ. ಅಭಿರುಚಿಯ ಕೆಲಸಗಳು ಯಾವಾಗಲೂ ಸಂತೋಷ ಕೊಡುವುದರಿಂದ ಅದು ಕಷ್ಟವೆನಿಸದೆ ವಿಹಾರ ಆಗಬಹುದು. ಸಂತೋಷ ಕೊಡುವ ಕೆಲಸಗಳನ್ನೇ ಮಾಡಬೇಕು ಎನ್ನುವುದು ನನ್ನ ಧ್ಯೇಯ ಮತ್ತು ಧೋರಣೆ. ವ್ಯಾಕರಣ ಅಂದಕೂಡಲೇ ನನಗೆ ಕೇಶಿರಾಜನ ಶಬ್ದಮಣಿದರ್ಪಣದ ಜೊತೆ ಬಹಳ ಆಪ್ತವಾದ ಸಂಬಂಧ. ನನ್ನ ಪಾಲಿಗೆ 'ಶಬ್ದಮಣಿದರ್ಪಣ'ವು ಹೆಬ್ಬಾಗಿಲಿದ್ದಂತೆ. ಪಂಪನ ಭಾರತವಾಗಲಿ, ರನ್ನನ ಗದಾಯುದ್ಧವಾಗಲಿ ನಿಮಗೆ ಸರಿಯಾಗಿ ಅರ್ಥವಾಗಬೇಕಾದರೆ, ಅದರ ಸ್ವಾರಸ್ಯ ತಿಳಿಯ ಬೇಕಾದರೆ ಕೇಶಿರಾಜನ ವ್ಯಾಕರಣದ ನಿಯಮಗಳು ನಿಮ್ಮ ನೆರವಿಗೆ ಧಾವಿಸಿಬರುತ್ತವೆ. ಶಬ್ದಮಣಿದರ್ಪಣ ಇಲ್ಲದೇ ಹೋಗಿದ್ದರೆ ನಾನು ಹೇಳಿದ್ದೇ ಅರ್ಥ ಅನ್ನೋ ಹಂಗೆ ಆಗಿರೋದು. ವ್ಯಾಕರಣದೊಂದಿಗೆ ವಿಹಾರ ಸಾಧ್ಯವಾಗಿದ್ದರಿಂದಲೇ ಪ್ರಾಚೀನ ಕಾವ್ಯಗಳ ಓದು-ಗ್ರಹಿಕೆ ಸುಲಭ ಸಾಧ್ಯವಾಯಿತು ಎನ್ನುವ ತಿಳಿವಳಿಕೆ ನನ್ನದು. ಛಂದಸ್ಸಂಪುಟಗಳ ಚರಿತ್ರೆಯ ರಚನಾ ಕಾರ್ಯದ ಜೊತೆಗೆ ಕನ್ನಡ ಛಂದಸ್ಸು, ಕನ್ನಡ ಛಂದಃಸ್ವರೂಪ, ಕನ್ನಡ ಛಂದೋವಿಹಾರ, ಕನ್ನಡ ಛಂದೋಮೀಮಾಂಸೆ, ಛಂದೋಂಬುಧಿ, ಮಹಾಕಾವ್ಯ ಲಕ್ಷಣ, ಕನ್ನಡ ಚಿತ್ರಕಾವ್ಯ ಮುಂತಾದ ನನ್ನ ಕೃತಿಗಳು ಛಂದಸ್ಸು ಮತ್ತು ಕಾವ್ಯಮೀಮಾಂಸೆ ಕ್ಷೇತ್ರದಲ್ಲಿನ ನನ್ನ ಪಯಣದ ಮೈಲುಗಲ್ಲುಗಳು.

- **ನೀವು ಶಾಸ್ತ್ರಸಾಹಿತ್ಯದತ್ತ ಮುಖ್ಯ ಗಮನಹರಿಸಿದವರು. ಈ ಬಗೆಯ ಶ್ರದ್ಧೆ-ಒಲವುಗಳನ್ನು ಆ ಕಾಲದ ಎತ್ತರದ ಪ್ರತಿಭಾವಂತ ಲೇಖಕರಾಗಿದ್ದ ಕುವೆಂಪು, ಪುತಿನ, ಬೇಂದ್ರೆ ಮುಂತಾದವರ ಸಾಹಿತ್ಯದೊಂದಿಗೆ ತೋರಲು ಸಾಧ್ಯವಾಯಿತೆ?**

- ಪುತಿನ ಅವರ ಕವಿತೆಗಳ ಛಂದಸ್ಸು ಎಂಬ ನನ್ನ ಲೇಖನವನ್ನು ನೀವು ಗಮನಿಸಿದರೆ ತಿಳಿಯುತ್ತದೆ. ಪುತಿನ ಅವರ ಛಂದೋಪ್ರಯೋಗಗಳನ್ನು ನಾನು ಕೂಲಂಕಷವಾಗಿ ವಿಶ್ಲೇಷಿಸಿ ಅನುಸಂಧಾನ ಮಾಡಿರುವ ಬಗೆ ಗೋಚರಿಸುತ್ತದೆ. ಇದೇ ರೀತಿ ಕುವೆಂಪು ಅವರು 'ಶ್ರೀರಾಮಾಯಣದರ್ಶನಂ'ನಲ್ಲಿ ಬಳಸಿರುವ ಮಹಾಛಂದಸ್ಸಿನ ಬಗ್ಗೆಯೂ ವಿವರವಾಗಿ

ಚರ್ಚೆ ಮಾಡಿದ್ದೇನೆ. 'ಕುವೆಂಪು ಛಂದೋವಿಚಾರ ಲಹರಿ' ಎಂಬ ನನ್ನ ಬರಹ ಓದಿದರೆ ನಿಮಗೆ ತಿಳಿಯುತ್ತದೆ. ಮಹಾಕಾವ್ಯದ ಛಂದಸ್ಸಿನ ಕುರಿತು, ಚಿತ್ರಾಂಗದ ಛಂದಸ್ಸಿನ ಕುರಿತು ಕುವೆಂಪು ಅವರೊಂದಿಗೇ ಚರ್ಚೆಗಳನ್ನು ನಡೆಸುತ್ತಿದ್ದೆ. ಅವರೂ ಅದನ್ನು ದಾಖಲಿಸಿರುವುದುಂಟು. ನಾನೂ ಮಾಡಿದ್ದೇನೆ. ಪುತಿನ ಶ್ರೀಹರಿಚರಿತೆ ಬರೆದಾಗ ನೋಡಿಕೊಡುವಂತೆ ಒಂದೆರಡು ಬಾರಿ ಕೇಳಿದ್ದರು. ಆಗ ನಾನು ಸಾಹಿತ್ಯ ಚರಿತ್ರೆಯ ಸಂಪುಟಗಳ ಜವಾಬ್ದಾರಿ ಹೊತ್ತಿದ್ದರಿಂದ ಇದಕ್ಕೆ ಸಮಯ ಕೊಡಲಾಗಲಿಲ್ಲ. ಬಿಳಿಗಿರಿಯವರು ಅದನ್ನು ನಿರ್ವಹಿಸಿದರು. ಶ್ಲೋಕ ಛಂದಸ್ಸಿನಲ್ಲಿ ಪುತಿನ ಅವರು ಮಾಡಿರುವ ಪ್ರಯೋಗಗಳನ್ನು ವಿಮರ್ಶಿಸಿದ್ದೇನೆ. ಆಧುನಿಕ ವಸ್ತುವನ್ನು ಆಯ್ದುಕೊಂಡು ಪ್ರಾಚೀನ ಛಂದಸ್ಸಿಗೆ ಅಳವಡಿಸುವಾಗ ಪುತಿನ ನಿಯಮ ಉಲ್ಲಂಘನೆ ಮಾಡಿರುವ ಬಗ್ಗೆ ನಾನು ಉಲ್ಲೇಖಿಸಿದಾಗ ಅವರು ಪತ್ರ ಬರೆದು ವಿವರಿಸಿದ್ದೂ ಇದೆ. ಪುತಿನ ಅವರ ಕಾವ್ಯಪ್ರಯೋಗಗಳ ಬಗೆಗೆ ನಮ್ಮ ವಿದ್ವತ್‌ಲೋಕವನ್ನು ಮರುಓದಿಗೆ ಒಳಪಡಿಸಬೇಕಾಗಿದೆ.

■ **ನೀವು ಸಂಶೋಧನಾ ಕ್ಷೇತ್ರಕ್ಕೆ ಕಾಲಿರಿಸುವ ಸಮಯದಲ್ಲಿ ಸಂಶೋಧನಾ ವಿಧಿವಿಧಾನಗಳನ್ನು ವಿವರಿಸುವ ಕೃತಿಗಳು ಪ್ರಕಟವಾಗಿರಲಿಲ್ಲ. ಕಲಬುರ್ಗಿ, ಚಿದಾನಂದಮೂರ್ತಿ, ಶಿರೂರ ಮುಂತಾದವರ ಕೃತಿಗಳು ಆಮೇಲೆ ಬಂದಂತಹವುಗಳು. ಈಗಂತೂ ಸಂಶೋಧನಾ ವೈಧಾನಿಕತೆಯನ್ನು ವಿವರಿಸುವ ಕೃತಿಸರಣಿಗಳನ್ನೇ ಹಂಪಿ ವಿವಿಯ ಪ್ರಸಾರಾಂಗ ಹೊರತಂದಿದೆ. ವೈಧಾನಿಕತೆಯ ಸಿದ್ಧಮಾರ್ಗಗಳೇ ಇಲ್ಲದ ಸಂದರ್ಭದಲ್ಲಿ ನಿಮ್ಮ ಸಂಶೋಧನೆಯ ದಾರಿ ತೆರೆದುಕೊಂಡಿದ್ದು ಹೇಗೆ?**

- ನಿಮ್ಮ ಮಾತು ನಿಜ. ನೀವು ಹೇಳಿದ ಎಲ್ಲಾ ಕೃತಿಗಳೂ ಈಚಿನವು. ಹೇಗೆ ಸಂಶೋಧನೆ ಮಾಡಬೇಕು ಸಾರ್? ಎಂದು ನಾನೊಮ್ಮೆ ನರಸಿಂಹಾಚಾರ್ ಬಳಿ ಕೇಳಿದಾಗ ಅವರು ನೀನು ಕೆಲಸ ಮಾಡುತ್ತಾ ಹೋದರೆ, ನಿನಗೇ ದಾರಿ ಕಾಣಿಸುತ್ತದೆ ಎಂದಿದ್ದರು. ಅದರಂತೆಯೇ ನನಗೆ ತೋಚಿದ ಹಾಗೆ ಕೆಲಸ ಮಾಡುತ್ತಾ ಹೋದೆ. ಅದೇ ನನ್ನ ಸಂಶೋಧನಾ ಮಾರ್ಗವಾಗಿತ್ತು. ಸಮಸ್ಯೆಗಳನ್ನು ತರ್ಕಬದ್ಧವಾಗಿ ಅಭ್ಯಾಸ ಮಾಡಿ, ಅಲ್ಲಿಯ ಅರ್ಥ-ಆಶಯ-ತತ್ತ್ವಗಳನ್ನು ಕಂಡುಹಿಡಿಯಲು ಪ್ರಾಮಾಣಿಕವಾಗಿ ಪ್ರಯತ್ನಿಸುವುದು ಸಂಶೋಧನೆಯ ಸರಿಯಾದ ದಾರಿ. ಸಂಶೋಧಕನ ಚಿಂತನ-ಮಂಥನಗಳ, ಪ್ರಯೋಗ ಪರಿಶ್ರಮಗಳ ಫಲವಾಗಿ ಈವರೆಗೆ ಪ್ರಕಟವಾದ ಅರ್ಥ-ಆಶಯ-ತತ್ತ್ವಗಳಿಗೆ ಸಮರ್ಥನೆ ದೊರೆಯಬಹುದು. ಅವುಗಳಿಗೆ ಹೆಚ್ಚಿನ ಪರಿಷ್ಕಾರ ಸಾಧ್ಯವಾಗಬಹುದು. ಇಲ್ಲವೆ ಹೊಸ ಆವಿಷ್ಕಾರವೇ ಹೊಮ್ಮಬಹುದು. ಅಧ್ಯಯನಕ್ಕೆ ಎತ್ತಿಕೊಂಡ ಯಾವುದೇ ಜ್ಞಾನಶಾಖೆಗೆ ಇವುಗಳಿಂದ ಒದಗುವ ಪ್ರಯೋಜನ ಪರಿಣಾಮದಲ್ಲಿ ಒಟ್ಟು ಸಮುದಾಯದ ಲೌಕಿಕ ಸೌಲಭ್ಯಗಳಿಗೆ, ಸಾಂಸ್ಕೃತಿಕ ಉನ್ನತಿಗೆ ದಾರಿ ಮಾಡುವುದೇ ಆಗಿದೆ. ಹಂಪಿ ವಿವಿಯ ಸಂಶೋಧನಾ ವೈಧಾನಿಕತೆಯ ಪ್ರಕಟಣೆಗಳು ಇಂಗ್ಲಿಷಿನ ಅನುವಾದಗಳಂತಿದ್ದು ಸಂವಹನ ದೃಷ್ಟಿಯಿಂದ ಸುಲಭವಾಗಿಲ್ಲ. ಸಂಶೋಧನೆಯ ಫಲಿತಗಳು ಮೇಲೆ ಹೇಳಿದಂತೆ ಅನುಭವದಿಂದ ಸಾಧ್ಯವಾಗಬೇಕು. ಪುಸ್ತಕ ಓದಿಕೊಂಡು ಈಜು ಕಲಿಯಲಾಗದು. ಅದರಂತೆಯೇ ಸಂಶೋಧನೆ ಕೂಡ. ಹಿರಿಯರ ಸಂಶೋಧನಾ ಮಾದರಿಗಳಿವೆ. ಅವುಗಳೊಂದಿಗೆ ಅನುಸಂಧಾನ ಮಾಡಬೇಕು.

■ **ಇಂದಿನ ದಿನಗಳಲ್ಲಿ ಕನ್ನಡದ ವಿದ್ವತ್ ಪರಂಪರೆ ನಶಿಸಿಹೋಗುತ್ತಿದೆಯೇ? ಇದಕ್ಕೆ ಕಾರಣಗಳೇನು? ನೀವು ಭರವಸೆಯಿಂದ ಕಾಣಬಹುದಾದ ಹೊಸ ತಲೆಮಾರಿನ ವಿದ್ವಾಂಸರ ಹೆಸರು ಹೇಳಬಹುದೆ?**

– ಇತ್ತೀಚಿನವರ ಬರಹಗಳನ್ನು ನಾನು ಓದುವುದು ಕಡಿಮೆ. ಆದರೆ ಒಬ್ಬನ ವಿದ್ವತ್ತನ್ನು ಗುರುತಿಸಲು, ರೂಪಿಸಲು ತಕ್ಕ ವಾತಾವರಣ ನಿರ್ಮಾಣವಾಗಬೇಕು. ಮಹಾಕಾವ್ಯಗಳನ್ನು ವಿದ್ವಾಂಸ ಬಲ್ಲವನಾಗಿರಬೇಕು. ಒಂದಕ್ಕಿಂತ ಹೆಚ್ಚಾದ ದ್ರಾವಿಡ ಭಾಷೆಗಳ ಪರಿಜ್ಞಾನವನ್ನು ಪಡೆದಲ್ಲದೆ ನಮ್ಮ ಭಾಷಾ ಸಾಹಿತ್ಯಗಳ ಸಂಶೋಧನೆಗೆ ಬಲಿ ಬರುವುದಿಲ್ಲ. ಫಲ ಸಿಗುವುದಿಲ್ಲ. ಮೂಲ ಆಕರಗಳನ್ನು ಮೊರೆಹೊಕ್ಕು ಹಳೆಯ ವಿದ್ವತ್ ಪತ್ರಿಕೆಗಳಲ್ಲಿಯ ಶೋಧಗಳನ್ನು ಲಕ್ಷಿಸಿ, ಆಯಾ ಕ್ಷೇತ್ರದ ವಿದ್ವಾಂಸರಲ್ಲಿ ಚರ್ಚಿಸಿ, ಸಂಶೋಧನೆಯಲ್ಲಿ ಸತ್ತ್ವವನ್ನು ಸಂಪಾದಿಸುವುದಕ್ಕೆ ನಮ್ಮ ಸಂಶೋಧಕರು ಶ್ರಮಿಸಬೇಕಾಗಿದೆ. ಈ ಬಗ್ಗೆ ನಾನು ಸಾಕಷ್ಟು ಬರೆದಿದ್ದೇನೆ. ತೇಲಿಕೆಯ ವ್ಯಾಖ್ಯಾನಗಳು ಸಂಶೋಧನೆಗಳಲ್ಲ. ಸಂಶೋಧನೆಯ ಮನೋಧರ್ಮದವರು ಇಂದಿನ ದಿನಗಳಲ್ಲಿ ಹೆಚ್ಚಾಗಿ ಕಾಣುತ್ತಿಲ್ಲ. ಸಂಶೋಧನೆಯ ಅಭಿರುಚಿಯುಳ್ಳವರನ್ನು ಹುಡುಕಬೇಕು. ಅಭಿರುಚಿಯನ್ನು ಇತರರು ಮೂಡಿಸಲು ಸಾಧ್ಯವಿಲ್ಲ. ಒಳಗಿನಿಂದ ಸ್ಫುರಿಸಬೇಕು. ಪ್ರೀತಿ ಇರಬೇಕು.

■ **ನಮ್ಮ ಪುರಾಣ ಮತ್ತು ಪ್ರಾಚೀನ ಕಾವ್ಯಗಳನ್ನು ನೋಡಬೇಕಾದ ಕ್ರಮ ಯಾವುದು? ಇತ್ತೀಚೆಗೆ ಪುರಾಣ ಕುರಿತ ಚರ್ಚೆಗಳು ಜಗಳಕ್ಕೆ ಕಾರಣವಾಗುತ್ತಿವೆಯಲ್ಲ?**

– ಪುರಾಣಗಳು ಚಾರಿತ್ರಿಕ ಸತ್ಯಗಳಲ್ಲ, ಭಾವಸತ್ಯಗಳು. ಅವು ಹೇಳುವ ಉಪಮೆ, ರೂಪಕಗಳನ್ನು ಅರ್ಥ ಮಾಡಿಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆ ಹೊರತು, ಅತಿ ವಿಜೃಂಭಣೆಯಾಗಲೀ, ಕೆಳಮಟ್ಟದ ನಿಂದನೆ-ದೂಷಣೆಗಳಾಗಲೀ ಎರಡೂ ಅತಿಗಳೇ. ಪುರಾಣಗಳು ಪಾರಂಪರಿಕವಾಗಿ ನಮ್ಮ ಸಂಸ್ಕೃತಿ ಮತ್ತು ನಾಗರೀಕತೆಗಳ ಮೇಲೆ ಪ್ರಭಾವ ಬೀರುತ್ತಾ ಬಂದಿರುವುದನ್ನು ನಿರಾಕರಿಸಲಾಗದು. ಜನಪ್ರಿಯತೆಗಾಗಿ ಬೇಕು ಬೇಕೆಂದೇ ಪುರಾಣಭಂಜನೆ ಮಾಡುವುದರಿಂದ ಸಾಮಾಜಿಕ ಅಶಾಂತಿಗೆ ಅವಕಾಶವಾಗುತ್ತದೆ. ಪುರಾಣಗಳ ಆಶಯಕ್ಕೆ ಇದರಿಂದ ಭಂಗವೊದಗಬಹುದು. ಮಾತನಾಡುವವರು ಸಾಮಾಜಿಕ ಹೊಣೆಗಾರಿಕೆ ಮುಖ್ಯ ಎಂಬುದನ್ನು ಮರೆಯಬಾರದು. ಪ್ರತಿಮಾದೃಷ್ಟಿಯಿಂದ ನೋಡತಕ್ಕದ್ದೆಂದು ಕುವೆಂಪು ಕಲಿಸಿಕೊಟ್ಟಿದ್ದಾರಲ್ಲ! ಬಾಹ್ಯವಾಗಿ ನೋಡದೆ ನಿರ್ಲಿಪ್ತ ಮನೋಭಾವದಿಂದ ಪುರಾಣಗಳನ್ನು ನೋಡಬೇಕು. ಉದಾಹರಣೆಗೆ ಹಾಲಿನ ತೊರೆ ಹರಿಯುತ್ತಿತ್ತು ಎಂಬುದನ್ನು ಸಮೃದ್ಧಿ ಇದೆ ಎಂದು ಭಾವಿಸಿದರೆ ಸಾಕು. ವಾಚ್ಯಾರ್ಥವನ್ನು ಹಿಡಿದು ಜಗ್ಗಾಡಬಾರದು. ಪುರಾಣಗಳೂ ಕೂಡ ಒಂದು ವಸ್ತುಸ್ಥಿತಿಗೆ, ವಾಚ್ಯವಾದ ಅನುಭವಕ್ಕೆ, ಸನ್ನಿವೇಶಕ್ಕೆ, ವ್ಯಕ್ತಿಗೆ, ವ್ಯಕ್ತಿತ್ವಕ್ಕೆ ಅಗಾಧವಾದ ಅನುಭವಗಳನ್ನು ಹೇಳುತ್ತವೆ. ಇವನ್ನೆಲ್ಲ ಲೋಕಸತ್ಯದ ದೃಷ್ಟಿಯಿಂದ ಪರಿಶೀಲಿಸಬಾರದೆಂದು ಪುಟ್ಟಪ್ಪನವರು ತರಗತಿಗಳಲ್ಲಿ ಬಹಳ ಸಾರಿ ಹೇಳುತ್ತಿದ್ದರು.

- **ಸೃಜನಶೀಲ ಸಾಹಿತ್ಯಕ್ಕೆ ಸಿಗುವ ಮನ್ನಣೆ, ಸೃಜನೇತರ ಶಾಖೆಗಳಿಗೆ ಸಿಗುತ್ತಿಲ್ಲವೆಂದು ನಿಮಗೆ ಅನ್ನಿಸಿದ್ದಿದೆಯೆ?**

– ಅನ್ನಿಸಿದ್ದು ನಿಜ. ಏಕೆಂದರೆ ಅಕಾಡೆಮಿ ಎಂದರೆ ವಿದ್ವತ್ ಜನರ ಸಭೆ ಎಂಬ ಅರ್ಥವಿದೆ. ಇವತ್ತಿನ ಅಕಾಡೆಮಿಗಳಲ್ಲಿ ಎಷ್ಟು ಜನ ವಿದ್ವಾಂಸರಿದ್ದಾರೆ? ಇವತ್ತಿರುವ ಸಾಹಿತ್ಯ ಅಕಾಡೆಮಿಯಲ್ಲಿ ಎಷ್ಟು ವಿದ್ವಾಂಸರು ಸದಸ್ಯರಾಗಿದ್ದಾರೆ? ಸಾಹಿತ್ಯ ಅಕಾಡೆಮಿ, ಸಾಹಿತ್ಯ ಪರಿಷತ್ತು ಎಲ್ಲವುಗಳ ಸ್ಥಿತಿಯೂ ಹೀಗಿರುವಾಗ, ಕಥೆ, ಕಾದಂಬರಿ, ಕವಿತೆ ಮುಂತಾದ ಪ್ರಕಾರಗಳೇ ಒಂದು ಭಾಷೆಯ ಸರ್ವಸ್ವ ಅಲ್ಲ. ಸಂಶೋಧನಾ ಸಾಹಿತ್ಯ, ಗ್ರಂಥ ಸಂಪಾದನೆ, ಹಸ್ತಪ್ರತಿಶಾಸ್ತ್ರ ವಿಚಾರ-ವಿಮರ್ಶಾ ಸಾಹಿತ್ಯ, ಪ್ರಾಚೀನ ಕಾವ್ಯ ಇದೆ. ಇವೆಲ್ಲವನ್ನೂ ಸರಿದೂಗಿಸಿಕೊಂಡು ಹೋಗುವ ಕೆಲಸಗಳನ್ನು ಮಾಡಬೇಕಲ್ಲವೇ? ಕಾಲದ ದೃಷ್ಟಿಯಿಂದ ಸೃಜನೇತರ ಶಾಖೆಗಳು ಹಿಂದಿನ ವಿಚಾರಗಳ ಕೆಲಸ ಮಾಡುತ್ತಿರಬಹುದು. ಆದರೆ ಮೌಲ್ಯಗಳ ದೃಷ್ಟಿಯಿಂದ ಕಡಿಮೆ ಇಲ್ಲವಲ್ಲ. ಉತ್ಕೃಷ್ಟ ದರ್ಜೆಯ ಸಂಶೋಧನೆಯೂ ಶ್ರೇಷ್ಠ ಕವಿಯ ಪ್ರತಿಭೆಗಿಂತ ಕಡಿಮೆ ದರ್ಜೆಯದೇನಲ್ಲವಲ್ಲ. ಆದರೂ ಸೃಜನೇತರ ಶಾಖೆಗಳಿಗೆ ಸಿಗುವ ಮನ್ನಣೆ, ಜನಾದರಣೆಗಳು ಅಲ್ಪ ಮಾತ್ರ. 'ಪದ್ಯ ಬರೆದೋನು ಸಾಯ್ತಾನೆ, ಗದ್ಯ ಬರೆದೋನು ಸಾಯ್ತಾನೆ' ಅಂತ ಕೆ.ಎಸ್. ನರಸಿಂಹಸ್ವಾಮಿಗಳು ಹೇಳುತ್ತಿದ್ದರು. ಕೆಲಸದ ಗುಣಮಟ್ಟ ಮುಖ್ಯ ಅಲ್ಲವೆ?

- **ಹಳಗನ್ನಡ-ನಡುಗನ್ನಡ ಕಾವ್ಯ ಕೃತಿಗಳನ್ನ ಗದ್ಯಾನುವಾದದ ಜೊತೆಗೆ ಸಾಹಿತ್ಯ ಪರಿಷತ್ತು ಪ್ರಕಟಿಸಿದೆ. ಗದ್ಯಾನುವಾದ, ಸರಳಗೊಳಿಸುವ ಪ್ರಕ್ರಿಯೆಯಿಂದ ಮೂಲ ಕಾವ್ಯದ ಬಂಧವನ್ನು ಸಡಿಲಗೊಳಿಸಿದಂತಾಗದೆ? ಕವಿಯ ಆಶಯಕ್ಕೆ ಇದರಿಂದ ಧಕ್ಕೆ ಒದಗದೆ?**

– ಈ ಗದ್ಯಾನುವಾದಗಳನ್ನು ನಾನು ಗಮನಿಸುತ್ತಾ ಬಂದಿದ್ದೇನೆ. ಯಾವುದೂ ಸುಖವಿಲ್ಲ! ಕಷ್ಟಪಟ್ಟು ಹಳಗನ್ನಡ ಓದಬಯಸದ ಕೆಲವು ಸೋಮಾರಿಗಳಿಗೆ ಇದರಿಂದ ಪ್ರಯೋಜನವಾಗಬಹುದು. ಅನುವಾದವಾದರೂ ಸಾರ್ಥಕ ರೀತಿಯಲ್ಲಿ ಪರಿಷ್ಕಾರಗೊಂಡಿರುತ್ತವೆಯೇ ಎಂದು ನೋಡಿದರೆ ಅಲ್ಲೂ ನಿರಾಶೆಯೇ. ನನ್ನ ಆತಂಕವೆಂದರೆ; ಇಂತಹ ಅನುವಾದಗಳು ಮೂಲ ಕವಿಗೆ ದ್ರೋಹ ಬಗೆಯಬಹುದೆಂಬುದು. ಓದುಗರೇ ಆ ಕಾವ್ಯವನ್ನು ಓದಿ ಅರ್ಥೈಸಿಕೊಳ್ಳುವ ಶಕ್ತಿ ಸಂಪಾದನೆ ಮಾಡಿಕೊಳ್ಳಬೇಕು. ಈಚೆಗೆ ಗೊತ್ತಿರುವ ವಿದ್ವಾಂಸರ ಬಳಿ ಕೇಳಿ ತಿಳಿದುಕೊಳ್ಳುವ ಪರಿಪಾಠವೂ ಕಡಿಮೆ. ನಾನು ಇತ್ತೀಚೆಗೆ ಹಳೆಗನ್ನಡ ವ್ಯಾಕರಣ ಪ್ರವೇಶಿಕೆ ಎಂಬ ಪುಸ್ತಕ ಬರೆದು, ಅದರಲ್ಲಿ ಮಾಡಿರುವ ಚರ್ಚೆಗಳನ್ನು ಗಮನಿಸಿ. ಅಭಿನವ ಪ್ರಕಾಶನದವರು ಅದನ್ನು ಪ್ರಕಟಿಸಿದ್ದಾರೆ. ಇತ್ತೀಚೆಗೆ ಪಿಯುಸಿ ಉಪನ್ಯಾಸಕರು ಒಂದಿಬ್ಬರು ಹಳೆಗನ್ನಡ ಬೋಧನಾಕ್ರಮದ ಬಗ್ಗೆ ಚರ್ಚಿಸಲು ಬಂದಿದ್ದರು. ಹೀಗೆ ಭೇಟಿ ಮಾಡಿದರೆ ಆಸಕ್ತರ ಜೊತೆ ಚರ್ಚಿಸಿ, ದಾರಿ ತೋರಬಹುದು. ಆಸಕ್ತಿಯೇ ಇಲ್ಲದವರಿಗೆ ಕಲಿಸುವುದು ಹೇಗೆ?

- **ಪ್ರಾಚೀನ ಕಾವ್ಯಗಳ, ಶಾಸ್ತ್ರಸಾಹಿತ್ಯದ ಅನೇಕ ತೊಡಕುಗಳನ್ನು ನೀವು ನಿವಾರಿಸಿದ್ದಿದೆ. ಈ ಬಗ್ಗೆ ಸ್ವಲ್ಪ ವಿವರಿಸುವಿರಾ?**

– ನನ್ನ ಅನೇಕ ಸಂಶೋಧನಾ ಬರಹಗಳನ್ನು ನೀವು ಓದಿದರೆ ಇದು ತಿಳಿಯುತ್ತದೆ. ಅನೇಕ ಕೇಸುಗಳನ್ನು ನಾನು ಮುಂದೆ ಚರ್ಚೆಗೆ ಅವಕಾಶವಿಲ್ಲದಂತೆ ತೀರ್ಮಾನಿಸಿಕೊಟ್ಟದ್ದೇನೆಂದು ಹಾ.ಮಾ. ನಾಯಕರು ಬರೆದದ್ದುಂಟು. ಸಮಸ್ಯೆಗಳಿಗೆ ನಾವು ಕೊಡುವ ಉತ್ತರಗಳು ಕನ್ನಡಿ ಹಿಡಿದಂತಿರಬೇಕು. ನೂರಾರು ಪ್ರಶ್ನೆಗಳನ್ನು ಬಿಡಿಸುವುದು ನನ್ನ ಆಸಕ್ತಿದಾಯಕವಾದ ವಿಚಾರವಾಗಿತ್ತು. ಆ ವಿವರಗಳನ್ನು ಇಲ್ಲಿ ಹೇಳಲಾರೆ. ಸಂಶೋಧನಾ ಲೇಖನಗಳ ಮೂಲಕ ಉತ್ತರ ಕೊಟ್ಟಿದ್ದೇನೆ. ಓದಿಕೊಳ್ಳಿ.

ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿಗಳು ಹೇಳುತ್ತಾರೆ...

- ಭಾರತೀಯ ಸಂಸ್ಕೃತಿಯ ಪ್ರಾಚೀನ ಪ್ರತಿನಿಧಿಗಳೆಂದೂ ಜೀವನಮೌಲ್ಯಗಳ ಪ್ರಸಾರಕರೆಂದೂ ಪಂಪ, ಕುಮಾರವ್ಯಾಸರನ್ನೂ, ಬಸವ-ಅಲ್ಲಮರನ್ನೂ, ಕನಕ-ಪುರಂದರರನ್ನೂ ಒಂದೊಂದು ನಿಟ್ಟಿನಲ್ಲಿ ಉಳಿಸಿಕೊಳ್ಳುವುದು ನಮ್ಮ ಅವಶ್ಯ ಕರ್ತವ್ಯ. ನಮ್ಮ ಭಾಷೆಯ ಜೀವಧ್ವನಿಗಳನ್ನು ಇಂಥವರಲ್ಲಿಯೇ ನಾವು ಕೇಳಬೇಕಾಗುತ್ತದೆ. ಈ ನಮ್ಮ ಜೀವನದಿಗಳಿಂದಲೇ ನಮ್ಮ ಹೃದಯದ ನೆಲ-ಹೊಲಗಳು, ಪಯಿರು-ಪಚ್ಚೆಗಳ ಸೊಂಪನ್ನು ಕಾಣಬೇಕಾಗಿದೆ. ಪ್ರಪಂಚದ ಪ್ರಾಚೀನಭಾಷೆಗಳಲ್ಲಿ ಇಂತಹ ಜೀವನದಿಗಳು ಒಂದೋ ಎರಡೋ ಇರುವಂತೆ ನಮ್ಮಲ್ಲಿಯೂ ಇವೆ. ಇವುಗಳಿಂದಲೇ ನಮ್ಮ ನಾಡು-ನುಡಿಗಳಿಗೆ ಒಂದು ನೆಲೆ, ಬೆಲೆ. ಉಳಿದ ಹಳೆಯ ಸಾಹಿತ್ಯಭಾಗದಲ್ಲಿ ಆಯ್ಕೆಯ ಸೂತ್ರವನ್ನು ಹಿಡಿಯಬಹುದು; ತಿರುಳನ್ನು ತೆಗೆದಿಟ್ಟುಕೊಂಡು ಲಾಭ ಪಡೆಯಬಹುದು.
- ವಿವಿಧ ಕ್ಷೇತ್ರಗಳಲ್ಲಿ ಗಣ್ಯತೆ ಗಳಿಸಿದವರು ಎಂದೂ ರಾಷ್ಟ್ರಜೀವನವನ್ನು ಪ್ರಭಾವಿಸಿದವರು ಎಂದೂ ಮಹಾನ್ ಸಾಧಕರು ಎಂದೂ ಖ್ಯಾತರಾದವರ ಹೆಸರುಗಳನ್ನು ವಿಶ್ವವಿದ್ಯಾನಿಲಯಗಳಿಗೆ ಇಡುತ್ತಿರುವುದು ಕಾಣುತ್ತಿದೆ. ಹೀಗೆ ಹೆಸರುಗಳನ್ನಿಡುವುದರಲ್ಲಿ ಶೈಕ್ಷಣಿಕ ಕಾರಣಗಳಿರಬಹುದು. ಅನ್ಯ ಕಾರಣಗಳೂ ಇರಬಹುದು. ಆದರೆ ಇದು ಸರಿಯೇ ಎಂದು ನಾವು ಗಂಭೀರವಾಗಿ ಯೋಚಿಸಬೇಕು. ವಿಶ್ವವಿದ್ಯಾನಿಲಯಗಳ ವಿಶ್ವತ್ವದ ವ್ಯಾಪ್ತಿಯನ್ನು ಹೀಗೆ ಮಾಡುವುದರಿಂದ ಸಂಕುಚಿತಗೊಳಿಸಿದಂತಾಗದೇ?
- ಹೊಸಗನ್ನಡದ ಕತೆ, ಕವಿತೆ, ಕಾದಂಬರಿ, ಪ್ರಬಂಧಗಳ ಚರಿತ್ರೆ ಬರೆಯಲು ಹೊರಟವರು ಸಾಮಾನ್ಯವಾಗಿ ೨೦ನೆಯ ಶತಮಾನದ ಆರಂಭದಿಂದ ಸಾಮಗ್ರಿಗಳನ್ನು ಒಗ್ಗೂಡಿಸಿಕೊಳ್ಳುವುದೇ ರೂಢಿ. ಆದರೆ ೧೯ನೆಯ ಶತಮಾನದ ಮಧ್ಯಭಾಗದ ಪ್ರಕಟಿತ ಸಾಹಿತ್ಯವನ್ನು ಅಲಕ್ಷಿಸುತ್ತಾರೆ. ಪುಸ್ತಕಗಳೂ, ಪತ್ರಿಕೆಗಳೂ ಈಗ ದುರ್ಲಭವೆಂದು ಕಾರಣ ಕೊಡುವುದು ಸುಲಭ. ಹುಡುಕಿದರೆ, ಈಗಲೂ ಅವು ತಮ್ಮ ಭಂಡಾರವನ್ನು ತೆಗೆದು ಮುಂದಿಡಲು ಸಿದ್ಧವಾಗಿದೆ.

- ಈಗ ಕನ್ನಡದಲ್ಲಿ ರಚಿತವಾಗಿರುವ ಪ್ರಾಚೀನ ಕಾವ್ಯ ಸಂಕಲನಗಳಲ್ಲಿ ಸಂಕಲಿತವಾಗಿರುವ ಪದ್ಯರಾಶಿಯಲ್ಲಿ ಜ್ಞಾತ ಅಜ್ಞಾತ ಆಕರಗಳ ಅಂದಾಜು ಲೆಕ್ಕ ನೋಡಿದರೆ, ನಾವು ನಮ್ಮ ಪ್ರಾಚೀನ ಕನ್ನಡ ಸಾಹಿತ್ಯದ ಸುಮಾರು ಅರ್ಧಭಾಗದಷ್ಟು ಕಳೆದುಕೊಂಡಿದ್ದೇವೆ ಎಂದು ತೋರುತ್ತದೆ.

- ಅಜ್ಞಾತ ಸಾಹಿತ್ಯ, ಅನುಪಲಬ್ಧ ಸಾಹಿತ್ಯ ಮತ್ತು ಅಲಕ್ಷಿತ ಸಾಹಿತ್ಯ ಇವನ್ನು ಮೂರು ಗಣಗಳೆಂದು ನಾನು ಗಣಿಸಿದ್ದೇನೆ. ಈ ವಿಷಯದಲ್ಲಿ ಕೆಲವರು ಗಣ್ಯವಿದ್ವಾಂಸರು ಸ್ವಲ್ಪ ಕೆಲಸ ಮಾಡಿದ್ದಾರೆ. ಈ ಕೆಲಸ ಮುಂದುವರಿಯಬೇಕಾಗಿದೆ.

- ಸಂಶೋಧನೆ ಎನ್ನುವುದು ಸಂಶೋಧಕನ ಒಂದು ಸಾರಸ್ವತ ತಪಶ್ಚರ್ಯೆ. ಒಂದು ಕುತೂಹಲ ಪ್ರಪಂಚ. ಈ ತಪಶ್ಚರ್ಯೆ ಕುತೂಹಲಗಳು ಏಕಕಾಲದಲ್ಲಿ ಆತನ ಭಾವನಾ ಶಕ್ತಿಯನ್ನೂ, ಬುದ್ಧಿಬಲವನ್ನೂ ನಿರೀಕ್ಷಿಸತಕ್ಕವು. ಇಲ್ಲಿ ಹೆಚ್ಚು ಶ್ರಮ, ಹೆಚ್ಚು ಸಮಯಗಳು ವಿನಿಯೋಗವಾಗಬೇಕಾಗುತ್ತವೆ.

- ಕನ್ನಡ ಭಾಷಾ ಶಿಕ್ಷಣದಲ್ಲಿ ಎಲ್ಲ ಹಂತಗಳಲ್ಲಿಯೂ ಭಾಷಾಶುದ್ಧಿಗೆ ಪ್ರಾಶಸ್ತ್ಯ ಇರಬೇಕು. ತಪ್ಪುಗಳ ಅಪಾಯವನ್ನೂ, ಅಸತ್ಯವನ್ನೂ ಮನವರಿಕೆ ಮಾಡುತ್ತಿರಬೇಕು. ವಾಚನ ವಿಧಾನ ವಾಗ್ಮಿತೆಗಳಿಗೆ ಪ್ರೋತ್ಸಾಹವಿರಬೇಕು. ಆಡುಮಾತು ಬರವಣಿಗೆಗಳಲ್ಲಿ ಚೊಕ್ಕತನ, ತರ್ಕಬದ್ಧತೆಗಳಿಗೆ ಗಮನ ಕೊಡಬೇಕು. ಕೆಟ್ಟ ಕನ್ನಡವನ್ನು ಆಡದಂತೆ, ಬರೆಯದಂತೆ ನೋಡಿಕೊಳ್ಳಬೇಕು. ಇದು ಪ್ರಾಥಮಿಕ ಮಾಧ್ಯಮಿಕ ಘಟ್ಟಗಳಲ್ಲಿ ಆದ್ಯತೆಯ ವಿಷಯ.

- ಭಾಷಾಪಠ್ಯಗಳ ನೇಮಕಾತಿಯಲ್ಲಿ ಆಧುನಿಕ ಪಠ್ಯಗಳ ಜೊತೆಜೊತೆಗೇ ಪ್ರಾಚೀನ ಮತ್ತು ಮಧ್ಯಕಾಲೀನವಾದವನ್ನು ಉಚಿತ ಪ್ರಮಾಣದಲ್ಲಿ ಆಯ್ದುಕೊಳ್ಳಬೇಕು. ಲಕ್ಷಣಭಾಗದ ಬೋಧನೆ ಪ್ರಾಯೋಗಿಕ ಇಲ್ಲವೆ ಅನ್ವಯಿಕವಾಗಿರಬೇಕು. ಕವಿಕೃತಿಗಳ ಹಿನ್ನೆಲೆ, ಪ್ರೇರಣೆ ಅಂತಹ ದೃಷ್ಟಿಗಳನ್ನು ಪೋಷಿಸುವಂತಿರಬೇಕು.

- ಬಹುಭಾಷೆಗಳ ಜ್ಞಾನ, ಬಹುಶಾಸ್ತ್ರಗಳ ಅಧ್ಯಯನ, ವಿಷಯ ಸಂಗ್ರಹಣೆಯ ಪ್ರವೃತ್ತಿ, ವಿಷಯಾಂತರ್ಗತ ಸಂಗತಿಗಳ ಹಾಗೂ ಸಮಸ್ಯೆಗಳ ಸ್ವರೂಪವನ್ನು ವಿಶ್ಲೇಷಿಸಬಲ್ಲ ವಿಮರ್ಶೆ, ವಿಚಕ್ಷಣೆ, ತರ್ಕಬದ್ಧವಾಗಿಯೂ, ಸರಸವಾಗಿಯೂ ಇರುವಂತೆ ಸಮುಚಿತಾಂಶಗಳನ್ನು ಸಂಯೋಜಿಸುವ ಕಲಾನೈಪುಣ್ಯ, ಪ್ರಾಮಾಣಿಕತೆ ಮತ್ತು ಶ್ರಮಸಹಿಷ್ಣುತೆ-ಇವು ಸಂಶೋಧಕನಿಗೆ ಇರಬೇಕಾದ ಗುಣಗಳು.

ಬೇಂದ್ರೆಯವರೊಡನೆ... ಒಂದು

ಕುಸುಮಾಕರ ದೇವರಗೆಣ್ಣೂರು

ನಾನು ಆಡುವ ಮಾತುಗಳು 50 ವರುಷಗಳ ಹಿಂದಿನವು. ಆಗ ನನಗಿನ್ನೂ ಪ್ರಾಯಶಃ ಹದಿಮೂರು ವರುಷಗಳು ಪೂರ್ತಿ ಮುಗಿದಿರಲಿಲ್ಲ. ಬೇಂದ್ರೆಯವರ ಕವನಗಳೆಂದರೆ ನನಗೆ ಪ್ರಾಣ. ಸೊಲ್ಲಾಪುರಕ್ಕೆ ಬಂದೊಡನೆ ಮಾಡಿದ ಮೊದಲ ಕೆಲಸ ಬೇಂದ್ರೆಯವರನ್ನು ಕಂಡದ್ದು. ಅಂದಿನಿಂದ ಅಂದರೆ 1944ರಿಂದ 1956ರವರೆಗೆ ಹನ್ನೆರಡು ವರುಷಗಳ ಅವಧಿ. ಈ ಒಂದು ಗಡುವನ್ನು, ಬೇಂದ್ರೆಯವರ ನಿಕಟ ಸಾನ್ನಿಧ್ಯದಲ್ಲಿ ಕಳೆದೆ. ತೀರ ಹತ್ತಿರದವನಾಗಿ, ಅವರ ಮನೆಯವರಲ್ಲಿ ಒಬ್ಬನಾಗಿ ಬೆಳೆದೆ. ಸಂಬಂಧಿಯಂತಾಗಿ ಇದ್ದೆ. ಈ ಅವಧಿಯಲ್ಲಿ ಅವರು ನನ್ನ ಜೊತೆ ಸಾಕಷ್ಟು, ಹೇಳಬರಲಾರದಷ್ಟು ಮಾತನಾಡಿದರು. ಹಲವಾರು ಸಂಗತಿಗಳನ್ನು ಕಲಿಸಿದರು. ಈ ಎಲ್ಲ ಮಾತುಗಳು ಸುಮಾರು ಐವತ್ತು ವರುಷಗಳ ಹಿಂದಿನವು. ಅವನ್ನೆಲ್ಲ ಶಬ್ದಗಳಲ್ಲಿ ಹಿಡಿದಿಡುವ ಪ್ರಯತ್ನ ಇದು.

ನಾನು ಬೇಂದ್ರೆಯವರನ್ನು ಏಕೆ ಕಂಡೆ? ಹೇಗೆ? ಇವೆಲ್ಲ ಇಲ್ಲಿ ಅಪ್ರಸ್ತುತ. ಅವರೊಡನೆ ಆದ ಸಂವಾದ, ಪಡೆದ ಲಾಭ, ಆ ಮಾತುಗಳನ್ನು ಇಲ್ಲಿ ಹಂಚಿಕೊಳ್ಳುತ್ತಿರುವೆ. ಇದು ಮಾತ್ರ ನಿಜ.

ಮಾತಿನಿಂದ ಬರಹಕ್ಕೆ-
ರಾಘವೇಂದ್ರ ದಿವಾಣಜಿ
(ಕೇಳಿಸಿಕೊಂಡದ್ದು 1994ರಲ್ಲಿ)

ಬೇಂದ್ರೆಯವರ ಮನೆ ಒಂದು ಮುಕ್ತ ವಿಶ್ವವಿದ್ಯಾನಿಲಯ–ಅಷ್ಟೇ ಏಕೆ, ಅದೊಂದು ಮುಕ್ತ ವಿದ್ಯಾಪೀಠ ಎನ್ನಬಹುದು. ಬೆಳಗಿನಿಂದ ಅವರ ಮನೆಗೆ ಬರುವವರ ಆರಂಭ. ಯಾರ‍್ಯಾರೋ ಬರುತ್ತಿದ್ದರು. ಬೇಂದ್ರೆಯವರಿಗೆ ತಮ್ಮದೇ ಆದ ಒಂದು ನಿಶ್ಚಿತ ವೇಳಾಪಟ್ಟಿ ಇರಲಿಲ್ಲ. ಅವರು ಕಾಲೋಹಿ ನಿರವಧಿರಯಂ ವಿಪುಲಾಚ್ಚಪೃಥಿವೀ ಎಂಬ ಉಕ್ತಿಯಂತೆ ಬಂದವರನ್ನು ಸ್ವಾಗತಿಸಿ, ಔದಾರ್ಯದಿಂದ ಅವರಿಗೆ ತಮ್ಮ ಅಮೂಲ್ಯ ವೇಳೆಯನ್ನು ಹಂಚಿಕೊಡುತ್ತಿದ್ದರು.

ಅವರಲ್ಲಿ ಭೇದಭಾವವಿರಲಿಲ್ಲ. ಸಣ್ಣವರು, ದೊಡ್ಡವರು; ಬುದ್ಧಿವಂತರು, ಬುದ್ಧಿಹೀನರು; ಬಡವ, ಬಲ್ಲಿದ; ಮುದುಕ, ತರುಣ; ಹೆಣ್ಣು, ಗಂಡು; ವಿದ್ಯಾವಂತ, ಅವಿದ್ಯಾವಂತ; ಇವರೆಲ್ಲರೂ ಅವರಿಗೆ ಸಮರೆ. ಇಂತಹ ಯಾವ ಸಂಗತಿಗಳೂ ಅವರ ಆಸ್ಥಾನದಲ್ಲಿ ಇರಲಿಲ್ಲ. ಇದು ಅತಿಶಯೋಕ್ತಿ ಅಲ್ಲ. ಬೇಂದ್ರೆಯವರ ಮಾತು ನೇರ. ಆದರೆ, ಇಂತಹ ಖಚಿತ ಮಾತು ಎಂದು ಹೇಳುವಂತಿಲ್ಲ. ಬೆಳಗಿನ 8 ಗಂಟೆಗೆ ಯಾರೋ ಒಬ್ಬರು ಬರ‍್ತಾರೆ. ಅವರೊಡನೆ ಬೇಂದ್ರೆಯವರ ಮಾತುಕತೆ ನಡೆದಿರುತ್ತದೆ ಎಂದಿಟ್ಟುಕೊಳ್ಳೋಣ. ಯಾವು ಯಾವುದೋ ಮಾತು ನಡೆದಿರುತ್ತದೆ. ಅಷ್ಟರಲ್ಲಿ ಮಧ್ಯ ಬೇರೆ ಯಾರೋ ಬರುತ್ತಾರೆ. ಬಂದವರೊಡನೆ ಒಂದೆರಡು ಯೋಗಕ್ಷೇಮಗಳ ಮಾತು. ಆಯಿತು. ಆಮೇಲೆ ಪುನಃ ಮೊದಲಿನವರ ಜತೆ ಮಾತು. ಎಲ್ಲಿ ನಿಲ್ಲಿಸಿದ್ದರೋ ಅಲ್ಲಿಂದ ಆರಂಭ. ಇದು ಅವರ ಮಾತುಕತೆಗೆ ಉದಾಹರಣೆ.

ಅವರೆಡೆ ಬಂದವರು ಹೆಚ್ಚೆಂದರೆ ಒಂದೆರಡು ಮಾತುಗಳನ್ನಾಡುತ್ತಿದ್ದರು. ಹೆಚ್ಚಾಗಿ ಬಂದ ಜನ ಮೂಕ ಸಾಕ್ಷಿಗಳೇ. ಬೇಂದ್ರೆಯವರ ಮಾತಿನ ಮೋಡಿಯನ್ನು ಸವಿಯಲೆಂದೇ ಬಂದವರು ಎಂದು ಹೇಳಬಹುದು. ಇವರಲ್ಲಿ ಅವರಿಗೆ ಒಂದು ಅನಿರ್ವಚನೀಯ ಸಂತೋಷ.

ಬೇಂದ್ರೆಯವರ ಒಂದು ವೈಶಿಷ್ಟ್ಯ:

ಬಂದವರ ಬುದ್ಧಿವಂತಿಕೆಯು ಮಟ್ಟ ಏನೇ ಇರಲಿ, ಅವರ ಬುದ್ಧಿಮತ್ತೆಗನುಸರಿಸಿ ಅವರ ಹೃದಯ ಹಿಗ್ಗುವ ಹಾಗೆ, ಮನಸ್ಸು ಅರಳುವ ಹಾಗೆ ಅವರ ಮಾತುಗಳು. ಆ ಮಾತುಗಳಲ್ಲಿ ವೈಯಕ್ತಿಕ ಟೀಕೆಗಳಿಗೆ, ಹರಟೆಗಳಿಗೆ ಆಸ್ಪದವೇ ಇಲ್ಲ. ಅವರ ಇನ್ನೊಂದು ವೈಶಿಷ್ಟ್ಯ–ಬಹಳ ಜನ ಬಂದಾಗ ಮಾತುಗಳು ಹಾಸ್ಯದ ವಿಷಯ ಕುರಿತೇ. ಅವುಗಳಲ್ಲಿ ಕೋಲ್ಮಿಂಚುಗಳ ಹಾಗೆ ಜೀವನದ ಅನೇಕ ಸಂಗತಿಗಳು ಹೊರಬೀಳುತ್ತಿದ್ದವು. ಪುಣೆ ವಿಶ್ವವಿದ್ಯಾಲಯದಲ್ಲಿ ನಾನೂ ಸದಸ್ಯನಾಗಿದ್ದೆ, ಅವರೂ ಸದಸ್ಯರಾಗಿದ್ದರು. ಅಲ್ಲಿಯ ಅಧಿಕಾರಿ ಹಾಗೂ ಸಿಬ್ಬಂದಿವರ್ಗಗಳಿಗೆ ಬೇಂದ್ರೆಯವರು ಬಂದಿರಲಿಲ್ಲ ಅಂದರೆ ಏನೋ ಒಂದು ತರಹ. ಅಂದರೆ ಅವರೂ ಬೇಂದ್ರೆಯವರ ಮಾತುಗಾರಿಕೆ, ಸೊಗಸುಗಾರಿಕೆ ಸವಿಯುತ್ತಿದ್ದರು. ಇವೆಲ್ಲ ಇರಲಿ. ಇಂತಹ ಅವರ ಗಡಿಬಿಡಿಯಲ್ಲೂ, ವೇಳೆ ಇರದಾಗೂ ಅವರು ನನಗೆ ಒಂದೆರಡು ಮಾತುಗಳನ್ನು ಹೇಳುತ್ತಿದ್ದರು. ಅಂತಹ ಅವಧಿಯೂ ಕಡಮೆ ಏನೂ ಅಲ್ಲ.

ಒಂದು ಮೋಜಿನ ಸಂಗತಿ: ಬೆಳಿಗ್ಗೆ ನಾನು, ಬೇಂದ್ರೆಯವರು ನೀಲಾನಗರದಿಂದ (ಅವರಿರುವ ಸ್ಥಳ) ಕಾಲೇಜಕ್ಕೆ ಹೊರಡುವ ಸಮಯ. ಕಾಲೇಜು ತುಂಬ ದೂರ. ಆಗ ಈಗಿನಂತೆ ಬಸ್ಸಿನ ಸೌಕರ್ಯ ಇರಲಿಲ್ಲ. ಅಂತರ ನಾಲ್ಕು ಕಿಲೋಮೀಟರ್‌ಗಳಾದರೂ ನಡೆಯುತ್ತಲೇ ಹೋಗುವುದು. ಅವರ ಕೈಯಲ್ಲೊಂದು ಕೊಡೆ; ಬಿಡಿಸುತ್ತಿರಲಿಲ್ಲ. ಬಿಸಿಲಿನಲ್ಲಿ ಹಾಗೆಯೇ ಸಾವಕಾಶವಾಗಿ ಮಾತನಾಡುತ್ತ ಮಾರ್ಗಕ್ರಮೇಣ ನಡದೇ ನಡೆಯುವದು. ಅನೇಕ ಸಲ ಮಾತಿನ

ಭರದಲ್ಲಿ ನನಗೂ ಲಕ್ಷ್ಯವಿಲ್ಲ. ಅವರಿಗೂ ಲಕ್ಷ್ಯವಿಲ್ಲ. ಬೇರೇನೇ ದಾರಿ ತುಳಿಯುವದು. ಎಷ್ಟೋ ಸಮಯ ಆದ ಮೇಲೆ ಅವರು ಓ, ದಾರಿ ತಪ್ಪಿದೆವು ಕಾಣ್ತದೆ. ಆಯಿತು, ಅಲ್ಲಿಯೇ ರಸ್ತೆಯ ಬದಿಯಲ್ಲಿ ನಿಂತು ಮಾತುಗಳು. 12 ಗಂಟೆಯೋ 1 ಗಂಟೆಯೋ ಆಗುವವರೆಗೆ ಮಾತುಗಳು–

ಅವರ ಪ್ರಶ್ನೆಗಳು–ನನ್ನ ಉತ್ತರಗಳು

ನನ್ನ ಪ್ರಶ್ನೆಗಳು–ಅವರ ಉತ್ತರಗಳು

ಒಂದು ಬಗೆಯಿಂದ ಹೀಗೆ ವಿದ್ಯಾರ್ಥಿಯ ಶಿಕ್ಷಣ ತುಂಬ ಅನನ್ಯವಾದ ರೀತಿಯಲ್ಲಿ ನಡೆದಿತ್ತು. ಒಂದು ವಿಶೇಷ, ಬೇಂದ್ರೆಯವರನ್ನು ದಯಾನಂದ ಕಾಲೇಜಿನಲ್ಲಿ ಇದ್ದಾಗ ಅವರನ್ನು ಅಗೌರವದಿಂದ ಕಂಡವರು ಯಾರೂ ಇರಲಿಲ್ಲ. ಅವರ ಕುರಿತು ತುಂಬ ಗೌರವ, ಪ್ರೀತಿ. ಎಷ್ಟೋ ಸಲ ಅವರು ಕಾಲೇಜಿಗೂ ಹೋಗುತ್ತಿರಲಿಲ್ಲ. ಆದರೂ ಯಾಕೆ? ಎಂದು ಕೇಳುತ್ತಿರಲಿಲ್ಲ.

ಅದರರ್ಥ ಅವರು ಕರ್ತವ್ಯಚ್ಯುತರೆಂದಲ್ಲ. ಇದಕ್ಕೆ ಕಾರಣ ಕಾಲೇಜಿನಲ್ಲಿಯ ಆಡಳಿತ ವರ್ಗ, ಪ್ರಾಧ್ಯಾಪಕ ವರ್ಗ, ಅವರೊಬ್ಬ ಕನ್ನಡದ ಪ್ರಾಧ್ಯಾಪಕ ಎಂದು ಕಾಣಲೇ ಇಲ್ಲ. ಕಾಲೇಜಿನ ಪ್ರಾಚಾರ್ಯರು ಬೇಂದ್ರೆಯವರು Roving Professor of Indian Culture ಎಂದು ಹೇಳುತ್ತಿದ್ದುದು ನನಗೆ ಸ್ಪಷ್ಟವಾಗಿ ಗೊತ್ತು. ಎಷ್ಟೋ ಸಲ ಅವರನ್ನು ಪ್ರಾಚಾರ್ಯರು Our roving ambassador of Indian culture ಎಂದೇ ಕರೆಯುತ್ತಿದ್ದರು. ಹೀಗಾಗಿ ಕಾಲೇಜಿಗೆ ತಡ ಏಕೆ? ಬರಲಿಲ್ಲವೇಕೆ? ಇಂತಹ ಯಾವ ಮಾತುಗಳೂ ಅವರ ವಿಷಯದಲ್ಲಿ ಇಲ್ಲ. ಅವರಿಗೆ ತುಂಬ ಸ್ವಾತಂತ್ರ್ಯ ಇತ್ತು. ಅಷ್ಟು ಗೌರವ ಅವರಿಗೆ. ಇದರರ್ಥ ಅವರು ವಿದ್ಯಾರ್ಥಿಗಳಿಗೆ ಕಲಿಸುವುದರಲ್ಲಿ ಯಾವ ಅಪಚಾರವನ್ನೂ ಮಾಡಲಿಲ್ಲ.

ಕಾಲೇಜಿನಲ್ಲಿ ಕನ್ನಡ ವಿದ್ಯಾರ್ಥಿಗಳ ಸಂಖ್ಯೆಯೇ ಕಡಮೆ. ಆದರೆ ಬೇಂದ್ರೆಯವರು ಕಾಲೇಜಿಗೆ ಭೂಷಣ ಎಂಬ ಭಾವನೆ. ವಿದ್ಯಾರ್ಥಿ ವರ್ಗ ಹಾಗೂ ಅವರ ನಡುವೆ ತುಂಬ ಅಂತರ ಇದ್ದ ಹಾಗೇನೇ. ಆದರೆ ಕನ್ನಡ ವಿದ್ಯಾರ್ಥಿಗಳಿಗೆ ತಮ್ಮ ಗುರುಗಳು ಬಹಳ ದೊಡ್ಡವರು ಎಂಬ ಎಚ್ಚರ ಮಾತ್ರ ಇತ್ತು. ಆದರೆ ಅವರಿಂದ ತಾವು ಏನನ್ನು ಪಡೆಯಬೇಕೆಂದು ಸ್ಪಷ್ಟ ಕಲ್ಪನೆ ಮಾತ್ರ ಯಾವ ವಿದ್ಯಾರ್ಥಿಗೂ ಇರಲಿಲ್ಲ. ಆದರೆ ಬೇಂದ್ರೆಯವರು ಆಡುವ ಒಂದೋ ಎರಡೋ ಮಾತುಗಳಿಂದ ಅವರಿಗೆಲ್ಲ ಬಲು ಸಂತೋಷ. ಇಂತಹ ಪರಿಸ್ಥಿತಿ. ಬೇಂದ್ರೆ ಏನನ್ನು ಮಾತನಾಡುತ್ತಿದ್ದರು– ಅವರು ನನ್ನೊಡನೆ ಆಡಿದ ಮಾತುಗಳು ಬಹಳ ಬೇರೆ ತರಹದವು. ತುಂಬ ಅರ್ಥಪೂರ್ಣವಾದವುಗಳು. ನನಗೆ ಅವರು ಓದಲು ಕಲಿಸಿದರು! ಓದಲು ಕಲಿಸಿದ್ದರು ಅಂದರೆ ಏನು? ಅವರ ಮನೆಗೆ ಆಗ ನಾನು ಸಾಯಂಕಾಲ ಹೋಗುವ ವಾಡಿಕೆ. ಬರುವಾಗ ಪುಸ್ತಕ ತರುತ್ತಿದ್ದೆ.

ಮರುದಿನ 'ಅಣ್ಣಾ... ಈ ಪುಸ್ತಕ ಓದಿ ಆಯಿತು' ಎಂದಾಗ ಅವರು ಬೇರೊಂದು ಪುಸ್ತಕ ಕೊಡುತ್ತಿದ್ದರು. ಹೀಗೆ ಒಂದೆರಡು ತಿಂಗಳು ನಡೆದಿರಬೇಕು. ಒಮ್ಮೆ ನನಗೆ ಅವರು ಕೊಟ್ಟ ಪುಸ್ತಕ ಒಂದು ಇಂಗ್ಲಿಷ್ ಪುಸ್ತಕ. ಯಥಾಪ್ರಕಾರ ಓದಿ ಮರುದಿನ ಅಣ್ಣಾ ಈ ಪುಸ್ತಕ ಓದಿದೆ. ಇನ್ನೊಂದು ಕೊಡ್ತೀರಾ? ಎಂದೆ. ಆ ಪುಸ್ತಕ ನೋಡಿದರು. ಅದು ರವೀಂದ್ರನಾಥ ಟಾಗೋರರ ಸಾಧನಾ ಎಂಬ ಪುಸ್ತಕ.

ನನ್ನೆಡೆ ನೋಡಿ: 'ಈ ಪುಸ್ತಕ–ನೀನು ಓದಿ ಮುಗಿಸಿದೆಯಾ?'

'ಹೌದು, ಅಣ್ಣಾ'

'ಅಂದರ ಒಯ್ದೀನಿ ಅನ್ನೋದಕ್ಕ ಓದೀನಿ ಅಂತೀಯೇನು ಮತ್ತ.'

'ಯಾಕಂದರ ಒಂದು ಕಡೆ ಜನಾ ಒಯ್ದೀನಿ ಅಂದರ ಓದೀನಿ ಅಂತ ತಿಳಕೋತದ. ಹಾಂಗ ಓದೀನಿ ಅಂದರ ಒಯ್ದೀನಿ ಅಂತ ಅರ್ಥ ಹ್ಯಾಗೋ ಹಾಗೆಯೋ ಅಂದೆ. ತಮ್ಮಾ, ನೋಡು, ಈ ಪುಸ್ತಕ ನಾ ಐವತ್ತು ವರ್ಷಾತು ಓದ್ತಾನೆ ಇದ್ದೀನಿ ಇನ್ನೂ ಓದೋದು ಮುಗದಿಲ್ಲ. ನೀ ನಿನ್ನೆ ಸಂಜೀನ್ಯಾಗ ಒಯ್ದಿ. ಈಗ ಮುಂಜಾನೆ ತಂದು ಓದೀನಿ ಅಂತ ಕೊಟ್ಟಿ. ಅದಕ ನಿನ್ನ ಓದಿನ ಬಗ್ಗೆ ಸಂಶಯ. ಅಂದರು. ಮುಂದೆ, ನೀನು ಹ್ಯಾಗೆ ಓದಿದೆಯಾ? ಅಂತ ಅಲ್ಲ. ಇಲ್ಲಿಯವರೆಗೆ ನೀನು ಒಯ್ದ ಪುಸ್ತಕಗಳನ್ನು ಹೀಗೆ ಓದಿದೀಯಾ ಅಂತ.

'ಹಾಗೇನಿಲ್ಲ. ಬಹಳ ವರ್ಷಗಳಿಂದ ಓದನ್ನು ರೂಢಿಸಿಕೊಂಡು ಬಂದವ ನಾನು. ಸಣ್ಣವನಿದ್ದಾಗಿನಿಂದ ಹಳ್ಳಿಯ ವಾಚನಾಲಯಗಳಲ್ಲಿಯ ಸಾಕಷ್ಟು ಪುಸ್ತಕಗಳನ್ನು ತಿರುವಿಹಾಕಿದ್ದೇನೆ.'

'ಏನೇನು ಓದಿ ಹೇಳು ನೋಡೋಣ.'

ಅನಕೃ, ಕಾರಂತರ ಕಾದಂಬರಿಗಳು, ಮಿಂಚಿನ ಬಳ್ಳಿ ಪ್ರಕಾಶನಗಳು ಹೀಗೆ ಅನೇಕ ಪುಸ್ತಕಗಳನ್ನು ಓದಿರುವೆ, ಸಂತೋಷಪಟ್ಟಿರುವೆ. ಸಾಕಷ್ಟು ಕವಿತೆಗಳನ್ನು ಓದಿದ್ದೇನೆ.

ಒಂದು ಸಣ್ಣ ಸಂಗತಿ ನೆನಪಾಗ್ತದ. ಇಲ್ಲಿ ಇನ್ನೊಮ್ಮೆ ನೆನಪಿಸಿಕೊಳ್ಳಲು ಯತ್ನಿಸ್ತೀನಿ. ನಾನು ಆಗ ವಿದ್ಯಾರ್ಥಿ ಎಂದೆನಲ್ಲ, ಇಂಗ್ಲಿಷ್ ಕವನಗಳ, ಕನ್ನಡದಲ್ಲಿ ರನ್ನ, ಪಂಪ, ಲಕ್ಷ್ಮೀಶ- ಇವರುಗಳ ಓದು ಮುಗಿಸಿದ್ದೆ. ಯಾವುದನ್ನೂ ಏನನ್ನೂ ಓದುವ ವಾಡಿಕೆ ನನ್ನದು.

'ನೀವು ನನ್ನನ್ನು ಏನನ್ನೂ ಕೇಳಬಹುದು' ಎಂದೆ.

ಅವರು ನನ್ನ ಕೈಯಲ್ಲಿ ನಾಲ್ಕು ಲಿಮ್ಲೇಟ್ ಇಟ್ಟರು. ನಾನು ತಕ್ಷಣ ಎರಡೊ ಮೂರೊ ತಿಂದು ಮುಗಿಸಿದೆ. ಅವರು ನನ್ನ ಕಡೆ ನೋಡಿದರು. ಆಮೇಲೆ ತಮ್ಮ ಕೈಯಲ್ಲಿಯ ಪೆಪ್ಪರ್ ಮಿಂಟ್ ನೋಡಿದರು. ಅದರ ಬಣ್ಣ ಹೇಗೆ, ಆಕಾರ ಹೇಗೆ? ಬಿದಿಗೆ ಚಂದ್ರನ್ಹಂಗ ಕಾಣ್ತದ. ಅದರ ಸ್ಪರ್ಶದ ಬಗ್ಗೆ ಹೇಳುತ್ತ, ಇದನ್ನು ಸಾವಕಾಶವಾಗಿ ಚೀಪಬೇಕು. ಅನ್ನ ಹಾಕಿದೊಡನೆ ಅದನ್ನು ಗಬಗಬಾ ತಿನ್ನೊದಲ್ಲ. ಎಲೆಯಲ್ಲಿ ಅನ್ನ ಹಾಕಿದೊಡನೆ ಅದರ ಬಣ್ಣ, ರುಚಿ ಇವು ಸ್ಪರ್ಶಗಳಿಂದ ಪಂಚೇಂದ್ರಿಯ ಪ್ರೀತಿ ಪಡಬೇಕು. ತೃಪ್ತಿ ಪಡಬೇಕು. ಅವರ ಮಾತುಗಳು ಬಹಳ ವಿಚಿತ್ರ ಹಾಗೂ ಗಮ್ಯ. ಆಗ ನಾನು ಸಂಸ್ಕೃತ ಅಭ್ಯಾಸನೂ ಮಾಡತಿದ್ದೆ. ಉಪನಿಷತ್ತಿನಲ್ಲಿಯ ಒಂದು ಸಾಲು ಅಪ್ಯಾಯಂತು ಮಮಾಂಗಾನಿ ಎಂದು ಪ್ರಾರಂಭಿಸಿ ವಿವರಿಸ ಹತ್ತಿದರು.

ಕಣ್ಣು ಹೇಗೆ ತೃಪ್ತಿ ಪಡೆಯಬೇಕು, ನಾಲಗೆಯನ್ನು ಹೇಗೆ ತೃಪ್ತಿ ಪಡಿಸಬೇಕು, ಕಿವಿ ಹೇಗೆ ತೃಪ್ತಿ ಹೊಂದಬೇಕು, ಸ್ಪರ್ಶದಿಂದ ಹೇಗೆ ತೃಪ್ತಿ ಪಡೆಯಬೇಕು, ಮೂಗಿನ ತೃಪ್ತಿ ಎಂತು? ಹೀಗೆ ಪಂಚೇಂದ್ರಿಯಗಳೂ ತೃಪ್ತಿ ಪಡಬೇಕು.

ಒಂದು ಮೋಜಿನ ಮಾತು. ನಾನು Solitary Reaper ಎಂಬ ಕವಿತೆ ಓದುತ್ತಿದ್ದೆ. ಅದರಲ್ಲಿ ಬಹಳ ರಸ, ರುಚಿ ಅಂತೇನು ಅನಿಸಿರಲಿಲ್ಲ. ಒಂದು ದಿನ ನನ್ನನ್ನು ಅವರು ಕೇಳಿದರು.

'ಎಲ್ಲಾದರೂ ನೀನು ನೀರು ಕುಡಿದಾಗ ತೃಪ್ತಿಯನ್ನು ಅನುಭವಿಸಿದ್ದೀಯಾ? ಅಂದರ ಏನು ನಾ ಕೇಳೋದು ತಿಳೀತಲ್ಲ. ನೀರು ಕುಡೀತಿಯಲ್ಲಾ?'

'ಹೌದು, ಆದರ ನಿಮ್ಮ ಪ್ರಶ್ನೆ ತಿಳೀಲಿಲ್ಲ.'

'ನಿನ್ನ ಮನಸ್ಸು, ಶರೀರ, ಅಂತಃಕರಣ, ಎಂದಾದರೂ ತೃಪ್ತಿ ಅಂತ ಪಡೆದಾವೇನು? ನೋಡಪಾ, ಭಾಳ ಮಂದಿಗೆ ತಮಗೆ ಅವಯವ ಅವ ಅನ್ನೋದೇ ಗೊತ್ತಿರೂದಿಲ್ಲ. ಇಂತಹ ಎಚ್ಚರಗೇಡಿಗಳಿರ್ತಾರ. ನಿದ್ದೀ ಒಳಗ ಇದ್ಹಾಂಗ ಇರ್ತಾರ. ಅವರಿಗೆ ಏನೂ ಮಾಡಲಿಕ್ಕೇ ಬರೂದಿಲ್ಲ. ಅವರಿಗೆ ಕಾಲ ಅವ ಅನ್ನೂದು ತಿಳಿಯೂದು ಕಾಲ ನೋಯಿಸ್ತಾವ ಇಷ್ಟೇ ಗೊತ್ತು. ಇಂತಹ ಸ್ಥಿತಿಯ ಜನರಿಗೆ ದೇವರು ಎಂತಹ ಸುಂದರ ದೇಹ ಕೊಟ್ಟಾನ ಅನ್ನೂದು ಗೊತ್ತಿರೂದಿಲ್ಲ. ಉಪಕಾರ ಮಾಡ್ಯಾನ ಅನ್ನೂದು ಗೊತ್ತಿಲ್ಲ.'

'ಇವೆಲ್ಲ ಭಾಳ ಸುಂದರ ಮಾತ ಹೇಳಿದಿರಿ.'

ಆಗ ಕಂಠದೊಳಗಿನ ಒಂದು ಮಾತು ಹೇಳಿದರು. 'ಆತ್ಮ ನಾಂ ರಥಿನಂ ಸಿದ್ಧಿ...'

–ಏನು ಸುಂದರ ಮಾತು.

ಇದು ಅವರು ಕಲಿಸುವ ಪದ್ಧತಿ.

ಒಂದು ರೀತಿಯಿಂದ ಹೇಳಬೇಕಾದರೆ, ಬಹಳ ತರ್ಕನಿಷ್ಠವಾಗಿ ಕಲಿಸ್ತಿರಲಿಲ್ಲ ಅವರು. ಇಷ್ಟೇ ಯಾಕ, ಒಂದು ಪುಸ್ತಕ ಕಲಿಸಲಿಕ್ಕೆ ಹೋಗಿ ನಾಲ್ಕು ಸಾಲು ಓದಿರತಿದ್ದರು. ಒಂದು ಮಾತಿನ ಕುರಿತು ತಲೆಯೊಳಗೆ ಏನೋ ವಿಚಾರ ಬಂದಿತೆಂದರೆ ಅದರ ಮೇಲೆಯೇ ಹೇಳುತ್ತಿದ್ದರು. ಆ ಪುಸ್ತಕಾನೇ ಬ್ಯಾರೆ ಆಗ್ತಿತ್ತು. ಉದಾಹರಣೆ ಚಂದ್ರಹಾಸನ ಕಾವ್ಯ ಹೇಳ್ತಾ ಇದ್ದರು. ಚಂದ್ರಹಾಸನ ಕುರಿತು ಕಲಿಸುವಾಗ ಎಲ್ಲರ ಕಾರುಣ್ಯಕ್ಕೆ ಚಂದ್ರಹಾಸನು ಈಡಾದನು. ಈ ಮಾತು ಬಂತು. ಅವರ ಕಲಿಸುವುದು ನಿಂತಿತು. ಕಾರುಣ್ಯ ಇದರ ಮೇಲೆ ಮಾತನಾಡಹತ್ತಿದರು.

ಕರುಣೆ ಎಂದರೇನು? ಯೋಚನೆ ಮಾಡಿದ್ದೀಯಾ?

ಹೌದು ಕರುಣೆ, ಅನುಕಂಪ

ಕರುಣೆ. ಇದು ಯಾರ ಗುಣಧರ್ಮ? ದಯೆ ಯಾರ ಗುಣಧರ್ಮ, ಗೊತ್ತೇನು? ಕೇಳಿದರು.

ಸಜ್ಜನರ ಗುಣಧರ್ಮ ಎಂದೆ.

ಹೌದು. ಎಂದಾದರೂ, ಎಲ್ಲಾದರೂ ನೀನು ಕರುಣೆ ಅನುಭವಿಸಿ ಗೊತ್ತಿದೆಯೆ?

ನನಗೆ ಗೊತ್ತಿರಲಿಲ್ಲ. ನಾನು ಈ ರೀತಿ ವಿಚಾರ ಮಾಡಿರಲೇ ಇಲ್ಲ. ನನಗೆ ಒಂದು ಅಭಿಮಾನ ಅಂದರೆ ನಾನೊಬ್ಬ ಬಹಳ ಬುದ್ಧಿವಂತ ವಿದ್ಯಾರ್ಥಿ. ಪರೀಕ್ಷೆಯಲ್ಲಿ ಕೇಳಿದ ಪ್ರಶ್ನೆಗಳಿಗೆಲ್ಲ ಸರಿಯಾಗಿ ಉತ್ತರ ಕೊಡಬಲ್ಲೆ ಇಷ್ಟೆ.

ನೀನು ಕಲಿಯೋದು ಭಾಳ ಮ್ಯಾಲಮ್ಯಾಲಿಂದು. ಕರುಣೆ ಬಗ್ಗೆ ವಿಚಾರ ಮಾಡು. ನಾನು ಏನು ವಿಚಾರ ಮಾಡಬೇಕು? ಎಂದೆಂದೂ ಯಾರೂ ಇಂಥ ಪ್ರಶ್ನೆ ಕೇಳಿರಲಿಲ್ಲ.

ಹೌದು, ಇದು ಬಹಳ ಮಹತ್ವದ ಪ್ರಶ್ನೆ. ನನಗೆ ಲಕ್ಷ್ಮೀಶನ ಜೈಮಿನಿ ಭಾರತ ಇತ್ಯಾದಿ ಬರತಿದ್ವು. ನನಗೆ ಜೈಮಿನಿ ಭಾರತದ ಪದಚ್ಛೇದ ಇತ್ಯಾದಿ ಬರತಾವ. ಅದೇನು ದೊಡ್ಡ ಮಾತಲ್ಲ. ಅದು ಬಂದೇ ಬರ್ತದ.

ಅಜ್ಞಾನ ಇತ್ತು ಅಂತ ಅಲ್ಲ. ಅಷ್ಟು ಅಧ್ಯಯನ ಮಾಡದಿದ್ದರೂ ನನಗೆ ವಿಷಯದ ಸ್ಥೂಲ ಕಲ್ಪನೆ ಇತ್ತು.

ಬೇಂದ್ರೆಯವರ ಅಧ್ಯಯನವೆಲ್ಲ ಭಾರತೀಯ ತತ್ತ್ವಜ್ಞಾನ, ತತ್ತ್ವಶಾಸ್ತ್ರ ಪಾಶ್ಚಿಮಾತ್ಯ ತತ್ತ್ವಜ್ಞಾನ ಇವುಗಳ ಅಭ್ಯಾಸ ಬಹಳ ಆಳವಾದದ್ದಿತ್ತು. ಉದಾ: ಎಮರ್ಸನ್, Swebon Berg ಸಾಕಷ್ಟು ಅಧ್ಯಯನ ಆಗಿತ್ತು. ಖಲೀಲ ಗಿಬ್ರಾನ್ ಅವರ ಪ್ರೀತಿಯ ಕವಿ. Mysticism ಗೂಢವಿದ್ಯೆ ಕುರಿತು ಅಧ್ಯಯನ ಬಹಳಿತ್ತು. ಇದನ್ನೆಲ್ಲ ಅವರೇ ನನಗೆ ಹೇಳ್ತಾ ಇದ್ದರು.

ಒಂದು ದಿನ ಅವರು ನನಗೆ ವ್ಯಕ್ತಿತ್ವ ವಿಕಾಸ ಕುರಿತು ಕಲಿಸಿಕೊಟ್ಟರು. ಇಂಗ್ಲಿಷ್ ಆಗಲಿ, ಕನ್ನಡ ಆಗಲಿ ಗದ್ಯವಾಗಲಿ, ಪದ್ಯವಾಗಲಿ ಯಾವುದನ್ನೂ ಓದಬಹುದು. ಆದರೆ ಅವನ್ನೆಲ್ಲ ಓದಬೇಕು, ಓದಿ ತಿಳಕೋಬೇಕು ಎಂದು ಕಲಿಸಹತ್ತಿದರು.

ನಿನಗೆ ಈ ಮೊದಲು ಹೇಳಿದೆನಲ್ಲ, ಮೂರು ತರಹದ ಅಧ್ಯಯನ ಎಂದು. ಮೊದಲನೆಯದು passive ರೀಡಿಂಗ್. ನೀನು ಶರಶ್ಚಂದ್ರರ ಕಾದಂಬರಿ ಓದಿದೀನಿ ಅಂದಿ. ಸರಿ ಹ್ಯಾಗೆ ಓದೀನಿ ಯೋಚನೆ ಮಾಡಿದೆಯಾ? ನೀನು ಓದುವಾಗ ಯಾವ ಯಾವ ಇಂದ್ರಿಯಗಳು ತೊಡಗಿದ್ದವು? ತೆರೆದಿದ್ದವು? ಯಾಕೆ? ನನಗೆ ಸ್ಪಷ್ಟವಾಗಿ ಅರ್ಥವಾಗಲಿಲ್ಲ. ತಾವೇ ಹೇಳಿದರು. ನಿನ್ನ ಕಣ್ಣು ಅವನ್ನ ನೋಡ್ತಿರ್ತಾವ. ಮನಸ್ಸೂ ಗ್ರಹಣ ಮಾಡ್ತಿರ್ತದ.

ಮಾತು ಆಡೋವಾಗ ಗಣಿತದ ವಿಷಯ ಬಂತು. ಆ ವಿಷಯದಾಗ ಮೊದಲು ನಿನಗೆ ಪ್ರೀತಿ ಇತ್ತು. ಆದರ ಮುಂದೆ ಮಾತಾಡುವಾಗ ಗಣಿತದ ಬಗ್ಗೆ ನೀನು ಉತ್ಸಾಹ ಕಳೆದುಕೊಂಡುಬಿಟ್ಟೆ ಅನ್ನೋದಕ್ಕಿಂತ ಕಡಿಮೆ ಆತು. ಮುದ್ದಾಂ ಬಿಟ್ಟಿಯೋ ಏನೋ ಗೊತ್ತಿಲ್ಲ. ನೀ ಹೇಳಿದ ಮಾತು ಕೇಳಿದರ ನಿನಗ ಬೇಕಾದ್ಹಾಂಗ ನಿನ್ನ ಮಾತು ನಡೆಸಿಕೊಡಲಿಲ್ಲ. ಇನ್ನೊಬ್ಬರು ಯಾಕೆ ನಡೆಸಿಕೊಡಬೇಕು? ನೀನು ನಡೆಸಿಕೊಳ್ಳಲಿಲ್ಲ ಅಂತ ಅರ್ಥ. ಅಂದರ ನೀನು ಏನು ಹೊಂದಿಸಿಕೊಂಡುಬಿಟ್ಟಿ- ಗಣಿತಕ್ಕೂ ಕಲೆಗೂ ಸಂಬಂಧ ಇಲ್ಲ ಅಂತ. ನನ್ನೊಬ್ಬ ಪರಿಚಿತ, ಟಿ.ಪಿ. ಕೈಲಾಸಂರ ಬಗ್ಗೆ ಬಹಳ ಗೌರವ-ಅದು ಅವರ ಕೃತಿಗಳನ್ನು ಓದಿ ಅಲ್ಲ. ಏನೋ ತಾನು ಅವರ್ಹಾಂಗ ಆಗಬೇಕು. ಹಾಂಗಾದರ ಕೀರ್ತಿವಂತ ಆಗಬೇಕಾದರ ಏನು ಮಾಡಬೇಕು? ಏನಾಗಬೇಕು? ಟಿ.ಪಿ. ಕೈಲಾಸಂ ಆಗಬೇಕು ಅಂದರ ಏನು ಮಾಡಬೇಕು? ನಾಟಕಾ ಬರೀಬೇಕು. ನಾಟಕಾ ಬರೀಬೇಕಾದರೆ ಕೈಲಾಸಂ ಏನ ಮಾಡ್ತಿದ್ದರು? ಬಹಳ ಅನಿಶ್ಚಿತವಾಗಿರುವದು, ಸರಿಯಾದ ವೇಳಾಪತ್ರಿಕಾ ಇಲ್ಲ, ಸಾಕಷ್ಟು ಸಿಗರೇಟು ಸೇದುವಾತ ವಿಕ್ಷಿಪ್ತ ವ್ಯಕ್ತಿ ಅಂತ ತಿಳಕೊಂಡ. ಆಯಿತು. ಟಿ.ಪಿ. ಕೈಲಾಸಂರ ಅನುಕರಣ ಆಯಿತು. ಆದರೆ ಅನುಕರಣದಿಂದ ನಾಟಕ ಬರಿಯೂ ಪ್ರತಿಭಾ ಮಾತ್ರ ಬರ್ಲಿಲ್ಲ. ಹೀಗೆ ಅನೇಕರು ತಮ್ಮ ಜೀವನ ಹಾಳು ಮಾಡಿಕೊಂಡಾರ, ಮಾಡಿಕೊಳ್ತಾರ. ನೀನು ಯೋಚನೆ ಮಾಡಿದೆಯಾ? ದೇವದಾಸ ಕಾದಂಬರಿ, ಸಂಧ್ಯಾರಾಗ ಅಷ್ಟು ಯಾಕೆ ಹಿಡಿಸ್ತು? ಸಾಹಿತ್ಯರತ್ನದಿಂದ ಸಂಧ್ಯಾರಾಗ ಎಲ್ಲಿಂದೆಲ್ಲಿಗೆ ಯೋಚನೆ ಮಾಡಿದೆಯಾ? ಬೆಟ್ಟದ ಜೀವ ಯಾಕೆ ಸೇರಿತು? ಇವೆಲ್ಲ ಪುಸ್ತಕಗಳು ನಿನ್ನ ಮೇಲೆ ಯಾವ ಪರಿಣಾಮ ಬೀರಿದವು? ಯಾಕೆ ಓದಿದಿ? ಇವುಗಳಕಿಂತ ಬೇರೆ ಏನಾದರೂ ಓದುವ

ಅವಕಾಶ ಇರಲಿಲ್ಲವೆ? ದಿವಸಕ್ಕೆ ಎಷ್ಟು ಓದಿತಿದ್ದಿ? ಹೀಗೆ ನಿಶ್ಚಯವಾಗಿ ಕುಳಿತು ಓದುವದು ಯೋಗ್ಯ ಅನ್ನಿಸಿತೇ? ಈ ಎಲ್ಲ ಪ್ರಶ್ನೆಗಳು ನಿನ್ನ ಕಾಡಲಿಲ್ಲವೆ? ನೀನು ಕೇಳಿದೆಲ್ಲಾ passive reading ಅಂದರೇನು ಅಂತ-ಅದೊಂದು ಬ್ಲಾಟಿಂಗ್ ಪೇಪರ್ ಇದ್ಹಾಂಗ-ಬ್ಲಾಟಿಂಗ್ ಪೇಪರ್ ಅಂದರೇನು? ಕೆಳಗೆ ಬಿದ್ದ ಮಸಿಯನ್ನೆಲ್ಲ ಹೀರಿಕೊಂಡು ಬಿಡ್ತದ. ವಿವೇಚನಾಶಕ್ತಿಯಿಲ್ಲ, ವಿವೇಕವಿಲ್ಲ.

ಇನ್ನೊಂದು ಪದ್ಧತಿ critical reading ಅಂತ ಅಂತಾರ. ಅಂದರೇನು? ಪುಸ್ತಕ ತಗೊಂಡ ಮನುಷ್ಯ ಆ ಪುಸ್ತಕ ಸ್ವೀಕಾರ ಮಾಡಲಿಕ್ಕೆ ತಯಾರಿಲ್ಲ. ಅಂವ ಸ್ಕಾಲರ ಇರ್ತಾನ. ಅವನ ತಲಿಯೊಳಗ ಏನೇನೋ ವಿಚಾರ ತುಂಬಿರ್ತಾವ. ಆ ತನ್ನ ತಲೆಯೊಳಗಿನ ವಿಚಾರಗಳು ಆ ಪುಸ್ತಕಕ್ಕೆ ಹೊಂದತಾವೊ ಇಲ್ಲೊ ಮೊದಲ ನೋಡ್ತಾನ. ಯಾಕೆ? ತನ್ನ ತಲೆಯೊಳಗಿನ ವಿಚಾರ ಅಷ್ಟೇ ನಂಬಿರ್ತಾನ. ಪುಸ್ತಕದೊಳಗೆ ಎಲ್ಲ ವಿರುದ್ಧ. ಆದ್ದರಿಂದ ಆಗ ಕೃತಿ ಕವಿತಾನೇ ಇರಲಿ, ಮತ್ತೇನೆ ಇರಲಿ ಅದು ಏನು ಹೇಳ್ತದ ಅನ್ನೊ ಯೋಚನೆ ಮಾಡೋ ಮನಸ್ಸೇ ಇರೂದಿಲ್ಲ. ಆದರೂ ಓದ್ತಾ ಓದ್ತಾ ಹೋಗ್ತಾನ. ನೋಡು. ಗೂಳಿಗಳ, ಹುಂಜಗಳ ಕಾಳಗ ಇರ್ತಾವಲ್ಲ, ಎರಡು ಟಗರುಗಳು ಒಂದಕ್ಕೊಂದು ಎದುರಿಸಿ ನಿಂತಿರ್ತಾವ ಹಾಂಗ, ಪುಸ್ತಕ ಕೈಯಾಗ ತಗೋಳೂ ಮುಂದ ಅಂವ ಸಡ್ಡು ಹೊಡದೇ ತೊಗಂಡಿರ್ತಾನ. ಅದು critical reading. ಈ ಎರಡೂ ಓದು ಮಾಡವರೇ ಭಾಳ ಜನ. ಇವರೆಲ್ಲ ಅಪಕ್ವ ವಾಚಕರೆ.

ಇನ್ನೊಂದು ಮಹತ್ವದ ಮಾತು. ಒಂದು ಪುಸ್ತಕ ಕೈಗೆ ತೊಗೊಳ್ಳೊದು. ಮೊದಲು ಅದನ್ನ ಯಾರ ಬರ್ದಾರ? ಇಂತವರು. ಹೆಸರು ಮುಖ್ಯ. ಹೆಸರು ನೋಡಿ, ಹಾಂ, ಆವಂದ ಅಂದರ ಭಾಳ ಛಲೋನೇ ಇರಬೇಕು. ಹೀಗೆ ಲೆಖ್ಖ ಮಾಡಿ ಓದೂದು. ಅವರೇನು ಗೊತ್ತೇನು? ಕವಿತಾ ಅಥವಾ ಲೇಖನಾ ಓದೂದಿಲ್ಲ. ಅವರು ಲೇಬಲ್ ಓದತಾರ. ಅವರು ಆ ಕವಿತಾ, ಪುಸ್ತಕ ಓದೂದಕಿಂತ ಲೇಬಲ್ ಓದೂದರೊಳಗೆ ಸಂತೋಷಪಡ್ತಿರ್ತಾರ. Made in India, Japan, Germany, USA ಭ್ರಮೆಗೆ ಒಳಗಾಗ್ತಾರ. ಇದು ಯಾರಿಗೆ? ಒಳಗಿನ ಅಂತಃಸತ್ವ ಗೊತ್ತಿರುದಿಲ್ಲ ಅವರಿಗೆ, ಅಂಥವರಿಗೆ. ಒಂದು ಮೋಜಿನ ಮಾತು. ರವೀಂದ್ರನಾಥ ಠಾಕೂರರ ಬಗ್ಗೆ ನಿನಗೆ ಭಾಳ ಅಭಿಮಾನ. ಯಾಕೆ? ಗೊತ್ತಿಲ್ಲ, ಅಭಿಮಾನ ಅಂದರೇನು, ಸುತ್ತಮುತ್ತಲಿನ ಜನರೆಲ್ಲಾ ಹೇಳ್ತಾರ. ಅವರು ನೋಬಲ್ ಬಹುಮಾನಿತರಾಗೋದಕ್ಕಿಂತ ಮೊದಲು ಮ್ಯಾಟ್ರಿಕ್ ಪರೀಕ್ಷಾಕ್ಕ ಅವರ ಪುಸ್ತಕದೊಳಗಿನ ವಾಕ್ಯ ಕೊಟ್ಟು Correct the following sentences ಅಂತ ಕೇಳ್ತಿದ್ದರಂತ. ಆದರ ನೋಬೆಲ್ ಬಹುಮಾನ ಸಿಕ್ಕ ನಂತರ ಓಹೋ ಅಂದರು. ಎಲ್ಲಾ ಬದಲಾತು. ಅಂದರೆ ಲೇಬಲ್ ಓದೋದು. ಅಂತಃಕರಣದಲ್ಲಿ ಸೌಂದರ್ಯ ಅನುಭವಿಸುವ ರೀತಿಯೇ ನಮಗೆ ಗೊತ್ತಿರೂದಿಲ್ಲ. ಯಾವುದು ಸೌಂದರ್ಯ ಅಂತ ಗೊತ್ತಿರೂ ಕಾರಣವಿಲ್ಲ; ಸೌಂದರ್ಯ ಅಂದರ ಏನೂ ತಿಳಿಯೂ ಕಾರಣವೂ ಇಲ್ಲ. ಕಣ್ಣು ತೆರದು, ಮ್ಯಾಲ, ಕೆಳಗ, ಎಡಕ್ಕ, ಬಲಕ್ಕ ಹಿಂದ ಮುಂದ ನೋಡ್ತಿರಬೇಕು. ಅಂದರ ಗೊತ್ತಾಗ್ತದ. ಮೂರನೆಯ ಪದ್ಧತಿ ಅಂದರ ಕ್ರಿಯೇಟಿವ್ ರೀಡಿಂಗ್. ಪುಸ್ತಕ ಓದುವಾಗ ನೀನು ಅದರಲ್ಲಿ ಹೊಸತೇನೂ ಹಾಕುವದಿಲ್ಲ. ಅದೂ ನಿನ್ನೊಳಗೆ ಹೊಸತು ಏನೂ ಹಾಕೂದಿಲ್ಲ. ಓದತಾ ಓದತಾ ಮತ್ತು ಆ ಕೃತಿಯೊಳಗಿನ ವ್ಯಕ್ತಿ ಒಂದಾಗಿ ಹೊಸತೊಂದು ಅದ್ಭುತ ಸೃಷ್ಟಿ ಆಗ್ತಾ ಹೋಗ್ತದ. ಇದಕ್ಕೇ ಕ್ರಿಯೇಟಿವ್ ರೀಡಿಂಗ್ ಅಂದರ ಒಂದು ಬಗೆಯ ರಸಾಸ್ವಾದನೆ ಅಂತಲ್ಲ, ಅದು ಒಂದು ರಸಯೋಗ.

ಆದುದರಿಂದ ಮೊದಲನೆಯದು ನಾನು ಯಾಕೆ ಓದತೀನಿ ಅನ್ನೂದನ್ನ ತಿಳಕೊಳ್ಳಲಿಕ್ಕೆ ಪ್ರಯತ್ನ ಮಾಡು. ಓದೋದರೊಳಗ ಅನೇಕ ಸಂಗತಿ ಇರ್ತಾವ. ಜ್ಞಾನ ಸಂಪಾದನೆಗೆ ಅಂತ ಇತಿಹಾಸ, ಭೂಗೋಳ ಇನ್ನಿತರ ಓದು. ಇನ್ನೊಂದು ಬಗೆಯ ಓದು-ಆ ಓದಿನಿಂದ ಮನಸ್ಸು ಬೆಳೆಯೂ ರೀತಿ ಅಂತ ಇರ್ತದ. ವಿವೇಕರಹಿತವಾದ, ವಿವೇಚನಾರಹಿತವಾದ ಓದು ಮನುಷ್ಯನನ್ನು ದುರ್ಬಲಗೊಳಿಸ್ತದ. ಒಳ್ಳೆಯ ಪುಷ್ಟಿಕರ ಆಹಾರ ತೊಗೋಳ್ತಾ ಹೋಗೋದರಿಂದ ದೇಹದ ಬೆಳವಣಿಗೆ ಆಗ್ತಾ ಹೋಗ್ತದ. ಹಾಗೆಯೇ ಒಳ್ಳೆಯ ಓದು. ಮನಸ್ಸು ಬೆಳೆಯುತ್ತ ಹೋಗುವದು. ಪುಸ್ತಕ ಛಲೋ ಕೆಟ್ಟ ಅಂತ ಇರೂದೇ ಇಲ್ಲ.

creative readingನಿಂದ ಓದತಾ ಹೋದರೆ ನಿನ್ನ ಮನಸ್ಸು ಬೆಳೀತಾ ಹೋಗ್ತದ. ಒಳ್ಳೆಯ ಓದು, ಮನಸ್ಸು ಬೆಳೆಯೂದು ಇದರ ಬಗ್ಗೆ ಯೋಚನೆ ಮಾಡು. ಈಗ ನಮ್ಮ ಮನೀಗೆ ಬರ್ತೀಯಲ್ಲ, ಎಷ್ಟೋ ಸಲ ಕೇಳಬೇಕನಸ್ತದ-ಯಾಕಪ್ಪಾ ನೀನೊಬ್ಬನೇ ಬರದ ಇಷ್ಟೆಲ್ಲ ಜನರನ್ನ ಕರಕೊಂಡ ಒಳಗ ಬರ್ತೀ ಅಂತ. ಆದರ ನಿನಗ ಈ ಪ್ರಶ್ನೆ ತಿಳೀಲಿಕ್ಕಿಲ್ಲ ಅಂತ ಅನ್ನೂ ಭಯದಿಂದ ನಾನು ನಿನಗೆ ಆ ಪ್ರಶ್ನೆ ಕೇಳಿಲ್ಲ. ನಿನ್ನ ಮನಸ್ಸು ಅಂದರ ಗೊತ್ತಿರೂದಿಲ್ಲ. ಹೃದಯ ಅಂದರೆ ಗೊತ್ತಿರೂದಿಲ್ಲ. ಎಷ್ಟೊಂದು ಶಬ್ದಗಳನ್ನು ಉಪಯೋಗ ಮಾಡ್ತಿರ್ತಿ?

ಅವರ ಸಮೃದ್ಧವಾದ ವಾಚನಾಲಯ ಕಂಡು ನನಗೆ ತುಂಬ ಸಂತೋಷ. ಅದರಲ್ಲಿ ಇದನ್ನು ಓದು, ಇದನ್ನು ಓದಬೇಡ, ಇದು ನಿನ್ನ ಯೋಗ್ಯತೆಗೆ ಮೀರಿದ್ದು ಎಂದು ಕೇಳಲಿಲ್ಲ. ಹೇಳುವ ಕೇಳುವ ಕಾರಣವಿರಲಿಲ್ಲ.

ಬೇಂದ್ರೆಯವರ ವಿಶ್ವಾಸ ಸಂಪಾದನೆಯಾದ ಮೇಲಂತೂ ನನಗೆ ಬೇಕಾದ ಪುಸ್ತಕಗಳನ್ನು ನಾನೇ ಕೈಹಾಕಿ ತೆಗೆದುಕೊಳ್ಳುತ್ತಿದ್ದೆ, ಬರ್ತಿದ್ದೆ. ನಾನು ಅವರನ್ನು ಕೇಳುತ್ತಿರಲಿಲ್ಲ. ಏನನ್ನ ಓದಬೇಕು? ಹೇಗೆ ಪ್ರಾರಂಭಿಸಬೇಕು, ಹೇಗೆ ತಿಳಿಯಬೇಕು ಎಂದು ಕಲಿಸುವಾಗ ಇನ್ನೊಂದು ಯೋಚನೆಯನ್ನು ನನ್ನ ತಲೆಯಲ್ಲಿ ಹಾಕಿದರು.

ಒಮ್ಮೆ ನಾನು ಮಾತನಾಡುವಾಗ ಹೇಳಿದರು ಮಾನವ ಜನ್ಮ ಬಹಳ ದೊಡ್ಡದು.

ಹೌದು, ಪುರಂದರದಾಸರದು.

ಗೊತ್ತಾಯಿತು, ಆದರ ನಿನಗೆ ಮಾನವ ಜನ್ಮ ದೊಡ್ಡದು. ಓದಿದಾಗ ಮಾನವ ಜನ್ಮ ದೊಡ್ಡದು ಅಂತ ಅನಿಸಿದ್ಹಾಂಗ ಕಾಣೂದಿಲ್ಲ.

ಯಾಕೆ?

ಯಾಕೆ ಅಂತ ಕೇಳ್ತೀಯಾ? ಯಾಕೆ ಅಂತ ಕೇಳಿದಿ ನೀನು ಇದನ್ನು ಹಾನಿ ಮಾಡಿಕೊಳಬೇಡಿ ಹುಚ್ಚಪ್ಪಗಳಿರಾ ಅಂತ ಅವರು ಹೇಳಿದ್ದನ್ನ ತಿಳಕೋಳ್ಳದ ನೀನು ಅದನ್ನ ಹಾನಿ ಮಾಡಿಕೊಳ್ಳುದರಾಗ ತೊಡಗೀದಿ.

ಅಣ್ಣಾ ನಾನು ಯಾವ ರೀತಿಯಿಂದ ಹಾಳು ಮಾಡಿಕೊಳ್ತಾ ಇದ್ದೀನಿ?

ನೋಡು, ನಿನ್ನ ಈ ಓದು ಬಹಳ ವ್ಯರ್ಥವಾದ, ನಿರರ್ಥಕವಾದ ಓದು. ನೀನು ಬೆಳೆದ ಹಾಗೆ ನಿನಗ ಅನಿಸಬೇಕು. ಈವತ್ತು ನಾನು ನಿನಗ ಬಹಳ ಮಹತ್ವದ ಮಾತು ಹೇಳ್ತೀನಿ.

ಯಾಕೆ ನೀನು ಓದುತ್ತೀಯಾ ಅನ್ನೂದನ್ನ ಅರ್ಥ ಮಾಡಿಕೊಳ್ಳದೆ ಇದ್ದರೆ ನೀನು ನಿನ್ನ ಈ ಮಾನವ ಜನ್ಮವನ್ನು ಹಾನಿ ಮಾಡಿಕೊಂಡು ವ್ಯರ್ಥ ಮಾಡಿಕೊಂಡಂತೆಯೇ ನಿಶ್ಚಿತ. ನೋಡು, ಎಮರ್ಸನ್ ಒಂದೆಡೆ ಭಾಳ ಮೋಜಿನ ಮಾತು ಹೇಳ್ತಾನ. ಎಮರ್ಸನ್‌ಗೆ ಒಬ್ಬ ಪಂಡಿತ ಗೆಳ್ಯಾ ಇದ್ನಂತ, ಅಂವ ಒಂದು ದಿವಸ ಎಮರ್ಸನ್‌ಗೆ ಹೇಳಿದನಂತ: ಬಹಳ ಗಂಭೀರವಾಗಿಯೇ ಹೇಳಿದ್ನಂತ. ಮನರಂಜನೆ ಯಾಕೆ? ನಾಟಕ, ಸಂಗೀತೋತ್ಸವ, ಪುರಾಣ, ಪುಣ್ಯಕಥೆ, ಪ್ರವಚನ, ಭಾಷಣ ಈ ಎಲ್ಲ amusements ಮನರಂಜನೆಗಳು ಒಂದೇ ಸಮನೆ ನಡ್ದ ನಡೀಬೇಕು. ಅವ್ಯಾಹತವಾಗಿ ನಡೀಬೇಕು. ಅಂದರ ಜಗತ್ತಿಗೆ ಕ್ಷೇಮ. ಎಮರ್ಸನ್ ಗಾಬರಿಯಾದ. ಅಂದರ ಮಾತೇನೋ ಒಳ್ಳೇದು ಅನಿಸಿದರೂ ಎಮರ್ಸನ್‌ಗೆ ಅದರ ಅರ್ಥ ಏನೋ ಬ್ಯಾರೇನೇ ಆತು. ಆಗ ಅಂವ ಒಂದು ಮಾತು ಹೇಳ್ತಾನ. ಭಾಳ ಮಹತ್ವದ್ದು. Tyrant ಗೊತ್ತದಲ್ಲ, ಡಿಕ್ಟೇಟರ್ ಅಂದರ ತನ್ನ ಮನಸ್ಸಿಗೆ ಬಂದ್ಹಾಂಗ ನಡ್ಯಾಂವ. ಉದಾ: ಭಸ್ಮಾಸುರನೋ, ದುಃಶಾಸನೋ ಅಂತಹವರು. ಅಂತಹವರ ಅಪೇಕ್ಷಾ ಅಂದರ amusement must go on and on. ಅಂದರ ಜನರಿಗೆ ಯಾವ ವಿಚಾರ ಮಾಡಲೂ ಅವಕಾಶಾನ ಸಿಕ್ಕಿರಬಾರದು, ಅಂದರ ಅವರಿಗೆ ಅವಕಾಶ ಕೊಡಲೇಬಾರದು. ಯೋಚನೆ ಮಾಡಲಿಕ್ಕೆ ಅವಕಾಶ ಕೊಟ್ಟರ ನಾವು ಆಳೂದ್ಹ್ಯಾಂಗ? ಎನ್ನೋ ಭಯ ಇರ್ತದ. ಮನರಂಜನೆ ಅದು ಸಮಾಜಕ್ಕೆ ಅಂಟಿದ ಒಂದು ಬಹುದೊಡ್ಡ ರೋಗ.

'ನೋಡು, ನಿನಗೆ ಮಾನವ ಜನ್ಮ ದೊಡ್ಡದು ಅಂತ ಅನ್ನಿಸ್ತಿತ್ತು ಅಂದರ, ಈ ಮನರಂಜನೆಗೋಳಿಸುವ ಓದಿನಲ್ಲಿ ನೀನು ನಿರರ್ಥಕವಾಗಿ ದಿನಕ್ಕ 24 ತಾಸುಗಳನ್ನು ಕಳೀತಿದ್ದಿಲ್ಲ. ಆದುದರಿಂದ ನಿನ್ನ ಓದನ್ನು ವಿವೇಚನಾಯುತವನ್ನಾಗಿ ಮಾಡಿಕೊ.'

'ಹೌದಣ್ಣಾ, ಹೀಂಗ ಬರೇ ವಿವೇಚನಾಯುತ, ವಿವೇಕಯುಕ್ತವಾಗಿ ನಿನ್ನ ಓದನ್ನು ಮಾಡಿಕೋ ಅಂತ ಹೇಳ್ತೀರಿ. ಅಂದರ ಏನು? ಏನು ಮಾಡಬೇಕು?'

'ನಾನು ಉತ್ತರ ಹೇಳೂದಿಲ್ಲ. ಅದನ್ನು ಮೊದಲು ನೀನು ತಿಳಿದುಕೊಳ್ಳಬೇಕು. ನಾನು ಯಾಕೆ ಓದತಾ ಇದ್ದೇನೆ, ಬೇರೆ ಏನೂ ಓದುಲಿಕ್ಕೆ ಬರೂದಿಲ್ಲ ಅಂತ ಓದತೀನಿ ಅನ್ನಿಸ್ತಿದೆಯೇ? ಅಥವಾ ಓದೂದರಿಂದ ನೀನು ಸಮೃದ್ಧವಾಗಿ ಮನಸ್ಸಿನಿಂದ ಬೆಳೀತಾ ಇದ್ದೀಯಾ? ನಿನ್ನ ಬುದ್ಧಿಶಕ್ತಿ ಬೆಳೀತದೇನು? ಮನಸ್ಸು, ಹಾಗೂ ವೈಚಾರಿಕ ಶಕ್ತಿ ಬೆಳೀತಾವೇನು? ಮಾನಸಿಕವಾಗಿ ಆಂತರಿಕವಾಗಿ ಯಾವ ರೀತಿಯಿಂದ ಪುಷ್ಟವಾಗಿ ಬೆಳೀತಾ ಇದ್ದಿ? ಯಾವ ಬೆಳಕು ಜೀರ್ತಾ ಇದೆ? ಇದೆಲ್ಲ ನೀನು ಯೋಚನೆ ಮಾಡಬೇಕಲ್ಲವೆ? ಆದ್ದರಿಂದ ನಿನ್ನ ಓದು, ಯಾವುದೋ ಒಂದು ಕೇವಲ ನಿನ್ನ ರುಚಿಯನ್ನು ತೃಪ್ತಿ ಪಡಿಸಲು ಓದತಾ ಇದ್ದಿ ಅಂತ ಅರ್ಥ ಅಷ್ಟೆ. ಆದುದರಿಂದ ನಿನ್ನ ಓದು ನಿನ್ನನ್ನು ಸರಿಯಾಗಿ ಬೆಳೆಸಬೇಕಾದರೆ ನೀನು ಮೊದಲು ಖಚಿತಪಡಿಸಿಕೊ, ನಿನಗ ಬೇಕಾದ್ದು ಏನು? ಬದುಕಿನಲ್ಲಿ ಮಾಡಬೇಕಾದದ್ದು ಏನು? ಇವಕ್ಕೆಲ್ಲ ಉತ್ತರ ತಿಳಿದಮ್ಯಾಲ ಓದಬೇಕು ಅಂತ ಅರ್ಥ ಅಲ್ಲ, ಶಾಲೆಗಳಲ್ಲಿಯ ಪದ್ಧತೀನೇ ಬಹಳ ಬೇರೆ. ಗದ್ಯನೇ ಆಗಲಿ, ಪದ್ಯನೇ ಆಗಲಿ, ಅವನ್ನೆಲ್ಲ ನೇರವಾಗಿ ಕಲಿಸಬಹುದು. ನೀನು, ಆದ್ದರಿಂದ ಸ್ವಲ್ಪ ಯೋಚನೆ ಮಾಡು.

ತೊರವೆ ರಾಮಾಯಣ, ಆಗಲೇ ನಾನು ಅದನ್ನು ಓದಿದ್ದೆ. ತೊರವೆ ರಾಮಾಯಣದೊಳಗಿನ ಒಂದು ಭಾಗ ತೆಗೆದರು. ಒಂದು ಶ್ಲೋಕದ ಆರಂಭ. ಲವನೆ ಕೇಳಾ ದಿನವ ನಾದಳಭವನದಲಿ ನೂಕಿದರು ಇದರ ಅರ್ಥ ಕೇಳಿದರು.

ನಾನು ಯಾಕ ಈ ಮಾತು ಹೇಳ್ತಾ ಇದ್ದೇನೆ? ನಾನು ಅಲ್ಲಿ-ಇಲ್ಲಿ ಕಾಲಮಿತಿಯಿಂದ ಬದ್ಧನಾಗಿ ಓದತಿದ್ದೆ ಅಂತ ಅಲ್ಲ. ಪ್ರಾರಂಭದಲ್ಲಿ ಬೇಂದ್ರೆಯವರು ಓದೂದನ್ನು ನನಗೆ ಹೇಗೆ ಕಲಿಸಿದರು ಅನ್ನೂದನ್ನ ಹೇಳ್ತಾ ಇದ್ದೇನೆ ಅಷ್ಟೆ.

ಮೇಲೆ ಹೇಳಿದೆನಲ್ಲ, ಒಂದು ಪದ್ಯದ ಆರಂಭ. ಲವನೆ ಕೇಳಾದಿನವ ನಾಳಭವನದಲಿ ನೂಕಿದರು ಅಂದರೆ ಸಂದರ್ಭ-ರಾಮ ಸೀತಾ ಲಕ್ಷ್ಮಣ ವನವಾಸದೊಳಗಿದ್ದರು. ಆಗ ಭರತ ಬರ್ತಾನೆ ದಶರಥ ಮರಣದ ವಾರ್ತೆಯನ್ನು ಹೇಳ್ತಾನೆ. ಸರಳಾನುವಾದ ನಾನು ಬರೆದಿದ್ದೆ-ಬರೆದು ತೋರಿಸಿ ಬೇಂದ್ರೆಯವರ ಕಡಿಯಿಂದ ವಾಹವಾ ಅಂತ ಅನಿಸಿಕೋಬೇಕು ಅಂತ ಮನಸ್ಸಿನ್ಯಾಗ ಇತ್ತು ಕಾಣ್ತದ.

'ನನಗ ಅವರು ಹೇಳಿದರು ತಮ್ಮಾ ಈ ಸಾಲು ನಿನಗ ತಿಳಿದದ ಅಂತ ಅಂದ್ಯಲಾ'

'ಹೌದು, ಸರಳಾನುವಾದ ಬರದೀನಲ್ಲ.'

'ಸರಳಾನುವಾದ ಅಂದರ ಪದ್ಯ ಅಲ್ಲ. ಪದ್ಯದ ಅನುಭವ ಬರಬೇಕು. ಬಂದಿದೆಯೆ? ಕವಿ ಏನ್ ಹೇಳಬೇಕಂತಾನ ಅದು ತಿಳೀಬೇಕು. ತಿಳದದ ಅಂದಿ. ಮೊದಲ ಸಾಲು ಓದು.'

ಮತ್ತೆ ನಾ ಓದಿದೆ. ಲವನೆ ಕೇಳಾ ಆ ದಿನವ ನಾದಳಭವನದಲಿ ನೂಕಿದರು.

'ಹೌದು ರಾಮ ಲಕ್ಷ್ಮಣ ಸೀತಾ ಕರ್ತೃ, ನೂಕಿದರು ಕ್ರಿಯಾಪದ, ಆ ದಿನವನ್ನು ಕರ್ಮ.... ಅಂದರೇನು? ಹೇಳಿದೆನಲ್ಲ ಕರ್ತೃ, ಕರ್ಮ, ಕ್ರಿಯಾಪದ.'

'ಹೌದೋ, ಸಾದಾ ವಿಚಾರ ಮಾಡು. ನೂಕಿದರು ಕವಿ ಶಬ್ದ ಹಾಕಿದನಲ್ಲ, ಅಂದರೇನು? ಬ್ಯಾರೆ ಶಬ್ದ ಯಾಕ ಇಡಲಿಲ್ಲ? ನೆನಪಾಗಲಿಲ್ಲ ಎಂದೆ? ಯಾಕ ನೂಕಿದರು ಅಂತ ಹಾಕಿದಾ?'

ಪುನಃ ನಾನು ಅದೇ ಅರ್ಥ ಹೇಳಿದೆ. 'ಎಲೈ ಲವನೇ ಕೇಳು, ಆ ದಿನವನ್ನು ಆ ಮೂವರೂ ಆ ಪರ್ಣಕುಟಿಯಲ್ಲಿ ಕಳೆದರು?'

'ಹೌದಪ್ಪಾ, ನಿನಗೆ ವಾಚ್ಯಾರ್ಥ, ಶಬ್ದಾರ್ಥ ತಿಳೀತು. ಆದರ ಆ ಕವಿ ಅಲ್ಲಿ ನೂಕಿದರು ಅಂತ ಹಾಕಿದ್ದು ಯಾಕ ತಿಳೀತೇನು ನಿನಗ?'

'ಹೇಳಿದೆನಲ್ಲ ನೂಕಿದರು ಅಂದರ ಕಳೆದರು ಅಂತ.'

'ಹೌದೊ, ಹಾಂಗ ಬ್ಯಾಸರಪಟ್ಟುಕೋಬ್ಯಾಡ. ಸ್ವಲ್ಪ ವಿಚಾರ ಮಾಡು. ನೂಕಿದರು ಅಂತ ಯಾಕೆ ಇಟ್ಟ?'

'ಛಂದಸ್ಸಕ್ಕಂತೋ? ಪ್ರಾಸಕ್ಕಂತೊ? ಯಾಕ ಇಟ್ಟ? ಇನ್ನೂ ಶಬ್ದಗಳು ಇದ್ದೂ ಅಲ್ಲ, ಅವನ್ನ ಬಿಟ್ಟು ಇದನ್ನ ಯಾಕ ಇಟ್ಟ?'

ನನಗೆ ಏನು ಹೇಳಬೇಕು, ತೋಚಲಿಲ್ಲ. ಶಬ್ದಕೋಶ ತೆಗೆದು ತೋರಿಸಿದೆ. ಅದರಾಗ ಕಳೆದರು, ಕಳೆಯೂದು, ಅಂತ ಸ್ಪಷ್ಟ ಇತ್ತು. ಹೌದು ಸರಿ ನೂಕಿದರು ಅಂತ ಯಾಕ ಹಾಕಿದ?

ಸರಿ ಶಬ್ದಗಳ ಬಗ್ಗೆ ತಿಳಿದುಕೊಳ್ಳೂದು ಭಾಳ ಅದ. ಈಗ ನಿನಗ ಇಂಗ್ಲಿಷ್ ಗೊತ್ತದ. ಕನ್ನಡ ಗೊತ್ತದ ಅಂತ ತಿಳಿದಿ. ಗೊತ್ತು ಅಂದರ ಏನ್ ಗೊತ್ತದ? ಸುಮ್ಮನೆ ಒಂದು ಮಾತು ಹೇಳ್ತೇನೆ. Idea ಅಂತ ಒಂದು ಶಬ್ದ, ನಿನಗ ಅರ್ಥ ಗೊತ್ತದ. ನೋಡು Plato Ideaಕ್ಕ ಕೊಡೊ ಅರ್ಥ

ಬ್ಯಾರೆ. ಮುಂದ ಬಂದರ Luke Hobson ನ ಅರ್ಥ ಬ್ಯಾರೇನೆ. ಅದಕ್ಕೂ ಮುಂದ ಹೋದರ ಕಾಂಟನ ಅರ್ಥನೇ ಬ್ಯಾರೆ. ಒಂದು Idea ಶಬ್ದಕ್ಕ ಬ್ಯಾರೆ ಬ್ಯಾರೆ ಅರ್ಥ ಅವ. ಹಿಂಗ ನೀ ತಿಳಕೊಳ್ಳದಿದ್ದರ, ತಿಳೀದಿದ್ದರ ನಿನಗ ನಿನ್ನ ತಲ್ಯಾಗಿನ ಅರ್ಥೇ ಆಗ್ತಿರ್ತದ. Imagination ಶಬ್ದನೇ ತಗೋ. ಕೃಷ್ಣಮೂರ್ತಿಯವರು ಹೇಳೋ ಅರ್ಥ ಬ್ಯಾರೇ, ಐನ್‌ಸ್ಟೀನ್ ಕೊಡೋ ಅರ್ಥ ಬ್ಯಾರೆ. ನೋಡು ಅದಕ್ಕೆ ಹೇಳೂದು Map is not an actual territory-ನಕಾಶೆ ಅಂದರ ಪ್ರತ್ಯಕ್ಷ ವಾಸ್ತವ ಪ್ರದೇಶ ಅಲ್ಲ. ಅದೇ ರೀತಿ ಶಬ್ದ ಅಂದರ ಅದು ವಸ್ತು ಅಲ್ಲ. ಶಬ್ದ ಬೇರೆ, ವಸ್ತು ಬೇರೆ. ಇದನ್ನು ನೀನು ಲಕ್ಷ್ಯದೊಳಗಿಟ್ಟುಕೊ. ಶಬ್ದಗಳ ಸಂಗ್ರಹ ಮಾಡುವುದು ಬಹಳ ದೊಡ್ಡ ಮಾತಲ್ಲ. ಶಬ್ದ ಏನು? ಶಬ್ದ ಕೋಶದಾಗ, ಶಬ್ದ ತನ್ನಷ್ಟಕ್ಕ ತಾನೇ ನಿರ್ಜೀವ ಇತ್ತು. ಒಬ್ಬ ಸಮರ್ಥನಾದಂತಹ ಮನುಷ್ಯ, ಸಮರ್ಥ ಅಂದರೇನು? ಯಾರ ಹೃದಯ ಅನುಭವದಲ್ಲಿ, ಭಾವಗಳಿಂದ, ಸಮೃದ್ಧ ವಿಚಾರಗಳಿಂದ, ಸಮೃದ್ಧವಾಗಿದೆಯೊ ಅಂತಹ ಅವನ ಹೃದಯ ಸಮರ್ಥ. ಅವನು ಆ ಶಬ್ದಗಳನ್ನು ಅಭಿವ್ಯಕ್ತಿಗೊಳಿಸಲು ಸಮರ್ಥ. ಶಬ್ದಗಳನ್ನು ಮೀರಿ ಅರ್ಥ ಇರ್ತದ. ಶಬ್ದ ತಾನೇ ತಾನಾಗಿ ನಿಂತರ ಅದು ಅರ್ಥ ಆಗೋದು ಭಾಳ ಕಷ್ಟ. ಶಬ್ದಾರ್ಥ ಆಗಬಹುದು. ಆದರ ಅದರಿಂದ ಮನಸ್ಸು ಬೆಳೆಯೂದಿಲ್ಲ. ಹೃದಯ ಬೆಳೆಯೂದಿಲ್ಲ. ಆದ್ದರಿಂದ ಬಹಳ ಮಹತ್ವದ ಮಾತು ಅಂದರ ಆ ಓದಿನಲ್ಲಿ Imaginative understanding ಇರಬೇಕು. Emphatic understanding ಇರಬೇಕು. ಮೊನ್ನೆ ಮಾತಾಡೂ ಮುಂದ ಆಡಿದ್ನಲ್ಲ. ಶಾಕುಂತಲ ನಾಟಕ ಓದೂ ಮುಂದ ಗಯಟೆ ಆ ಒಂದು ಶ್ಲೋಕ; 'ಧನ್ಯಾಸ್ತ ದಾಗರಜಸಾ ಮಲಿನೀ ಭವಂತೀ' ಓದಿದ ಮ್ಯಾಲ ಸಂತೋಷ ಆಗಿ ಶಾಕುಂತಲ ನಾಟಕ ತಲೀಮ್ಯಾಲ ಇಟಗೊಂಡು ಕುಣದನಂತ. ಅಂತ ನೀನು ನಿನ್ನ ಮನೀ ಒಳಗ ಕೂತು ಆ ಶಾಕುಂತಲದೊಳಗಿನ ಆ ಶ್ಲೋಕ ಓದಿ ಶಾಕುಂತಲ ನಾಟಕ ತಲೀಮ್ಯಾಲ ಇಟಗೊಂಡು ಕುಣದ್ರ ನಕಲ ಮಾಡಿದ್ಹಾಂಗ ಆಗ್ತದ. ಯಾಕ ಅಂವಗ ಆ ಶ್ಲೋಕ ಭಾಳ ಆನಂದ ಕೊಟ್ಟಿತು? ಒಂದು ಮಾತು ಲಕ್ಷ್ಯದೊಳಗಿಡು- ಅನುಭವದಿಂದ ಭಾವನೆ ಸಮೃದ್ಧವಾಗಬೇಕು.

(ಸಾಹಿತ್ಯ ಭಂಡಾರ ಬೆಂಗಳೂರು. ಪ್ರಕಟಿಸಲಿರುವ ಕ್ರಾಂತ-ದರ್ಶನದಿಂದ)

ಗಾಯತ್ರಿ ಚಕ್ರವರ್ತಿ ಸ್ಪಿವಾಕ್ – ಭಾಷಾಂತರದ ರಾಜಕಾರಣ

"Translation is the most intimate act of reading. I surrender to the text when I translate"

ಭಾಷಾಂತರವು ಬಲು ಆಪ್ತ ಓದಿನ ಕ್ರಿಯೆ. ಭಾಷಾಂತರ ಮಾಡುವಾಗ ನಾನು ಅನುವಾದಿಸುತ್ತಿರುವ ಪಠ್ಯಕ್ಕೆ ಶರಣುಹೋಗಿರುತ್ತೇನೆ. (Spivak 2000: 398).

ಕನ್ನಡಕ್ಕೆ :

ಡಾ.ಕೆ.ಸಿ ಶಿವಾರೆಡ್ಡಿ

ಆರ್ ವಿಜಯರಾಘವನ್

ಈ ಶೀರ್ಷಿಕೆಯ ಯೋಚನೆ ಬಂದಿದ್ದು ಭಾಷೆಯನ್ನು ಅರ್ಥ ನಿರ್ಮಿತಿಯ ಪ್ರಕ್ರಿಯೆ ಎಂದು ಭಾವಿಸಿದ್ದೇ ಆದರೆ ಭಾಷಾಂತರದ ರಾಜಕಾರಣ ತನ್ನದೇ ಆದ ಘನವಾದ ಬದುಕನ್ನು ಮೇಲೆಳೆದುಕೊಳ್ಳುತ್ತದೆ ಎಂಬ ಮಿಚೆಲೆ ಬ್ಯಾರೆಟ್‌ರ ಅನಿಸಿಕೆಯಿಂದ.

ನನ್ನ ದೃಷ್ಟಿಯಲ್ಲಿ ಭಾಷೆ ವಸ್ತುಗಳನ್ನು, ಸ್ವತಃ ನಮ್ಮನ್ನೂ, ಪರಿಭಾವಿಸಿಕೊಳ್ಳಲು ಒದಗುವ ಅನೇಕ ಪರಿಕರಗಳಲ್ಲಿ ಒಂದು. ನಾನು ಆಂಗಿಕ ಭಾವಾಭಿನಯ (ಜೆಸ್ಚರ್)ಗಳನ್ನು, ಯತಿ(ಪಾಸ್)ಗಳನ್ನು ಕುರಿತು ಯೋಚಿಸುತ್ತಿದ್ದೇನೆ. ಅಲ್ಲದೆ ಭಿನ್ನ ಸನ್ನಿವೇಶಗಳಲ್ಲಿ ಭಿನ್ನ ಸ್ಥಾನಗಳನ್ನು ಕಂಡುಕೊಳ್ಳುವ ಸಂಭವನೀಯತೆಯ ಕುರಿತು ಹಾಗೂ ಭಿನ್ನ ಆಗದ, ವೈಯಕ್ತಿಕ ಪ್ರಭಾವಲಯದ, ಆಲೋಚನೆಯಲ್ಲಿರುವ ಭಾಷೆಯು ನೇರ ಅಥವಾ

ನಿಜದ ನೆಲೆಯಿಂದ ಥಟ್ಟನೆ ಹೊರಳಿಬಿಡುವ ಸಂಭವನೀಯತೆಯ ಕುರಿತೂ ಯೋಚಿಸುತ್ತಿದ್ದೇನೆ. ವ್ಯಕ್ತಿತ್ವವನ್ನು ಸೃಷ್ಟಿಸುವುದು ಎಂದರೆ ನಮ್ಮನ್ನು ನಾವು ಅರಿತುಕೊಳ್ಳುವುದೇ ಆಗಿದೆ. ವ್ಯಕ್ತಿತ್ವದ ಸೃಷ್ಟಿಯು ಸ್ವಯಂ-ಅರ್ಥವೆಂದು, ಅದು ಬರೀ ಅರ್ಥವಲ್ಲ ಎಂದು ಯಾರಾದರೂ ಭಾವಿಸಿದರೆ ಅದು ಸೂಕ್ಷ್ಮದರ್ಶಕಕ್ಕೊಡ್ಡಿದ ನೀರಹನಿಯ ಬಹುತ್ವದಂತೆ. ಅದು ನೈತಿಕ ರಾಜಕಾರಣ ವಲಯದ ಆಚೆಗೆ ತನ್ನಲ್ಲೇ, ತನ್ನ ಕುರಿತೇ, ತಂತಾನೇ ಸೃಷ್ಟಿಯಾಗುವ ಚಿಂತನೆಗಳ ಬಗ್ಗೆ ಸದಾ ಇದ್ದುಬಿಡುವ ಅಸಂತೃಪ್ತಿಯಂತೆ. (ನೈತಿಕ ರಾಜಕಾರಣ ವಲಯದಲ್ಲಿಯು ಸಹ ವ್ಯಕ್ತಿತ್ವವನ್ನು ಸೃಷ್ಟಿಮೂಲವೆಂದು ಪರಿಭಾವಿಸುವುದು ತೃಪ್ತಿಕರವಾದ ವಿಚಾರವಾಗಲಾರದು. ಆದರೆ ಅದರ ಬಗ್ಗೆ ಇಲ್ಲಿ ಮಾತಿಗೆ ತೊಡಗುವುದು ನಮ್ಮನ್ನು ವಸ್ತುವಿನಿಂದ ತುಂಬಾ ದೂರಕ್ಕೆ ಒಯ್ದುಬಿಡಬಹುದು.)

ನಾನು ಕ್ಯಾಪಿಟಲಿಸ್ಟ್ ಮಲ್ಟಿಕಲ್ಚರಿಸಂನ ಸ್ವ ಐಡೆಂಟಿಟಿಗೆ ಮತ್ತು ಸ್ಪರ್ಧೆಗೆ ಆಹ್ವಾನವನ್ನು ಕೊಡುವುದಕ್ಕೆ ಆಯ್ದುಕೊಳ್ಳುವ ಒಂದು ಮಾರ್ಗವೆಂದರೆ ಅನೂಹ್ಯವಾದ ಒಂದಕ್ಕೆ ಹೆಣ್ಣಿನ ಹೆಸರಿಟ್ಟುಬಿಡುವುದು ಎಂದು ವಾದಿಸಿದ್ದೇನೆ. ಇದೇ ಬಗೆಯ ತುಡಿತ ಇಲ್ಲೂ ಇನ್ನೂ ಹೆಚ್ಚು ನಿರ್ವಹಿಸಬಹುದಾದ ರೀತಿಯಲ್ಲಿ ಕೆಲಸ ಮಾಡುತ್ತಿದೆ. ಅತ್ಯುತ್ತಮ ವಿಶ್ಲೇಷಣಾತ್ಮಕ ಗದ್ಯವನ್ನು ಬರೆವವನು ತನ್ನ ವೈಯಕ್ತಿಕತೆಯ - ಐಡೆಂಟಿಟಿಯ ಮಿತಿಗಳಾಚೆಗೆ ದಾಟಿಹೋಗಲು ಕಂಡುಕೊಳ್ಳುವ ಮಾರ್ಗಗಳಲ್ಲಿ ಒಂದು ಇನ್ನೊಬ್ಬರ ಕೃತಿಗಳ ಅನುಸಂಧಾನ ಮಾಡುವುದು. ಏಕೆಂದರೆ ಒಬ್ಬ ಬಹಳ ಜನರಿಗೆ ಸಂದಿರುವ ಭಾಷೆಯಲ್ಲಿಯೇ ಕೆಲಸ ಮಾಡುತ್ತಿರುತ್ತಾನೆ. ಭಾಷಾಂತರದ ಮಾಯಕ ಆಮಿಷಗಳಲ್ಲಿ ಅದು ಒಂದು. ಇದು ಆತ್ಮದಲ್ಲಿರುವ ಇನ್ನೊಬ್ಬರ ಗುರುತನ್ನು ಪತ್ತೆ ಹಚ್ಚುವ ಜವಾಬ್ದಾರಿಯ ಸರಳ ಅನುಕರಣೆ.

ಮಿಚೆಲೆಯ ಮಾತಿಗೆ ಪ್ರತಿಕ್ರಿಯಿಸುತ್ತ ಆ ಭಾಷಾಂತರದ ಜವಾಬ್ದಾರಿಯಿಂದ ಬಿಡುಗಡೆ ಗೊಳಿಸುವ ಭಾವನೆಯಲ್ಲಿ ನಾನು ಭಾಷಾಂತರವೆಂದರೆ ಅರ್ಥಗಳ ಮೂಟೆಗಳನ್ನು ಅಲ್ಲಿಂದಿಲ್ಲಿಗೆ ಸಾಗಿಸುವುದು ಅಲ್ಲ ಎನ್ನುವುದನ್ನು ಒಪ್ಪಲು ಸಿದ್ಧಳಿದ್ದೇನೆ. ಆ ಒಪ್ಪಂದದ ನೆಲೆಯಿಂದ, ಆ ಮಟ್ಟಿಗೆ, ಭಾಷಾಂತರ ಕಾರ್ಯಪ್ರವೃತ್ತನಾಗಿರುವ ಆ ಪ್ರತಿನಿಧಿಯು ತನ್ನಲ್ಲಿ ಅಂಥ ಉದ್ದೇಶವಿರದಿದ್ದರೂ ಭಾಷೆಯ ಪರವಾಗಿ ನಿರ್ವಹಿಸಿದ ಭೂಮಿಕೆಯು ಎಂಥದು ಎನ್ನುವುದನ್ನು ಪರಿಶೀಲಿಸಲು ಬಯಸುತ್ತೇನೆ.

ಸ್ತ್ರೀವಾದಿ ಭಾಷಾಂತರಕಾರಳ ಕೆಲಸ ಭಾಷೆಯು ಜೆಂಡರ್ಡ್ ಪ್ರತಿನಿಧಿತ್ವದ ಕಾರ್ಯಕ್ಕೆ ಒಂದು ಸುಳಿವು ಎಂದು ಗಣಿಸುವುದಾಗಿದೆ. ಲೇಖಕಿಯು, ಸಹಜವಾಗಿಯೇ, ತನ್ನ ಭಾಷೆಯಿಂದ ಬರೆಯಲ್ಪಟ್ಟಿರುತ್ತಾಳೆ. ಆದರೆ ಲೇಖಕಿಯೊಬ್ಬಳ ಬರಹ ತನ್ನ ಏಜೆನ್ಸಿ - ಪ್ರತಿನಿಧಿತ್ವ - ವನ್ನು ಹೇಗೆ ಬರೆದಿರುತ್ತದೆಂದರೆ ಅದು ಬ್ರಿಟಿಶ್ ಸ್ತ್ರೀವಾದದ (ಫೆಮಿನಿಸಂನ) ಚರಿತ್ರೆಯುಳ್ಳ ಮಹಿಳೆ/ನಾಗರಿಕಳ ಬರವಣಿಗೆಗಿಂತ ಭಿನ್ನವಾಗಿರುತ್ತದೆ. ಮೇಲೆ ಹಾಗೆಯೇ ಆಕೆಯನ್ನು ಅದು ಬ್ರಿಟಿಶ್‌ನ ಗತ ಸಾಮ್ರಾಜ್ಯಶಾಹಿ, ಜನಾಂಗದ್ವೇಷದ ಇಂದು ಹಾಗೂ ಮೇಡ್-ಇನ್-ಬ್ರಿಟನ್ ಪುರುಷ ಪ್ರಾಧಾನ್ಯತೆಯ ಚರಿತ್ರೆಯಿಂದ ವಿಮೋಚನೆಗೊಳಿಸುತ್ತ ಗಮನ ಕೇಂದ್ರೀಕರಿಸಿರುತ್ತದೆ.

೩೨

ಭಾಷಾಂತರ ಓದಿನ ಹಾಗೆ

ಭಾಷಾಂತರಕಾರ್ತಿಯೊಬ್ಬಳು ತಾನು ಭಾಷಾಂತರಗೊಳಿಸಬೇಕಾದ ಭಾಷೆಯ ನಿರ್ದಿಷ್ಟತೆಯನ್ನು ಹೇಗೆ ನಿರ್ವಹಿಸುತ್ತಾಳೆ? ಪ್ರತಿಯೊಂದು ಭಾಷೆಯಲ್ಲು ಇರುವ ಭಾಷಾಲಂಕಾರ(ರೆಟರಿಕ್)ದ ಸ್ವಭಾವ ಅದರ ತಾರ್ಕಿಕ ಕ್ರಮಕ್ಕೆ ಅಡಚಣೆಯುಂಟುಮಾಡುವ ಕ್ರಮವೊಂದನ್ನು ನಿಕ್ಷೇಪಿಸಿಕೊಂಡಿರುತ್ತದೆ. ನಾವು ರೆಟರಿಕಲ್ ಅಡಚಣೆಗಳನ್ನು ಉಪೇಕ್ಷಿಸಿ ತಾರ್ಕಿಕತೆಯನ್ನು ಉಳಿಸಿಕೊಳ್ಳುವುದಾದರೆ ನಾವು ಸುರಕ್ಷಿತರಾಗಿರುತ್ತೇವೆ. ಸುರಕ್ಷೆ ಎನ್ನುವುದು ಇಲ್ಲಿ ಸರಿಯಾದ ಮಾತು. ಏಕೆಂದರೆ ನಾವಿಲ್ಲಿ ಅಪಾಯಕ್ಕೆ ತೆರೆದುಕೊಳ್ಳುವುದರ -ರಿಸ್ಕ್‌ಗಳ-ಬಗ್ಗೆ ಭಾಷಾಂತರಗೊಳಿಸುವ ಮಾಧ್ಯಮದ ಬಗ್ಗೆ ಮಾತಾಡುತ್ತಿರುತ್ತೇವೆ.[1]

ಆ ರಿಸ್ಕ್‌ಗಳನ್ನೆಲ್ಲ ನಾನು ತೆಗೆದುಕೊಳ್ಳುತ್ತಿದ್ದೇನೆ ಎಂದು ನನಗೆ ಅನ್ನಿಸಿದ್ದು ಈಚೆಗೆ ಹದಿನೆಂಟನೇ ಶತಮಾನದ ಬಂಗಾಳೀ ಕಾವ್ಯವನ್ನು ನಾನು ಭಾಷಾಂತರ ಮಾಡಿದಾಗ. ಅನುವಾದಕರ ಮುನ್ನುಡಿಯಿಂದ ಕೆಲ ಮಾತುಗಳನ್ನು ಇಲ್ಲಿ ಉಲ್ಲೇಖಿಸುತ್ತೇನೆ: ಶಾಲೆಯಲ್ಲಿರುವಾಗ ನನಗೆ ಕಲಿಸಿದ್ದನ್ನು ನಾನೀಗ ಮೀರಬೇಕಿದೆ. ಅದು -ಕಲಿಸಿದ್ದು- ಅತ್ಯಂತ ಸಮರ್ಪಕವಾದ ಸಾಮ್ಯಪದಗಳ ಪಟ್ಟಿಯನ್ನು ತಯಾರಿಸಿ ಅದನ್ನು ವ್ಯಾಕರಣಬದ್ಧವಾಗಿ ಕೋದರೆ ಅತಿಹೆಚ್ಚು ಅಂಕಗಳು ಎನ್ನುವುದನ್ನು. ನಾನು ಮಡಿವಂತ ವಿಕ್ಟೋರಿಯನ್ ಗದ್ಯಕಾವ್ಯದ ಸಂಸ್ಕಾರವನ್ನು ಪ್ರತಿರೋಧಿಸಬೇಕಾಗಿದೆ, ಅಂತೆಯೇ ಬಲವಂತವಾಗಿ ಹೇರಿದ ಅಲಂಕಾರರಹಿತ ಇಂಗ್ಲಿಷ್‌ನ ಸರಳತೆಯನ್ನೂ. ಅವೆರಡೂ ತಮ್ಮ ಮೇಲೆ ಆಯಾ ಸ್ವಭಾವವನ್ನು ನಿಯಮವೆಂಬಂತೆ ಆರೋಪಿಸಿಕೊಂಡಿವೆ. ಭಾಷಾಂತರವೆನ್ನುವುದು ಅತ್ಯಂತ ಆಪ್ತವಾದ ಓದುವ ಕ್ರಿಯೆ. ಅನುವಾದ ಕಾರ್ಯದಲ್ಲಿ ತೊಡಗಿದಾಗ ನಾನು ಪಠ್ಯಕ್ಕೆ ಶರಣಾಗಿ ಹೋಗಿರುತ್ತೇನೆ. ನಾನು ಹುಟ್ಟುವುದಕ್ಕಿಂತ ಮೊದಲಿನಿಂದಲೂ ನಮ್ಮ ಮನೆಯಲ್ಲಿ ಅನುದಿನವೂ ಹಾಡುತ್ತಿದ್ದ ಈ ಹಾಡುಗಳ ಜೊತೆ ನನಗೆ ಒಂದು ವಿಚಿತ್ರ ರೀತಿಯ ಆಪ್ತತೆಯಿದೆ. ಓದುವುದು ಮತ್ತು ಶರಣಾಗುವುದು ಇಂಥ ಕಡೆ ಹೊಸ ಅರ್ಥಗಳನ್ನು ಪಡೆದುಕೊಳ್ಳುತ್ತವೆ. ಭಾಷಾಂತರಕಾರಳು ಕೃತಿಯನ್ನು, ಆ ಇನ್ನೊಬ್ಬಳ ಛಾಪನ್ನು, ಮೀರಲು ಅನುಮತಿಯನ್ನು ಗಳಿಸಿಕೊಳ್ಳುತ್ತಾಳೆ; ಮನೋಲೋಕದಲ್ಲಿ, ಸ್ಮೃತಿಯಲ್ಲಿ, ಆತ್ಮದ ಅತ್ಯಂತ ನಿಕಟ ಸ್ಥಳಗಳಲ್ಲಿ.

ಭಾಷೆ ಎಲ್ಲವೂ ಅಲ್ಲ. ಅದು ಆತ್ಮ ಎಲ್ಲಿ ತನ್ನ ಸೀಮೋಲ್ಲಂಘನೆ ಮಾಡುತ್ತದೆ ಎನ್ನುವುದಕ್ಕೆ ಸುಳಿವು ಮಾತ್ರ. ತಾರ್ಕಿಕತೆಗೆ ರೆಟರಿಕ್ ಅಥವಾ ಆಕೃತಿ ಹೇಗೆ ಅಡ್ಡಿಪಡಿಸುತ್ತದೆ ಎನ್ನುವುದು ಭಾಷೆಯ ಮತ್ತು ಭಾಷೆಯ ಸುತ್ತ ಇರುವ ಅತಾತ್ತ್ವಿಕ ಸಂಭವನೀಯತೆ(random contingency)ಯ ಸಾಧ್ಯತೆಯನ್ನು ತೋರುತ್ತಿರುತ್ತದೆ. ಅಂತಹ ಬೆಳವಣಿಗೆ/ಪ್ರಸರಣ ನಮ್ಮ ನಿಯಂತ್ರಣದಲ್ಲಿ ಇರುವುದು ಸಾಧ್ಯವಿಲ್ಲ. ಆದರೂ, ಅರ್ಥವೆನ್ನುವುದು ಎರಡು ಹೆಸರಾಂತ ಚಾರಿತ್ರಿಕ ಭಾಷೆಗಳ ವಿಶಾಲ ನಿರ್ವಾತದಲ್ಲಿಗೆ/ಖಾಲಿತನಕ್ಕೆ ನೆಗೆಯುವ ಭಾಷಾಂತರ ಪ್ರಕ್ರಿಯೆಯಲ್ಲಿ ನಾವು ಅಪಾಯಕರವೆನ್ನುವಷ್ಟು ಹತ್ತಿರ ಹೋಗಿಬಿಡುತ್ತೇವೆ. ಆಘಾತಕಾರಿಯಾದ ರೆಟಾರಿಸಿಟಿ ವಸ್ತುವಿನ ಹೊರರೂಪವನ್ನು ಛಿದ್ರಗೊಳಿಸುತ್ತದೆ - ಅದಕ್ಕೇನು ಒಂದಕ್ಕೊಂದು ಸಂಬಂಧಿಸಿದ ಪ್ರಕ್ರಿಯೆಗಳೇ ಆಗಬೇಕೆಂದಿಲ್ಲ. ಅಂತಹ ರೆಟಾರಿಸಿಟಿಯನ್ನು ಕಣ್ಕಟ್ಟು ಮಾಡಿ ಮುಚ್ಚಿಟ್ಟು ನಾವು ಭಾಷಾ-ವಸ್ತ್ರದ

ಜರಿಕಲಾಪತ್ತುಗಳು ಬಿಚ್ಚಿ ಮೈ ತೆರೆದುಕೊಂಡವು ಎಂದು ಭಾವಿಸುತ್ತೇವೆ; ಸುಗಮವಾಗಿಸುವತ್ತ ದಾಳಿ ಮಾಡುವ ಹಾಗೆ ನುಗ್ಗುತ್ತೇವೆ. ಸಂವಹನದ ಅಥವಾ ಓದಿನ ಪ್ರತಿಯೊಂದು ಕ್ರಿಯೆಯೂ ದಾಳಿಯಂತೆಯೇ. ಕೊಂಚ ಅಪಾಯಕಾರಿ. ಆದರೂ ಅದು ಹೇಗೋ ಒಂದು ನೇರ್ಪು-ವ್ಯವಸ್ಥೆಯನ್ನು ಏರ್ಪಡಿಸಿಕೊಳ್ಳುತ್ತದೆ. ಸಂವಹನದಲ್ಲಿ ಮತ್ತು ಪ್ರೀತಿಯ ಅಥವಾ ಪ್ರೀತಿಯನ್ನು ಕುರಿತ ಓದಿನ ಹೊರತಾಗಿ ಆ ಪ್ರತಿನಿಧಿಯಲ್ಲಿನ ನಮ್ಮ ಪಾಲು ದಾಳಿಯನ್ನು ಆದಷ್ಟೂ ಕನಿಷ್ಠ ಮಟ್ಟದಲ್ಲಿರುವಂತೆ ನೋಡಿಕೊಳ್ಳುತ್ತದೆ. (ನೈತಿಕತೆಯಲ್ಲಿ, ನೈತಿಕವಾದದಲ್ಲಿ ಪ್ರೀತಿಯ ಸ್ಥಾನ ಯಾವುದು?) ಭಾಷಾಂತರಕಾರಳ ಕೆಲಸ ಕೃತಿಯ ಮೂಲ ಮತ್ತು ಛಾಯಾ ರೂಪಗಳ ನಡುವೆ ಇಂತಹ ಪ್ರೀತಿಯನ್ನು ಆಗುಮಾಡುವುದರಲ್ಲಿದೆ. ಈ ಪ್ರೀತಿ ದಾಳಿಕೋರತನವನ್ನು ಮಾನ್ಯಮಾಡುತ್ತದೆ. ಈ ಪ್ರೀತಿ ಭಾಷಾಂತರಕಾರಳ ಪ್ರತಿನಿಧಿಯನ್ನು ಮತ್ತು ಅವಳ ಕಲ್ಪಿತ ಅಥವಾ ವಾಸ್ತವ ಶ್ರೋತೃಗಳನ್ನು ದೂರ ದೂರದಲ್ಲಿ ನಿಲ್ಲಿಸುತ್ತದೆ. ಯೂರೋಪೇತರ ಲೇಖಕಿಯ ಪಠ್ಯದ ಭಾಷಾಂತರದ ರಾಜಕಾರಣವು ಬಹಳ ಸಲ ಈ ಸಾಧ್ಯತೆಯನ್ನು ದಮನಗೊಳಿಸುತ್ತದೆ. ಏಕೆಂದರೆ ಭಾಷಾಂತರಕಾರಳು ಮೂಲ ಕೃತಿಯ ರೆಟಾರಿಸಿಟಿಯ ಜೊತೆ ಸಂಗಾತದಲ್ಲಿ ತೊಡಗಿಕೊಳ್ಳುವುದಿಲ್ಲ ಅಥವಾ ಅದರ ಬಗ್ಗೆ ಅಗತ್ಯವಿರುವಷ್ಟು ಜಾಗ್ರತೆ ವಹಿಸುವುದಿಲ್ಲ.

ಕೃತಿಯೊಂದು ಅರ್ಥಪೂರ್ಣವಾಗಿರುವುದಿಲ್ಲ ಎಂಬ ಸರಳ ಸಾಧ್ಯತೆಯನ್ನು ರೆಟರಿಕಲ್ ವ್ಯವಸ್ಥೆಯು ಅಡಗಿಸಿಕೊಂಡಿರುತ್ತದೆ. ಅದು ಭಾಷೆಯ ಹೊರಗೆ ಇರುವ ಆವರಣ - ಸ್ಪೇಸ್ - ದಲ್ಲಿ ಸದಾ ಸಾಧ್ಯವಿರುವ/ಸಂಭವನೀಯ ವಿಪತ್ತು. ಅದು ಆ ಆವರಣದಲ್ಲಿರುವ ಬುದ್ಧಿವಂತ ಮಂದಿಯ ಜೊತೆ ಸಂವಹನವನ್ನು ಏರ್ಪಡಿಸಿಕೊಳ್ಳಲು (ಮತ್ತು ಅದನ್ನು ಎದುರಿಸಲು) ಅಳುಕಿನಲ್ಲೇ ಮುಂದಾದದ್ದು. (ಸಂಪೂರ್ಣ ಸ್ವಿತ್ವಂತರ ಅಥವಾ ಅನನ್ಯತೆಯು ಹೀಗೆ ಪ್ರತ್ಯೇಕವಾಗುತ್ತವೆ; ಅದೆಷ್ಟೇ ಕನಿಷ್ಠ ಮಟ್ಟದಲ್ಲಿರಲಿ, ನಮ್ಮನ್ನು ಹೋಲುವ ಮತ್ತು ನಮ್ಮೊಂದಿಗೆ ಸಂವಹಿಸಲು ಸಾಧ್ಯವಿರುವ ಮತ್ತೊಬ್ಬಳೆಡೆಗೆ ಅದು ಸಾಗಿಸಲ್ಪಡುತ್ತದೆ.) ಆದರೆ ಎರಡು ಮಣ್ಣು ಘಮಲಿನ ಭಾಷೆಗಳ ನಡುವೆ ಅದರ ಅಭಿನಯ ಹೆಚ್ಚು ನಿಕಟವಾಗಿರುತ್ತದೆ. ಬೇರೊಂದು ಸಾಂಸ್ಕೃತಿಕ ಸಂದರ್ಭದಲ್ಲಿ ಬಳಕೆಯಾಗುವ ಪರಕೀಯ ಭಾಷೆಯೊಂದರಲ್ಲಿನ ಅಂತರ್ಗತ ಅನನ್ಯತೆಯ ಅನುಭವವು ಅನ್ಯರಿಗೆ ಯಾವಾಗಲೂ ಸಹಜವಾಗಿರುವುದಿಲ್ಲ.

ಈಗ ನಾವು ಆ ಅನ್ಯ ಭಾಷೆಯಲ್ಲಿ ಪ್ರತಿನಿಧಿಯ ಸೃಷ್ಟಿಗೆ ಸಂಬಂಧಿಸಿದಂತೆ ತರ್ಕದ ಕಾರ್ಯಕ್ಕೆ ರೆಟರಿಕ್ ಅಡ್ಡಿ ಮಾಡುತ್ತಿರುತ್ತದೆ ಹಾಗೂ ರೆಟರಿಕ್‌ನ ಒಳಗೇ ಇದ್ದು ಕೆಲಸಮಾಡುತ್ತಿರುವ ಮೌನದ ಸೃಷ್ಟಿಮೂಲದ ಹಿಂಸೆಯನ್ನು ಸೂಚಿಸುತ್ತಿರುತ್ತದೆ ಎಂದು ಭಾವಿಸೋಣ. ಸ್ಪಷ್ಟವಾಗಿ ಸೂಚಿಸಲಾದ ಸಂಪರ್ಕಗಳ ಮೂಲಕ ಪದದಿಂದ ಪದಕ್ಕೆ ಮುಂದುವರಿಯಲು ನಮಗೆ ತರ್ಕ ಅವಕಾಶ ಮಾಡಿಕೊಡುತ್ತದೆ. ಯಾವುದು ಎಷ್ಟು ಕೆಲಸ ಮಾಡುತ್ತಿದೆ ಎನ್ನುವುದನ್ನು ಅರಿಯಲು ರೆಟರಿಕ್‌ಗೆ ಪದಗಳ ನಡುವಿನ, ಪದಗಳ ಸುತ್ತಲಿನ ಮೌನದಲ್ಲಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ರೆಟರಿಕ್ ಮತ್ತು ತರ್ಕಗಳ ನಡುವೆ ಇರುವುದು ಕಣಿವೆ ತಿಟ್ಟುಗಳ ಹಾಗಿನ ಸಂಬಂಧ. ಅರಿಯುವುದರ ಸ್ಥಿತಿ ಮತ್ತು ಪರಿಣಾಮ - ಇವು ಸಹ ಒಂದು ಸಂಬಂಧವೇ. ಈ ಸಂಬಂಧದ ಮೂಲಕವೇ ಪ್ರತಿನಿಧಿಗೆ ಎಂದು ವಿಶ್ವವೊಂದು ಸೃಷ್ಟಿಯಾಗಿರುತ್ತದೆ. ಇದರಿಂದ ಪ್ರತಿನಿಧಿಯು ಋಜುಮಾರ್ಗದಲ್ಲಿ, ರಾಜಕೀಯವಾಗಿ ಅನುದಿನ ಕೆಲಸ ಮಾಡಲು, ಆ ಮೂಲಕ ಅವನು ವಿಶ್ವದಲ್ಲಿ ಮಾನವನಾಗಿ

ಜೀವಂತವಿರಲು ಸಾಧ್ಯವಾಗುತ್ತದೆ. ಇಂತಹ ಮಾದರಿಯೊಂದನ್ನು ಕಟ್ಟಿಕೊಂಡ ಹೊರತು ನಿಜವಾದ ಭಾಷಾಂತರ ಸಾಧ್ಯವಾಗಲಾರದು.

ದುರದೃಷ್ಟಕರವೆಂದರೆ ನಾವು ಈ ಕಾರ್ಯವನ್ನು ಸಂಪೂರ್ಣವಾಗಿ ಬಿಟ್ಟುಬಿಟ್ಟರೆ ಭಾಷಾಂತರ ಕೃತಿಗಳ ಸೃಷ್ಟಿಯು ಬಹಳ ಸುಲಭವಾಗಿಬಿಡುತ್ತದೆ. ಸ್ವತಃ ನನಗೇ ತುರ್ತಿನ, ಸುಲಭದ, ಬೇಜವಾಬ್ದಾರಿಯ ಕೆಲಸಕ್ಕೂ, ಪ್ರಯಾಸದಿಂದ ಚೆನ್ನಾಗಿ ಭಾಷಾಂತರ ಮಾಡಬೇಕಾಗುವುದಕ್ಕೂ ನಡುವೆ ಆಯ್ಕೆಗಳಿಲ್ಲ. ಜವಾಬ್ದಾರಿಯ ಭಾಷಾಂತರದಲ್ಲಿ ಆ ಕಾರ್ಯಕ್ಕೆ ಹೆಚ್ಚು ಸಮಯ ತೆಗೆದುಕೊಳ್ಳುವುದಕ್ಕೆ ಕಾರಣಗಳಿಲ್ಲ. ಭಾಷಾಂತರಕಾರರ ಪೂರ್ವಸಿದ್ಧತೆಗೆ ಹೆಚ್ಚು ಕಾಲ ತಗುಲಬಹುದು. ಪಠ್ಯವನ್ನು ಕುರಿತ ಅವಳ ಒಲವು ಓದುವ ವಿಧಾನವನ್ನು ಕುರಿತಂತೆಯೂ ಇರಬಹುದು. ಅದಕ್ಕೆ ಹೆಚ್ಚಿನ ತಾಳ್ಮೆಯ ಅಗತ್ಯವೂ ಬರಬಹುದು. ಆದರೆ ಪಠ್ಯದ ಉತ್ಪಾದನೆಯ ಕಾರ್ಯ ಮಂದಗತಿಯದ್ದಾಗಬೇಕಿಲ್ಲ.

ಭಾಷೆಯ ರೆಟರಿಸಿಟಿಯ ಪರಿಜ್ಞಾನವಿಲ್ಲದೆಯು ಪಶ್ಚಿಮೇತರ ಸಂದರ್ಭವನ್ನು ಕಟ್ಟಿ ನೋಡುವ ನವವಸಾಹತು ಧೋರಣೆಯೊಂದು ಹುಟ್ಟಿಕೊಂಡಿದೆ. ಇಲ್ಲಿ ಅನುಕೂಲದ ಯಾವ ವಾದವೂ ನಿಲ್ಲುವುದಿಲ್ಲ. ಅದು ಸದಾಕಾಲ ವಾದವಾಗಿಯೆ ಉಳಿಯುತ್ತದೆ ಎನ್ನಿಸುತ್ತದೆ. ಇಲ್ಲಿ ನಾನು ರಾಚನಿಕೋತ್ತರವಾದದ - ಪೋಸ್ಟ್ ಸ್ಟ್ರಕ್ಚರಲಿಸಂನ - ಕಾಲದಲ್ಲಿ ಭಾಷೆಯ ಪ್ರಶ್ನೆಯನ್ನು ಕುರಿತ ಮಿಚೆಲ್ ಬ್ಯಾರೆಟ್‌ಳ ಅಭಿಪ್ರಾಯದಿಂದ ಹೊರಬರುತ್ತೇನೆ. ರಾಚನಿಕೋತ್ತರವಾದವು ನಮ್ಮಲ್ಲಿನ ಒಂದಷ್ಟು ಜನರಿಗೆ, ಭಾಷೆಯ ಮೂರು ಸ್ತರಗಳ (ರೆಟರಿಕ್, ತರ್ಕ ಮತ್ತು ಮೌನ) ಒಳಗೆ, ಪ್ರತಿನಿಧಿಯ ರಂಗಪ್ರವೇಶವನ್ನು ಅನಾವರಣಗೊಳಿಸುತ್ತದೆ. ನಾವು ಆ ರಂಗವನ್ನು ಪ್ರವೇಶಿಸಬೇಕು. ಇಲ್ಲವೇ ಆ ರಂಗಪ್ರವೇಶವನ್ನು ನಿರ್ದೇಶಿಸಬೇಕು. ಅದು ನಿರ್ದೇಶಕನೊಬ್ಬ ನಾಟಕವನ್ನು ನಿರ್ದೇಶಿಸುವಂತೆ, ನಟನೊಬ್ಬ ಚಿತ್ರಕಥೆಯನ್ನು ವ್ಯಾಖ್ಯಾನಿಸುವಂತೆ. ಅದು ಭಾಷಾಂತರವನ್ನು ಪರ್ಯಾಯ ಪದ, ವಾಕ್ಯರಚನೆ ಮತ್ತು ಸ್ಥಳೀಯ ಪರ್ಯಾವರಣದ ವರ್ಣಲೇಪ ಎಂದು ಗ್ರಹಿಸುವುದಕ್ಕಿಂತ ಬೇರೆಯೇ ಆದ ಪರಿಶ್ರಮವನ್ನು ಬೇಡುವಂಥದ್ದು.

ಭಾಷಾಂತರದ ಬಗ್ಗೆ ಟೀಕೆಯನ್ನಷ್ಟೇ ಉಳಿಸಿಕೊಳ್ಳುವುದು ಮತ್ತು ಯುಟೋಪಿಯನ್ ಭಾಷಾಂತರಕಾರನ ಸೃಷ್ಟಿಯವರೆಗೂ ಭಾಷಾಂತರ ಕಾರ್ಯವನ್ನು ಮುಂದೂಡುತ್ತ ಹೋಗುವುದು ಕಾರ್ಯಸಾಧುವಲ್ಲದ ವಿಚಾರ. ಆದರೂ ಇಂಗ್ಲಿಷ್‌ನಲ್ಲಿ ಮಾತನಾಡಲು ಒಪ್ಪಿದ ಡೆರಿಡ, ಫ್ರೆಂಚ್ ಮತ್ತು ಇಂಗ್ಲಿಷ್ ನಡುವಣ ಕಷ್ಟಗಳನ್ನು ವಿವರಿಸುತ್ತ ಹೇಳುವ ನಾನು ನನ್ನದಲ್ಲದ ಭಾಷೆಯಲ್ಲಿ ಮಾತನಾಡಬೇಕು. ಏಕೆಂದರೆ ಅದು (ಪ್ರಸ್ತುತ) ಸರಿಯಾದುದು ಎಂಬ ಅತ್ಯಂತ ಸಮರ್ಥನೀಯವಾಗಿರುವ ಮಾತು ಕೇಳಿದಾಗ ಅದೇ ಮಹತ್ವವನ್ನು ಪಡೆಯುವ ಹಕ್ಕು ಅರಬ್ಬೀ ಅಥವಾ ವಿಯೆಟ್ನಾಮೀ ಭಾಷೆಯಲ್ಲಿ ಮಹಿಳೆಯೊಬ್ಬರು ಬರೆದ ಪಠ್ಯಕ್ಕೂ ಇರಬೇಕಾಗುತ್ತದೆ ಎಂದು ನಾನು ದಾವೆ ಹೂಡುತ್ತೇನೆ.[4]

ಅತ್ಯಧಿಕ ಸಂಖ್ಯೆಯಲ್ಲಿ ಸ್ತ್ರೀವಾದಿಗಳಿಗೆ ಅವಕಾಶ ಕಲ್ಪಿಸಬೇಕು ಎನ್ನುವುದು ಹೆಚ್ಚು ನ್ಯಾಯಯುತವಾದುದು. ಆದ್ದರಿಂದ ಈ ಪಠ್ಯಗಳು ಇಂಗ್ಲಿಷ್‌ನಲ್ಲಿ ಮಾತಾಡುವಂತೆ ಮಾಡಬೇಕು. ಆತಿಥ್ಯ ನೀಡುವಂಥ ಬಹಳ ಮಂದಿ ಸ್ತ್ರೀವಾದಿಗಳು ಅನ್ಯ ದೇಶೀಯ ಸ್ತ್ರೀವಾದಿಗಳಿಗೆ ಇಂಗ್ಲಿಷ್

ನಲ್ಲಿ ಮಾತನಾಡುವ ಅಧಿಕಾರ ಕೊಟ್ಟಾಗ ಬಹುಸಂಖ್ಯಾತರ ಭಾಷೆಯಲ್ಲಿ ಮಾತನಾಡುವುದು ಸಮರ್ಥನೀಯವಾದುದು. ತೃತೀಯ ಜಗತ್ತಿನ ವಿದೇಶಿಯ ವಿಚಾರದಲ್ಲಿ ಬಹುಸಂಖ್ಯಾತರ ನಿಯಮಗಳ ನಡಾವಳಿ, ಪ್ರಜಾಪ್ರಭುತ್ವದ ಸರ್ವರಿಗೂ ಸಮಪಾಲಿನ ಹಕ್ಕು - ಇವುಗಳು ಅನ್ವಯವಾಗಬೇಕೋ ಅಥವಾ ಅನ್ವಯವಾಗಬೇಕಾದದ್ದು ಶಕ್ತಿವಂತರ ಕಾನೂನೋ? ನಾವು ಈ ಗೊಂದಲದ ಬಗ್ಗೆ ಗಮನಹರಿಸಬಹುದು. ಪಶ್ಚಿಮದ ಸ್ತ್ರೀವಾದಿ ನೆಟ್ಟನೋಟದ (ಗೇಜ್) ವಿಚಾರದಲ್ಲಿ ಡಾಂಬಿಕವಾದುದೇನೂ ಗೋಚರಿಸುವುದಿಲ್ಲ. (ಜಾಕಸ್ ಲಕಾನ್‌ನ ರಾಜಕೀಯ ಸಮೂಹ ವರ್ತನೆಯ ಪರಿಭಾಷೆಯಲ್ಲಿ ನೆಟ್ಟನೋಟದ ಮಾನಸಿಕ ರಚನೆಯ ಚಿತ್ರೀಕರಣವನ್ನು ಸ್ವಾಭಾವಿಕೀಕರಣಗೊಳಿಸಿದ್ದು (ನ್ಯಾಚುರಲೈಸಿಂಗ್) ನನಗೆ ಸದಾ ಅಲುಗಾಡುವುದೆಂಬಂತೆ ತೋರಿದೆ). ಬದಲಿಗೆ ಬಹುಸಂಖ್ಯಾತ ನಿಯಮಕ್ಕೆ ಅಂತಹ ಘನತೆ ಏನೂ ಇಲ್ಲ. ಅದು ಅಲ್ಪಸಂಖ್ಯಾತರ ಬಗ್ಗೆ ಡೆಮಾಕ್ರಾಟಿಕ್ ಆಗಿರುವುದಕ್ಕೆ ಇರುವ ಸುಲಭ ಮಾರ್ಗವಷ್ಟೆ. ಇಂಗ್ಲಿಷ್‌ಗೆ ಮಾಡುವ ಸಗಟು ಭಾಷಾಂತರ ಕಾರ್ಯದಲ್ಲಿ ಡೆಮೋಕ್ರಾಟಿಕ್ ಐಡಿಯಾವನ್ನು ಬಹುಸಂಖ್ಯಾತರ ನಿಯಮಗಳ ಅಡಿಗೆ ನೂಕುವ ವಿಶ್ವಾಸಘಾತುಕತನ ಇರಬಹುದು. ಇದು ಸಂಭವಿಸುವುದು ತೃತೀಯ ಜಗತ್ತಿನ ಎಲ್ಲ ಸಾಹಿತ್ಯವೂ ತಾನು ಒಳಗೊಳ್ಳುವ ನುಡಿಗಟ್ಟಿನ ಅಥವಾ ವಾಕ್ಯರಚನೆಯ ಅತಿ ಗ್ರಾಂಥಿಕ ಭಾಷಾಂತರಕ್ಕೆ ಒಳಗಾದಾಗ. ಇದನ್ನು ವಿಕಾರವೆಂದು ಅಥವಾ ನಿಷಿದ್ಧ ವ್ಯಾಕರಣದ ಭಾಷಾಂತರ ಎಂದು ಭಾವಿಸಬೇಕಾಗುತ್ತದೆ. ಹಾಗೆ ಆದಾಗ ಪ್ಯಾಲೆಸ್ಟೀನಿನ ಮಹಿಳೆಯೊಬ್ಬರ ಸಾಹಿತ್ಯ ಅದರ ಗದ್ಯದ ಓದಿನ ಅನುಭವದಲ್ಲಿ ತೈವಾನಿನ ಪುರುಷರೊಬ್ಬರ ಸಾಹಿತ್ಯದಂತೆಯೇ ತೋರಲು ಆರಂಭಿಸುತ್ತದೆ. ಚೀನೀ ಹಾಗೂ ಅರೇಬಿಕ್ ರೆಟರಿಸಿಟಿ! ಅತಿ ಹೆಚ್ಚು ಆರ್ಥಿಕ ವೃದ್ಧಿ ಪ್ರದರ್ಶಿಸುತ್ತಿರುವ ಏಶಿಯಾ ಪೆಸಿಫಿಕ್ ಮತ್ತು ಹಾಳಾಗಿರುವ ಪಶ್ಚಿಮ ಏಶಿಯಾಗಳ ಸಾಂಸ್ಕೃತಿಕ ರಾಜಕಾರಣ! ಈ ವ್ಯತ್ಯಾಸಗಳಲ್ಲಿ ಅಚ್ಚೊತ್ತಿರುವ, ಅಚ್ಚೊತ್ತಲಾಗುತ್ತಿರುವ ಲಿಂಗ ತಾರತಮ್ಯ ಭೇದಗಳು!

ವಿದ್ಯಾರ್ಥಿಯ ಮಟ್ಟಿಗೆ ಹೇಳುವುದಾದರೆ ಈ ಬಳಲಿಸುವ, ಬೇಸರ ತರುವ translatese - ವಿಕಾರ ಅಥವಾ ನಿಷಿದ್ಧ ವ್ಯಾಕರಣದ ಭಾಷಾಂತರ - ಮೋನೀಕ್ ವಿಟಿಗ್ ಅಥವಾ ಅಲೀಸ್ ವಾಕರ್‌ರ ಅತ್ಯದ್ಭುತ ಶೈಲೀಕೃತ ಬರವಣಿಗೆಯ ಜೊತೆ ಸ್ಪರ್ಧಿಸಲಾಗದು.

ಲೇಖಕಿಯರ ಶೈಲೀಕೃತ ಬರವಣಿಗೆಯನ್ನು ಗಮನಿಸುವುದು ಬೇರೆಯೇ ಆದ ಪಠ್ಯವನ್ನು ನಿರ್ಮಿಸುವ ಉದಾಹರಣೆಯೊಂದನ್ನು ನೋಡೋಣ. ಮಹಾಶ್ವೇತಾದೇವಿ ಅವರ ಸ್ತನದಾಯಿನಿ ಕೃತಿಯು ಎರಡು ಆವೃತ್ತಿಗಳಲ್ಲಿ ಲಭ್ಯವಿದೆ. ಮಹಾಶ್ವೇತಾದೇವಿ ಅವರಲ್ಲಿ ಬ್ರೆಸ್ಟ್ ಗಿವರ್ (ಮೊಲೆಯೂಡುವವಳು) ಎನ್ನುವ ಆವೃತ್ತಿಗೆ ತಮ್ಮ ಅಂಕಿತ ನೀಡಿದ್ದಾರೆ. ಅದು ಅವರ ಶೈಲಿಯ ತದ್ವತ್ ಭಾಷಾಂತರವಾಗಿದೆ. ಇನ್ನೊಂದು ಪರ್ಯಾಯ ಭಾಷಾಂತರ ಕೃತಿ ವೆಟ್ ನರ್ಸ್ ಎಂಬ ಹೆಸರನ್ನು ಹೊತ್ತಿದೆ. ಈ ಹೆಸರು ಲೇಖಕಿಯ ಉದ್ದೇಶವಾದ ಹೆಸರಿನ ಸೃಷ್ಟಿಯ ಹಿಂದಿನ ವ್ಯಂಗ್ಯವನ್ನು ಪರಿಣಾಮಶೂನ್ಯವಾಗಿಸಿದೆ. ಸ್ತನದಾಯಿನಿ ಎಂಬುದನ್ನು ಸೂಚಿಸಲು ಆ ಪದ ಸಾಕು, ಆದರೆ ಅದರ ಆಘಾತವನ್ನು ಉಂಟುಮಾಡುವುದಕ್ಕೆ ಅದು ಸಾಲದು. ಇದು ಡಿಲಾನ್ ಥಾಮಸ್‌ನ ಪ್ರಖ್ಯಾತ ಕೃತಿ ಮತ್ತು do not go gently into that good night ಎಂಬ ಮೊದಲ ಸಾಲನ್ನು ಅನುವಾದಕ ಭಾಷಾಂತರಿಸಲು ನಿರ್ಧರಿಸಬೇಕಾಗಿ ಬಂದ ಹಾಗೆ. ಮೊಲೆಯನ್ನು ಕಾರ್ಮಿಕ ಶಕ್ತಿಯ

ಒಂದು ಅವಯವ ಹಾಗೂ ಹಣ ಗಳಿಸಬಲ್ಲ ವಸ್ತು ಎಂದು, ಬೇರೆ ಒಂದು ವಸ್ತುವಿನ ಬದಲಿಗೆ ಆ ವಸ್ತುವನ್ನು ಸೂಚಿಸುತ್ತ ಅದು ನಿಂತಿರುವುದೆಂದು ಹೇಳಿದಂತೆ. ಹೆಣ್ಣಿನ ದೇಹಕ್ಕೆ ಸಂಬಂಧಿಸಿದ ಹಾಗೆ ಕಥೆ ಮಾರ್ಕ್ಸ್ ಮತ್ತು ಫ್ರಾಯ್ಡ್‌ರ ಜೊತೆ ಆಡುವುದು ನೀವು ಕಥೆಯನ್ನು ಪ್ರವೇಶಿಸುವ ಮೊದಲೇ ಅದು ಮುಗಿದುಹೋಗಿರುತ್ತದೆ. ಕಥೆಯಲ್ಲಿ ಮಹಾಶ್ವೇತಾದೇವಿ ಬಂಗಾಳಿಯಲ್ಲಿಯೇ ತಬ್ಬಿಬ್ಬುಗೊಳಿಸುವ ಗಾದೆಮಾತುಗಳನ್ನು ಬಳಸುತ್ತಾರೆ. ವೆಟ್ ನರ್ಸ್‌ನಲ್ಲಿ ಅನುವಾದಕರು ಅವನ್ನೆಲ್ಲ ಬಿಟ್ಟುಬಿಡುತ್ತಾರೆ. ಆಕೆ ವರ್ಗನಿಶ್ಚಿತ್ತ ಆಧುನಿಕತೆ - ಮಾಡರ್ನಿಟಿ -ಗೆ ಪ್ರವೇಶವಿರುವುದರ ತುಲನೆಯಲ್ಲಿ ತೊಡಗಿ ಮಣ್ಣಿನ ವಿವೇಕದ ಮಾತುಗಳಾದ ಇವನ್ನು ಭಾಷಾಂತರಿಸದೆ ಇರಲು ನಿರ್ಧರಿಸಿಬಿಡುತ್ತಾರೆ. ಈ ವರ್ಗನಿಶ್ಚಿತ್ತ ಆಧುನಿಕತೆಯನ್ನು ಸಹ ಕಥೆ ಪ್ರತಿನಿಧಿಸುತ್ತದೆ. ಈ ಎರಡೂ ಭಾಷಾಂತರಗಳನ್ನು ಒಂದರ ಪಕ್ಕದಲ್ಲಿ ಇನ್ನೊಂದನ್ನಿಟ್ಟುಕೊಂಡು ಓದಿದರೆ ರೆಟರಿಕಲ್ ಮೌನವು ಲುಪ್ತವಾಗಿ ಹೋಗಿರುವುದನ್ನು ಅವುಗಳ ಪರಸ್ಪರ ತುಲನೆಯಲ್ಲಿ ಕಾಣಬಹುದು.

ಹಾಗಾಗಿ ಭಾಷಾಂತರಕಾರರು ಮೊದಲು ಪಠ್ಯಕ್ಕೆ ಶರಣಾಗಬೇಕು. ತನ್ನ ಭಾಷೆಯ ಮಿತಿಗಳನ್ನು ತಿಳಿಸಿಕೊಡುವಂತೆ ಆಕೆ ಅದರ ಮನವೊಲಿಸಬೇಕು. ಏಕೆಂದರೆ ಆ ರೆಟರಿಕಲ್ ಅಂಶವು ಕಣದಲ್ಲಿರುವ ಭಾಷೆಯ ಮೌನವನ್ನು ಪಠ್ಯವು ತನ್ನದೇ ವಿಶಿಷ್ಟ ಬಗೆಯಲ್ಲಿ ದೂರ ತಳ್ಳುವ ವಿಚಾರದತ್ತ ಬೊಟ್ಟು ಮಾಡಿ ತೋರಿಸುತ್ತಿರುತ್ತದೆ. ಕೆಲವರು ಇದನ್ನು ಸಾಹಿತ್ಯ ಅಥವಾ ತತ್ತ್ವಜ್ಞಾನವನ್ನು ಕುರಿತು ಆಡುವ ಹಗುರ ನುಡಿಗಳು ಎಂದು ಭಾವಿಸುತ್ತಾರೆ. ನಾಲಗೆಯ ಮಾತುಗಳೆಷ್ಟೇ ಇದ್ದರೂ ಭಾಷಾಂತರವು ಅತ್ಯಂತ ಆಪ್ತವಾದ ಓದುವ ಕ್ರಮ ಎಂಬ ವಾಸ್ತವದ ಹತ್ತಿರ ಕೂಡ ಅವು ಸರಿಯಲಾರವು. ಭಾಷಾಂತರಕಾರಳು ಆ ಆಪ್ತ ಓದುಗಳಾಗಲು ಹಕ್ಕು ಪಡೆಯುಕೊಳ್ಳುವವರೆಗೂ ಆಕೆ ಪಠ್ಯಕ್ಕೆ ಶರಣಾಗಲಾರಳು; ಪಠ್ಯ ಬೇಡುವ ವಿಶೇಷ ಗಮನವನ್ನು ಅದಕ್ಕೆ ಆಕೆ ನೀಡಲಾರಳು.

ಹೆಣ್ಣಿಗೆ ಸ್ವಾಭಾವಿಕ ಅಥವಾ ಚಾರಿತ್ರಿಕ ಕಥನದ ಸಮಗ್ರತೆಯುಂಟು. ಆಕೆಯಲ್ಲಿ ಅಥವಾ ಪ್ರತ್ಯೇಕಿಸಿರದ ಹೆಣ್ಣಿನ ಕಥೆಯಲ್ಲಿ ಏನೋ ಒಂದು ಇದೆ. ಅದರಿಂದಾಗಿ ಇನ್ನೊಂದು ಹೆಣ್ಣಿನ ಸಂಗಡ ಭಾಷಾಕಲಿಕೆಯ ಪ್ರಯೋಜನದ ಅಗತ್ಯವಿಲ್ಲದೆಯೇ ಮಾತನಾಡಬಲ್ಲದು ಎನ್ನುವ ಪೂರ್ವಗ್ರಹಿಕೆಗಳು -ಪ್ರಿಸಪೋಸಿಷನ್ಸ್-ಭಾಷಾಂತರಕಾರರು ಪಠ್ಯಕ್ಕೆ ಶರಣಾಗುವ ಕ್ರಿಯೆಗೆ ಅಡ್ಡಿಯಾಗಬಲ್ಲವು. ಅಸಂಗತ ವಿಚಾರವೆಂದರೆ ನೈತಿಕ ಪ್ರತಿನಿಧಿಗಳಾಗಿ ನಮಗೆ ಅನ್ಯತೆ ಅಥವಾ ಅನನ್ಯತೆಗಳನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲದಿರುವುದು. ನೈತಿಕವಾಗಿರಬೇಕಾದರೆ ನಾವು ಅನ್ಯವಾದುದನ್ನು ಸ್ವಯಂ ನಮ್ಮಂತೆ ಪರಿವರ್ತಿಸಿಕೊಳ್ಳಬೇಕು.

ಭಾಷಾಂತರದಲ್ಲಿ ಮಣಿಯುವುದೆಂದರೆ ಅದು ನೈತಿಕ ಎನ್ನುವುದಕ್ಕಿಂತ ಹೆಚ್ಚು ಪ್ರಣಯಿಕ.[6] ಇಂಥ ಸನ್ನಿವೇಶದಲ್ಲಿ ಅವಳೂ ನನ್ನಂತೆ ಎನ್ನುವ ಮೇಲುಮೇಲಿನ ಒಳ್ಳೆಯತನದ ಗುಣ-ಧೋರಣೆ ಉಪಯೋಗವಿಲ್ಲದ್ದು. ಮಿಶೆಲೆ ಬ್ಯಾರೆಟ್‌ಳು ಗಾಯತ್ರಿ ಸ್ಪಿವಾಕ್ ಆಗಿಲ್ಲದಿರುವುದರಿಂದ ಅವರ ಸ್ನೇಹ ಭಾಷಾಂತರವಾಗಿ ಹೆಚ್ಚು ಪರಿಣಾಮಕಾರಿ. ಆ ಗೆಳೆತನವನ್ನು ಸಂಪಾದಿಸಿಕೊಳ್ಳುವ ಅಥವಾ ವ್ಯಕ್ತಿತ್ವವನ್ನು ತ್ಯಾಗಮಾಡುವ ಹಕ್ಕನ್ನು ಪಡೆಯಲು, ಪಠ್ಯದ ಜೊತೆಗೆ ನೀವಿರುವಷ್ಟು ಕಾಲ ಪಠ್ಯದ ರೆಟರಿಕ್ ಭಾಷೆಯ ಮಿತಿಗಳನ್ನು ನಿಮಗೆ ತೋರುತ್ತಿದೆ ಎನ್ನುವುದನ್ನು ಅರಿಯಲು, ನೀವು ಪಠ್ಯದ ಜೊತೆಗಷ್ಟೇ ಅಲ್ಲ, ಭಾಷೆಯ ಜೊತೆಗೂ ಬೇರೆಯೇ ಆದ ಸಂಬಂಧವನ್ನು ಹೊಂದಿರಬೇಕಾಗುತ್ತದೆ.

ಭಾಷಾಂತರವನ್ನು ಮಾಡುತ್ತ, ಕಲಿಯುತ್ತ ನನಗೆ ಬಂದ ಯೋಚನೆ; ಭಾಷಾಂತರ ಮಾಡುವವಳಿಗೆ ಯಾವ ಭಾಷೆಯಿಂದ ಭಾಷಾಂತರ ಮಾಡುತ್ತಿರುವಳೋ ಆ ಭಾಷೆಯಲ್ಲಿ ಮನಬಿಚ್ಚಿ ಮಾತಾಡಲು ಸಾಧ್ಯವಾದರೆ ಅದು ನಿಜಕ್ಕೂ ಭಾಷಾಂತರ ಕಾರ್ಯಕ್ಕೆ ಒದಗುವ ನಿಜವಾದ ಕಾರ್ಯಕ್ಕೊದಗುವ ಸಹಾಯ ಎನ್ನುವುದು. ಇದು ಕಾರ್ಯಕ್ಕೊದಗುವ ಸೂಚನೆ ಎನ್ನುವುದಕ್ಕಿಂತ ಹೆಚ್ಚಿನದೇನಲ್ಲ ಮತ್ತು ಸೈದ್ಧಾಂತಿಕ ಅಗತ್ಯವೂ ಅಲ್ಲ. ಪ್ರಯೋಜನಕಾರಿ, ವಿಶೇಷವಾಗಿ, ಏಕೆಂದರೆ ಉದ್ದೇಶಪೂರ್ವಕವಾಗಿಯೋ, ಅನುದ್ದೇಶಿತವಾಗಿಯೋ ಸ್ತ್ರೀವಾದಿಯಾದ ಒಬ್ಬ ಲೇಖಕಿ (ಮಹಿಳಾ ಲೇಖಕಿಯರೆಲ್ಲರೂ ಆ ಪರಿಭಾಷೆಯ ಸ್ಥೂಲ ಸ್ವರೂಪದಲ್ಲು ಸ್ತ್ರೀವಾದಿಗಳಲ್ಲ) ಭಾಷೆಯ(ಅಲ್ಲಿನ ಪ್ರತಿನಿಧಿಯ) ಮೂರು ಭಾಗದ ರಂಗಪ್ರವೇಶವನ್ನು ಖಾಸಗಿ ಎಂದು ವಿವರಿಸಲಾದ ಬಗೆಯಲ್ಲಿ ಹೇಳುತ್ತಿರುತ್ತಾಳೆ. ಏಕೆಂದರೆ ಅದಕ್ಕಿಂತ ಹೆಚ್ಚಿನ ಬಹಿರಂಗವಾದ ಭಾಷಿಕ ದೊಂಬರಾಟವನ್ನು ಪ್ರಾಯಶಃ ಪ್ರಶ್ನಿಸಲಾಗುವುದು.

ಮಾಧ್ಯಮದ ಜೊತೆ ಆತ್ಮೀಯತೆ ಇಲ್ಲವಾಗುವುದರ ಬಗ್ಗೆ ಒಂದು ಉದಾಹರಣೆಯನ್ನು ಪರಿಶೀಲಿಸೋಣ: ಸುಧೀರ್ ಕಕ್ಕರ್ ಅವರ ದಿ ಇನ್ನರ್ ವರ್ಲ್ಡ್ ಕೃತಿಯಲ್ಲಿ ಹತ್ತೊಂಬತ್ತನೇ ಶತಮಾನದ ಸನ್ಯಾಸಿ ವಿವೇಕಾನಂದರು ಬರೆದ ಕಾಳಿಯನ್ನು ಕುರಿತ ಹಾಡನ್ನು ಭಾರತೀಯ ಪುರುಷರ[7] ಆರ್ಷೇಯ ಆತ್ಮರತಿ(archaic narcissism)ಗೆ ಪುರಾವೆಯ ಒಂದು ಭಾಗವಾಗಿ ಉಲ್ಲೇಖಿಸಲಾಗಿದೆ. (ದೇವಿ ಕೃಷ್ಣ ಶಿವರ ಸಂಬಂಧದಲ್ಲಿ ಇದನ್ನೇ ಮೃದುವಾಗಿ ಸೈಕೋ-ಅನಾಲಿಸಿಸ್‌ನ ಬುಡುಬುಡಿಕೆಯಿಲ್ಲದೆ ಹೇಳುತ್ತಾರೆ: ಆತ್ಮರತಿಯ ಬದಲಿಗೆ ಅದನ್ನು ಸೆಕ್ಸಿನಂಗೆ ಅನ್ವಯಿಸಿ) ಕಕ್ಕರ್ ಅವರ ವಿವರಣೆಯಿಂದ ವಿವೇಕಾನಂದರು ಆ ಗೀತೆಯನ್ನು ರಚಿಸಿದ್ದರ ಹಿನ್ನೆಲೆಯನ್ನು ವಿವರಿಸಿದ ಆ ಶಿಷ್ಯನ ಚಿತ್ರವನ್ನು ಕಟ್ಟಿಕೊಳ್ಳಲು ಸಾಧ್ಯವಿಲ್ಲ: ಆ ಗೀತೆಯ ರಚನೆಯ ಸಂದರ್ಭ ಆ ಐರಿಷ್ ಹೆಣ್ಣು; ಆಕೆ ಬಳಿಕ ರಾಮಕೃಷ್ಣಾಶ್ರಮದಲ್ಲಿ ಸನ್ಯಾಸಿನಿಯಾದರು; ಭಾರತೀಯ ಸನ್ಯಾಸಿಯರ ಮತ್ತು ಭಕ್ತರ ನಡುವೆ ಆಕೆ ಬಿಳಿಯ ಸನ್ಯಾಸಿನಿ. ಕಕ್ಕರ್ ಹೇಳುವ ಉಪಾಖ್ಯಾನದಂತೆ ಆ ಗೀತೆಯನ್ನು ಭಾಷಾಂತರಿಸಿದ್ದು ಆಕೆಯೆ. ಆಕೆಯು ಮೂಲದ ಭಾಷೆಯೊಂದಿಗೆ ಹೊಂದಿದ್ದ ಬಳಕೆ ಮತ್ತು ಆತ್ಮೀಯತೆ ಎಷ್ಟು ಕಷ್ಟದ್ದು ಎಂದರೆ ಯಾರಾದರೂ ಊಹಿಸಬಹುದಾಗಿದ್ದು. ಅಂದಿನ ಭಾರತೀಯರ ಮತ್ತು ಐರಿಷ್ ನ್ಯಾಶನಲಿಸ್ಟರ ನಡುವೆ ಸಾಮ್ಯತೆಯಿತ್ತು. ಆಕೆ, ನಿವೇದಿತಾ ಎಂದು ಕರೆಯಲ್ಪಟ್ಟ ಬಿಳಿ ಹೆಣ್ಣು, ವಿವೇಕಾನಂದರು ಯಾವುದನ್ನು ಭಾರತೀಯ ಅಧ್ಯಾತ್ಮ ಮಾರ್ಗ ಎಂದು ವಿವರಿಸಿದರೋ ಅದನ್ನು ಆಕೆ ತಾನು ಅರ್ಥ ಮಾಡಿಕೊಂಡ ಮಟ್ಟಿಗೆ ನಂಬಿ ಅದಕ್ಕೆ ಪರಿವರ್ತಿತಳಾದಳು.

ವಿವೇಕಾನಂದರ ಆ ಮಾರ್ಗವೇ ವಿಚಿತ್ರವಾದುದು. ಹಲವರು ಹೇಳಿರುವಂತೆ ಸಾಮ್ರಾಜ್ಯಶಾಹಿ ಸಂಸ್ಕೃತಿಯ ಪ್ರತಿರೋಧ ಪರಿಣಾಮ ಅದು. ಕಕ್ಕರ್ ಅಂತಹ ಮನೋವಿಶ್ಲೇಷಕರಿಗೆ ಈ ಚಾರಿತ್ರಿಕ, ಆಧ್ಯಾತ್ಮಿಕ ಹಾಗೂ ನಿಜಕ್ಕೂ, ಲೈಂಗಿಕ ಭಾಷಾಂತರ ಪಠ್ಯ ನೋಯಲಿಕ್ಕಿರುವ ಬಟ್ಟೆ. ಬದಲಿಗೆ ಅನಾಮಿಕ ಶಿಷ್ಯೆ ಕೊಟ್ಟ ಇಂಗ್ಲಿಷ್ ಪಾಠಾಂತರವು ಆತ್ಮರತಿಯ ಅಸ್ಪಷ್ಟ ಸಂಗತಿಗಳಿಗೆ ಪುರಾವೆ ಒದಗಿಸುವ ಅಗ್ರಾಹ್ಯ ಸಾಕ್ಷ್ಯ. ಅದು ಭಾಷೆಯ ಕೊಡುಕೊಳ್ಳುವಿಕೆಯ ಸ್ಥಳವಲ್ಲ.

ಕಕ್ಕರ್ ಲೇಖನದ ಮೊದಲಲ್ಲಿ ಉಲ್ಲೇಖಿಸಿರುವ ಪಠ್ಯಭಾಗದಲ್ಲಿ ರಾಮ್‌ಪ್ರಸಾದ್ (ಅಥವಾ ರಾಮ್‌ಪ್ರೊಶಾದ್) ಬಗ್ಗೆ ಒಂದು ಉಲ್ಲೇಖವಿದೆ. ಕಕ್ಕರ್ ಅದಕ್ಕೊಂದು ಅಡಿಟಿಪ್ಪಣಿ ಒದಗಿಸುತ್ತಾರೆ:

ಹದಿನೆಂಟನೇ ಶತಮಾನದ ಗಾಯಕ ಕವಿ. ಆತನ ತಾಯಿಗಾಗಿ ಹಂಬಲಿಸುವ ಗೀತೆಗಳು ಬಂಗಾಳದಲ್ಲಿ ಬಹಳ ಜನಪ್ರಿಯ. ಭಾಷೆಯ ಜೊತೆ ಆತ್ಮೀಯ ಸಂಬಂಧ ಇಲ್ಲದಿರುವುದು ಎಂದು ನಾನು ಏನನ್ನು ಕರೆಯುತ್ತೇನೆಯೋ ಅದಕ್ಕೆ ಈ ಅಡಿಟಿಪ್ಪಣಿ ಒಂದು ಉದಾಹರಣೆ.

ವಿವೇಕಾನಂದರು ಸಾಮ್ರಾಜ್ಯಶಾಹಿಯಿಂದ ಪ್ರಚೋದನೆಗೊಂಡ ಪ್ರತಿಕ್ರಿಯಾತ್ಮಕವಾದ ಭವ್ಯಭಾರತ ನಿರ್ಮಾಣದ ಒಂದು ಉದಾಹರಣೆ. ಇದು ಒಂದು ಮಗ್ಗುಲು. ಕಕ್ಕರ್ ಉಲ್ಲೇಖಿಸುವ ಕಾಳಿಯ ಪರವಾಗಿ ದೇಶಭಕ್ತಿಯ ವರ್ಜನೆಯು ಚಾರಿತ್ರಿಕ ರಂಗಮಂದಿರದಲ್ಲಿ ವಸಾಹತುಶಾಹಿ ಪುರುಷ ವೇದಿಕೆಯ ವಿರುದ್ಧವಾಗಿ ಸಾಂಸ್ಕೃತಿಕ ಮಹಿಳಾ ವೇದಿಕೆಯಲ್ಲಿ ಅದೊಂದು ಆಯ್ಕೆಯಾಗಿ ಅಭಿನಯಿಸಲಾದದ್ದು.[8] ಆ ಚಿತ್ರಕ್ಕೆ ರಾಮ್‌ಪ್ರೊಶಾದ್ ಸೇನ್ ಆದರ್ಶಮಯವಾದ ಆತ್ಮವನ್ನು ಕೊಟ್ಟಿದ್ದು ನಿಸ್ಸಂಶಯವಾಗಿಯೂ ಸತ್ಯ. 1793ರಲ್ಲಿ ಆದ ಭೂಮಿಯ ಖಾಯಂ ನಿರ್ಧರಣೆ (permanent settlement of land)ಗೂ ಹಿಂದೆ ಸೇನ್ ವಸಾಹತುಶಾಹಿ ಕಲ್ಕತ್ತಾದ ಗುಮಾಸ್ತಗಿರಿಯಿಂದ ಗ್ರಾಮೀಣ ಪ್ರದೇಶದ ದೊಡ್ಡ ಭೂ ಮಾಲೀಕರಲ್ಲೊಬ್ಬನ ಆಸ್ಥಾನ ಕವಿಯಾಗಿ ಬಂದವನು. ಭೂ ಮಾಲೀಕ ಸ್ಥಳೀಯ ಸಂಸ್ಕೃತಿಯೊಂದಿಗೆ ಹೊಂದಿದ್ದ ಸಂಬಂಧ ಸೆಟ್ಲ್‌ಮೆಂಟ್ ನಿಂದ ಬದಲಾಗಿ ಹೋಗುತ್ತದೆ. ಬೇರೆ ಮಾತುಗಳಲ್ಲಿ ಹೇಳುವುದೆಂದರೆ ವಿವೇಕಾನಂದರು ಹಾಗೂ ರಾಮ್‌ಪ್ರೊಶಾದ್ ಸೇನ್ ಕಾಳಿಯ ಚಿತ್ರವನ್ನು ರೂಪಾಂತರಿಸುವ ವಸಾಹತುಶಾಹಿ ತಾರ್ಕಿಕತೆಯ ಎರಡು ಕಾಲಘಟ್ಟಗಳು. ಆ ತಾರ್ಕಿಕ ನೆಲೆಗಳ ಜಂಗಮ ಸೂಕ್ಷ್ಮಗಳನ್ನು ಆ ಪ್ರಯೋಜನವಿಲ್ಲದ ಅಡಿಟಿಪ್ಪಣಿ ಅಣಕಿಸಿಬಿಟ್ಟಿದೆ.

ಕಾಳಿಯ ಅಥವಾ ಹಿಂದೂ ಬಹುದೇವ ನಂಬಿಕೆಯ ಒಳಗಿನ ಯಾವುದೇ ದೇವತೆಯ ಐಡೆಂಟಿಟಿಯನ್ನು ಕುರಿತು ಚರ್ಚೆಗೆಳಸುವುದು ಇಲ್ಲಿ ವ್ಯರ್ಥ. ಆದರೂ, ಸಾಂದರ್ಭಿಕರಣದ ಮಟ್ಟಿಗೆ ಹೇಳಲಿಕ್ಕೆ ನಾನಿಲ್ಲಿ ಸೇರಿಸುವುದೇನೆಂದರೆ ನಾನು ಹಿಂದೆ ಉಲ್ಲೇಖಿಸಿದ ಭಾಷಾಂತರಕಾರಳ ಮುನ್ನುಡಿಯನ್ನು ಬರೆದದ್ದು ಇದೇ ರಾಮ್‌ಪ್ರೊಶಾದರ ಕಾವ್ಯದ ಬಗ್ಗೆ. ಆತ ಶಿಷ್ಯರು ವರ್ಣಿಸಿದ ವಿವೇಕಾನಂದರ ಸಂಘರ್ಷದ ಆರ್ಷೇಯ ರಂಗಮಂಚದ ಊರುಗೋಲು ಮಾತ್ರವೇ ಆಗಿರಲಿಲ್ಲ. ನನ್ನ ಮುನ್ನುಡಿಯ ಇನ್ನಷ್ಟು ಸಾಲುಗಳನ್ನು ಇಲ್ಲಿ ಉದ್ಧರಿಸುತ್ತೇನೆ. ರಾಮ್‌ಪ್ರೊಶಾದ್ ಸಂಸ್ಕೃತ ಅರ್ಥಗಳಿಂದ ಅತಿಭಾರವಾದ ಪದಗಳನ್ನು ಮೌಲ್ಯಾಂತರಗೊಳಿಸುತ್ತ (ಟ್ರಾನ್ಸ್ ವ್ಯಾಲ್ಯೂ) ತನ್ನ ತಾಯಿನುಡಿಯೊಂದಿಗೆ ಆಟವಾಡಿದರು. ಅತ್ಯಂತ ನವೀನವೂ, ಅತ್ಯಂತ ಲಿಂಗಾನುಸಾರಿಯೂ ಆದ ಪ್ರೇಮಮಯಿ ಪರಿಹಾಸದ ಧ್ವನಿಯನ್ನು ಹಿಡಿಯಲು ನನ್ನಿಂದ ಸಾಧ್ಯವಾಗಿಲ್ಲ. ಅಷ್ಟೇ ಅಲ್ಲ, ಇನ್ನೂ ಸ್ಥೂಲವಾಗಿಯೂ ಅಲ್ಲಿನ - ಕವಿ ಮತ್ತು ಕಾಳಿಯ ನಡುವಣ - ಹಂಬಲವನ್ನು ಹಿಡಿಯಲೂ ಸಹ. ನಿವೇದಿತಾ ತಪ್ಪಾಗಿ ಭಾಷಾಂತರ ಮಾಡದಿದ್ದರೆ, ರಾಮ್‌ಪ್ರೊಶಾದ್‌ರ ನವೋನ್ಮೇಷಿತ ಕಾವ್ಯಲೀಲೆಗೂ ವಿವೇಕಾನಂದರ ರಾಷ್ಟ್ರೀಯತೆಯ ಮಹಾನ್ ಗಾಂಭೀರ್ಯಕ್ಕೂ ಇರುವ ಭಿನ್ನತೆ, ರಾಷ್ಟ್ರೀಯತೆಯಿಂದ ತಾಯಿಯತ್ತ ಹೊರಳಿದರೂ ಸಹ, ಚಾರಿತ್ರಿಕವಾಗಿ ಮಹತ್ವವುಳ್ಳದ್ದು. ವಸಾಹತಿನ ಪ್ರಜೆಯೊಬ್ಬರು ಮಾಡುವ ಸಾಮ್ರಾಜ್ಯಶಾಹಿ ಸಂಸ್ಕೃತಿಯ ಭಾಷಾಂತರ ರಾಜಕಾರಣ ಗಮನಾರ್ಹವಾಗಿ ಬದಲಾಗಿದೆ. ಆ ಬದಲಾವಣೆ ಕವಿಯ ನುಡಿಗೆ ಲಿಂಗಾದ್ಯಾರೋಪ (ಜೆಂಡರಿಂಗ್) ಮಾಡುವುದರಲ್ಲಿ ವ್ಯಕ್ತವಾಗಿದೆ.

ಸಮಕಾಲೀನ ಬಹುದೇವತಾವಾದಲ್ಲಿನ ಮಹಿಳೆ ಈ ವಿಚಿತ್ರ ಮಾತೆಯೊಡನೆ ಹೇಗೆ ಸಂಸರ್ಗವನ್ನು ಸಾಧಿಸಬಲ್ಲಳು. ಈ ಮಾತೆ ಮ್ಯಾಕ್ಸ್ ವೆಬರ್‌ನ ಅಸಮರ್ಪಕ ವ್ಯಾಸಂಗದ ಹಿನ್ನೆಲೆಯಲ್ಲಿ ಕಕ್ಕರ್ ಅರ್ಥೈಸಿಕೊಳ್ಳುವ ಮನೋವಿಶ್ಲೇಷಣೆಯ ಕೆಟ್ಟ ತಾಯಿ ಖಂಡಿತ ಅಲ್ಲ. ವ್ಯವಸ್ಥಿತಳಾದ ಶಿಕ್ಷಿಸುವ ತಾಯಿಯೂ ಅಲ್ಲ. ಆದರೆ ಈಕೆ ಅನೈಚ್ಛಿಕ ಹಿಂಸೆ ಕೊಡುವ ಮಕ್ಕಳಾಟದ ತಾಯಿ. ಹಾಗೆಯೇ ನೀತಿವಂತಳೂ, ಪ್ರೇಮಮಯಿಯೂ ಆದ ನಿಯಂತ್ರಕಿ.[9] ಅವಳು ಸಾಮಾನ್ಯ ಹೆಣ್ಣು, ಸಂತಳಲ್ಲ. ಚಾರಿತ್ರಿಕವಾಗಿ ಬಹುಗಂಡುದೇವರುಗಳ ವಲಯದಲ್ಲಿ ಹೆಣ್ಣು ದೇವರನ್ನು ಆಹ್ವಾನಿಸುವ ಪ್ರಾರ್ಥನೆಯು ನಿಶ್ಚಿತವಾಗಿಯೂ ಫೆಮಿನಿಸ್ಟ್ ಎನ್ನುವುದನ್ನು ಅಲಕ್ಷಿಸುವುದು ಏತಕ್ಕೆ? ಶಾಕ್ತ (ಶಕ್ತಿ ಅಥವಾ ಕಾಳಿಯನ್ನು ಉಪಾಸನೆ ಮಾಡುವ) ಪರಂಪರೆಯಲ್ಲಿ ಸಬಲರಾದ ಮಹಿಳೆಯರು ಕಾಳಿಯನ್ನು ಮಾದರಿಯಾಗಿ ಆಯ್ದುಕೊಳ್ಳುತ್ತಾರೆ ಎನ್ನುವುದು ನನಗನ್ನಿಸುವಂತೆ, ಪಶ್ಚಿಮದ ಹಾಗೂ ಪುರುಷ ಲಿಂಗಾಧ್ಯಾರೋಪಿತ ಪ್ರಸ್ತಾವ.[10]

ದೇವತೆಗಳಿಗೂ ಸಶಕ್ತರಾದ ಸಾಮಾನ್ಯ ಮಹಿಳೆಯರ ನಂಟಿನ ಬಗ್ಗೆ ಮನೋವಿಶ್ಲೇಷಕರಿಗಿಂತ ಹೆಚ್ಚಿಗೆ ಮಹಾಶ್ವೇತಾರ ಜಶೋದ ಪಾತ್ರ ಹೇಳುತ್ತದೆ. ಮತ್ತು ಇಲ್ಲಿಯೂ ಸಹ ಅಷ್ಟವಾದ ಭಾಷಾಂತರವು ಗೌರವಯುತವಾಗಿ ತಪ್ಪುದಾರಿ ಹಿಡಿದಿರುವುದರ ಉದಾಹರಣೆ ಕೊಡಬಹುದು. ಬಂಗಾಳೀ ಕಲಾವಿದರೊಬ್ಬರ ಫ್ರೆಂಚ್ ಪತ್ನಿ ರಾಮ್ ಪ್ರೊಸಾದ್‌ರ ಕೆಲವು ಗೀತೆಗಳನ್ನು ಆ ಗೀತೆಗಳನ್ನು ಆಧರಿಸಿದ ತನ್ನ ಗಂಡನ ಚಿತ್ರಕೃತಿಗಳಿಗೆ ಸಾಥ್ ಆಗಲು ಭಾಷಾಂತರಿಸಿದ್ದರು. ಇದು 1920ರ ದಶಕದಲ್ಲಿ. ಆಕೆಯ ಅನುವಾದಗಳನ್ನು ಆಗ ಕೈಯಳತೆಯಲ್ಲಿಯೇ ಲಭ್ಯವಿದ್ದ ಸರ್ವಾಂತರ್ಯಾಮಿ ಓರಿಯೆಂಟಲಿಸಂನ ತಾರ್ಕಿಕ ಪದ್ಧತಿ ಕೊಂದುಹಾಕಿದೆ. ಅದೇ ಬಂಗಾಳಿಯನ್ನು ಭಾಷಾಂತರಿಸಿದ ಕೆಳಗಿನ ಎರಡು ತುಣುಕುಗಳನ್ನು ಹೋಲಿಸಿ ನೋಡಿ. ನಾನು ಮೂಲದಲ್ಲಿನ ತನ್ನನ್ನು ಹಾಗೂ ಕಾಳಿಯನ್ನು ಕುರಿತ ತೀರದ ವ್ಯಂಗ್ಯವನ್ನು ಹಿಡಿಯಲು ಕನಿಷ್ಠ ಪ್ರಯತ್ನವನ್ನಾದರೂ ಮಾಡಿದ್ದೇನೆ; ಸೋತಿದ್ದೇನೆ ಎಂದರೂ ಪರವಾಗಿಲ್ಲ

Mind, why footloose from Mother
Mind mine, think power, for freedom's dower, bind bower with love-rope
In time, mind, you minded not your blasted lot.
And mother, daughter-like, bound up house-fence to dupe her dense
and devoted fellow.
Oh You'll see at death how much Mum loves you
A couple moments' tears, and lashings of water, cowdung pure.

ಅದೇ ಫ್ರೆಂಚ್‌ಗೆ ಭಾಷಾಂತರಗೊಂಡಿದ್ದರ ಇಂಗ್ಲಿಷ್ ಅನುವಾದವನ್ನು ಇಲ್ಲಿ ಕೊಡಲಾಗಿದೆ. ಮೂಲ ಫ್ರೆಂಚ್‌ಗೆ ಭಾಷೆ ಮತ್ತು ಶೈಲಿ ಎರಡರಲ್ಲೂ ಇದು ಹತ್ತಿರವಾಗಿದೆ.

Why have you, my soul [mon ame is admittedly less heavy in french] left Ma's feet
O mind, meditate upon Shakthi, you will obtain deliverance

Bind those holyfeet with rope of devotion
In good time you saw nothing, that is indeed your sorrow
To play with her faithful one, she appeared to me
In the form of my daughter and helped me to repair my enclosure
It is at death that you will understand Ma's love.

here they will shed a few tears, then purify the place.

ಖಾಸಗಿ ಬದುಕಿನ ವಿವರಗಳಲ್ಲಿ ಕಂಡು ಬರುವಂತಹ ಸರಿಯಾದ ಸಾಂಸ್ಕೃತಿಕ ರಾಜಕಾರಣಕ್ಕೆ ಇರುವ ಬದ್ಧತೆಯು ಆಳವಷ್ಟೇ ಕೆಲವೊಮ್ಮೆ ಸಾಕಾಗುವುದಿಲ್ಲ ಎನ್ನುವುದನ್ನು ಈ ಉದಾಹರಣೆಗಳು ತೋರಿಸುತ್ತವೆ ಎನ್ನುವುದು ನನ್ನ ನಂಬಿಕೆ. ಭಾಷೆಯ ಇತಿಹಾಸ, ಲೇಖಕರ ಕಾಲದ ಇತಿಹಾಸ, ಭಾಷಾಂತರದಲ್ಲಿ ಮತ್ತು ಭಾಷಾಂತರದಂತೆ ಭಾಷೆಯ ಇತಿಹಾಸ ಎಲ್ಲವೂ ನೇಯ್ಗೆ - ಹೆಣಿಗೆ-ಯಲ್ಲಿಯೂ ದೃಷ್ಟಾಂತಗೊಳ್ಳಬೇಕು.

ತಾರ್ಕಿಕ ವಿಶ್ಲೇಷಣೆಯೆಂದರೆ ತತ್ವಜ್ಞಾನಿಯೊಬ್ಬರು ಏನು ಮಾಡುತ್ತಾರೆ ಎನ್ನುವುದಷ್ಟೇ ಎಂದು ನಾವು ನಂಬುವುದಿಲ್ಲ. ನಾವು ಅಲ್ಲಿನ ವಿವೇಚನೆಯ ವಿಧಾನವನ್ನೂ ಗಮನಿಸುತ್ತೇವೆ. ರೆಟರಿಸಿಟಿಯು ಸರಿಯಾದ ಬಗೆಯಲ್ಲಿ ಬಳಕೆಯಾಗಬೇಕು. ಅದಕ್ಕೊಂದು ಸರಿಯಾದ ಸ್ಥಾನ ಕಲ್ಪಿಸಬೇಕು. ಸ್ಥಾಪಿಸಬೇಕು. ಚಂದವೆಂದು ಮಾತ್ರ ನೋಡಬೇಕು. ಆಗ ಮಾತ್ರ ವಿವೇಚನೆ ಸರಿಯಾಗಿದೆ ಎನ್ನಬಹುದು. ರೆಟರಿಸಿಟಿಯನ್ನು ಹಾಗೇಕೆ ಅದರ ಸ್ಥಾನದಲ್ಲಿ ಇಡಬೇಕು? - ಎಂದರೆ, ಅದು ಅಡ್ಡಿಪಡಿಸುತ್ತದೆ. ಪುರುಷ ಪ್ರಧಾನ ಸಮಾಜದಲ್ಲಿನ ಮಹಿಳೆ, ಪುರುಷರು ಸೆಕ್ಸಿಸಂ ಅನ್ನು ಅದೊಂದು ಸಾಮಾನ್ಯ ವಿಚಾರವೆಂದಾಗಿ ನಿಕ್ಷೇಪಿಸಿಕೊಂಡಾಗ ಅಲ್ಲೊಂದು ಫೆಮಿನಿಸಂಗೆ ವಿರುದ್ಧವಾದ ದೃಶ್ಯ ಅಭಿನಯಿಸಲ್ಪಡುತ್ತದೆ. ಅದು ರೂಢಿಗತವಾಗಿರುವುದಕ್ಕೆ ಹೊಂದಿಕೆಯಾಗುವಂತಿರುತ್ತದೆ. ತರ್ಕ ಮತ್ತು ರೆಟರಿಕ್‌ಗಳ ಹಾಗೂ ವ್ಯಾಕರಣ ಮತ್ತು ರೆಟರಿಕ್‌ಗಳ ನಡುವಣ ಸಂಬಂಧ ಸಾಮಾಜಿಕ ತರ್ಕ, ಸಾಮಾಜಿಕ ವಿವೇಚನೆ ಮತ್ತು ಸಾಮಾಜಿಕ ಆಚರಣೆಗಳಲ್ಲಿ ರೂಪಕಾತ್ಮಕತೆಯು ಉಂಟುಮಾಡುವ ಅಡಚಣೆ ಮುಂತಾದುವುಗಳ ನಡುವಿನ ಸಂಬಂಧವೂ ಹೌದು. ನಮ್ಮ ಮೂರು ಭಾಗಗಳ ಆಕೃತಿಯಲ್ಲಿ ಇವು ಮೊದಲ ಎರಡು ಭಾಗಗಳು. ಅದೇ ಮತ್ತೆ ಆ ರೆಟರಿಕ್ ಕ್ರಮರಾಹಿತ್ಯವನ್ನೂ, ಅನುಷಂಗಿಕತೆಯನ್ನೂ, ಪ್ರಸರಣವನ್ನೂ, ಭಾಷೆಯು ವಿಘಟನೆಗೊಳ್ಳುವುದನ್ನೂ, ವಸ್ತುಗಳು ಯಾವಾಗಲೂ ಶಾಸ್ತ್ರಬದ್ಧವಾಗಿ ವ್ಯವಸ್ಥೆಗೊಳಿಸಲಾಗದು ಎನ್ನುವುದರ ಸಾಧ್ಯತೆಯನ್ನೂ ಸೂಚಿಸುತ್ತಿರುತ್ತದೆ. (ಕ್ರಿಸ್ಟೀವ ಮತ್ತು ಸೆಮಿಯೋಟಿಕ್ ಪೂರ್ವವಾದಿಗಳ ಜೊತೆಗೆ ನನ್ನ ತಕರಾರು ಏನೆಂದರೆ ಭಾಷೆಗೆ ಏನನ್ನು ಸೂಚಿಸಲು ಮಾತ್ರವೇ ಸಾಧ್ಯವಾಗುತ್ತದೆಯೋ ಅಲ್ಲಿ ಅರ್ಥಪೂರ್ಣತೆಯ ಸಾಮ್ರಾಜ್ಯವನ್ನು ವಿಸ್ತರಿಸಲು ಆಕೆಯ ಯೋಜನೆಗಳು ಶುರುವಾಗುತ್ತವೆ.) ಈ ನಿರ್ದಿಷ್ಟ ಮೂರು ಭಾಗಗಳ ಆಕೃತಿ ಇಲ್ಲದ ಸಂಸ್ಕೃತಿಗಳಲ್ಲಿ ಕೂಡ ಭಾಷೆ ಮತ್ತು ಅನುಷಂಗಿಕತೆಯ ಜೊತೆಗಿನ ವ್ಯವಹಾರದಲ್ಲಿ ಪ್ರಭಾವೀ ವಲಯವೊಂದು ನಿರ್ಮಾಣಗೊಂಡಿರುತ್ತದೆ. ಇಫಿ ಅಮಾಡಿಯುಮೆ ಅಂತಹ ಲೇಖಕರು ಈ ವಲಯವನ್ನು ಜೈವಿಕವಾಗಿ ನಿರ್ಧರಿತ ವಲಯವೆಂದು ಪರಿಗಣಿಸದೆ ಅಪ್ರಧಾನ ಮತ್ತು ಪ್ರಧಾನ ಲೈಂಗಿಕ ಪಾತ್ರಗಳ ವಿವರಣೆಗಳಿಂದ ನಿರ್ಧಾರಗೊಂಡ ವಲಯವೆಂದು ಭಾವಿಸಬೇಕಾಗಿದೆ. ಏಂತೆಂದರೆ ಬೇರೆ ವಲಯಗಳಲ್ಲಿನ ವಾಸಿಗಳು ಪೂರ್ಣವಾಗಿ ಸಬ್ಜೆಕ್ಟಿವ್ ಅಲ್ಲ, ಅವರು ಅರೆ-

ಸಬ್ಜೆಕ್ಟಿವ್ ಎಂದು ತೋರಿಸುತ್ತಾರೆ.[11] ರೆಟರಿಕ್‌ನ ಜೊತೆ ಗುದ್ದಾಡುವ ಅಪ್ರಧಾನ ಪಂಗಡಗಳನ್ನು ಅನಾವರಣಗೊಳಿಸಬೇಕಾದರೆ ಮೂರು ಭಾಗಗಳ ಭಾಷೆಯ ಅಧ್ಯಾತ್ಮವನ್ನು ಪ್ರಭಾವೀ ಪಂಗಡಗಳು ನಿರ್ವಹಿಸುವ ಬಗೆಯನ್ನು ಚೆನ್ನಾಗಿ ಅರಿತುಕೊಂಡಿರಬೇಕು.

ನೀವು ಭಾಷಾಂತರ ಕಾರ್ಯವನ್ನು ಶುರುಮಾಡುವುದಕ್ಕೆ ಸಾಕಷ್ಟು ಸಜ್ಜಾಗಿರುವಿರೋ ಎನ್ನುವುದನ್ನು ನಿರ್ಧರಿಸುವುದಕ್ಕೆ ನೀವು ಆಯ್ಕೆಯಾಗಿಯೋ, ಆದ್ಯತೆಯಿಂದಾಗಿಯೋ ನಿಮ್ಮ ಖಾಸಗಿ ಮಾತುಗಳನ್ನು ಆಪ್ತರೊಂದಿಗೆ ಮೂಲದ ಆ ಭಾಷೆಯಲ್ಲಿ ಹೇಳಿಕೊಳ್ಳಲು ಶುರುಮಾಡಿದ್ದೀರಿ ಎನ್ನುವುದು ಮುಖ್ಯ ಮಾನದಂಡವಾಗುತ್ತದೆ. ಈಗ ನಾನು ಹಿಂದೆ ಮಾಡಿದ ವಿಚಾರಗಳಿಗೆ ಬಂದಿದ್ದೇನೆ. ಕಲಿಯಲು ಸಮಯವಿಲ್ಲದವರಿಗೆ ಪ್ರಕಾಶಕರ ಅನುಕೂಲತೆ, ಕ್ಲಾಸ್ ರೂಮಿನ ಅನುಕೂಲತೆ ಅಥವಾ ಸಮಯದ ಅನುಕೂಲತೆ ಒದಗಿಸಿಕೊಡುವುದು ಏಕೆ? ಪಶ್ಚಿಮದ ಫೆಮಿನಿಸಂಗೆ ವಿಶ್ವದ ಉಳಿದೆಲ್ಲ ಭಾಗದ ವಿಶ್ಲೇಷಣೆಯನ್ನು ಒದಗಿಸಿಕೊಡುವುದು ಏಕೆ ಎನ್ನುವುದು ನನಗೆ ಅರ್ಥವಾಗಿಲ್ಲ. ಸಹೋದರಿತ್ವ ಇಲ್ಲದವಳೆಂದು ಐದು ವರ್ಷಗಳ ಹಿಂದೆ ಅವಹೇಳನಕ್ಕೆ ಈಡಾಗಿದ್ದ ನಾನು ಯೋಚಿಸುತ್ತಿದ್ದೆ: ವ್ಯಕ್ತಿ ಸ್ವಲ್ಪ ಹೆಚ್ಚಿಗೇ ಕೊಡಬೇಕು ಎನ್ನುವುದನ್ನು ನೀನು ಅರಿಯಬೇಕು - ಎಂದು. ಆ ಬಳಿಕ ನನ್ನನ್ನು ನಾನೇ ಕೇಳಿಕೊಂಡೆ: ನಾನು ಕೊಡುವುದೇನು? ಬಿಟ್ಟುಬಿಡುವುದೇನು? ಯಾರಿಗೆ ನಾನು ನೀನು ಶ್ರಮ ಪಡಬೇಕಿಲ್ಲ, ಬಾ. ಕೊಂಡುಹೋಗು ಎನ್ನುವ ಆಶ್ವಾಸನೆಯೊಂದಿಗೆ ಕೊಡುತ್ತಿರುವುದು? ಇದರಿಂದ ನಾನು ಉತ್ತೇಜಿಸುತ್ತಿರುವುದೇನು? ಜನರು ಹೇಳುತ್ತಾರೆ, ನೀನು ಗೆದ್ದವಳು, ಕಡೆಗಣಿಸಲ್ಪಟ್ಟವಳಂತೆ ನಟಿಸಬಾರದು ಎಂದು. ಆದರೆ ಭಾಷಾಂತರದಲ್ಲಿ ಹೆಚ್ಚಿನ ಗುಣಪ್ರಮಾಣವನ್ನು ಅಪೇಕ್ಷಿಸುವ ಮೂಲಕ ನಾನು ನನ್ನನ್ನಾಗಲಿ, ಮೂಲದ ಭಾಷೆಯನ್ನಾಗಲಿ ಕಡೆಗಣಿಸುತ್ತಿಲ್ಲ. ದೇವಿಯನ್ನು ಭಾಷಾಂತರ ಮಾಡುವುದರ ಮೂಲಕ ನಾನು ಹೇಗೆ ಆ ಮೂರು ಭಾಗಗಳ ಆಕೃತಿ ನನ್ನ ಭಾಷೆಯಲ್ಲಿ ಇಂಗ್ಲಿಷ್‌ಗಿಂತ ಭಿನ್ನವಾಗಿ ಕಾರ್ಯನಿರ್ವಹಿಸುತ್ತದೆ ಎನ್ನುವುದನ್ನು ಅರಿತುಕೊಂಡೆ. ಇಲ್ಲಿ ಮತ್ತೊಂದು ಚಾರಿತ್ರಿಕ ವ್ಯಂಗ್ಯ(ಐರನಿ) ಅಡಗಿದೆ. ಅದು ನನಗೆ ನಿಚ್ಚಳವಾಗಿದೆ.

ಹಿಂದಿನ ದಿನಗಳಲ್ಲಿ ವಸಾಹತಿನ ಅಥವಾ ವಸಾಹತೋತ್ತರ ಕಾಲದ ವಿದ್ಯಾರ್ಥಿಗೆ ಇಂಗ್ಲಿಷ್ ಅನ್ನು ಎಷ್ಟು ಸಾಧ್ಯವೋ ಅಷ್ಟರಮಟ್ಟಿಗೆ ಅದರ ಮೂಲ ಭಾಷಿಕ ಹೇಗೆ ನುಡಿಯುವನೋ ಹಾಗೆಯೇ - ಭಿನ್ನತೆಯಿಲ್ಲದೆ - ನುಡಿಯುವುದು ಮುಖ್ಯವಾಗಿತ್ತು. ನನಗೆ ಅನ್ನಿಸುವಂತೆ ಮೂರನೇ ಜಗತ್ತಿನ ಭಾಷಾಂತರ ಉದ್ದಿಮೆಯಲ್ಲಿರುವ ಮಂದಿಗೆ ಚಕ್ರ ಒಂದು ಸುತ್ತು ಬಂದಿದೆ ಎಂದು ಒಪ್ಪಿಕೊಳ್ಳುವುದು ಅಗತ್ಯವಾಗಿದೆ. ಅಲ್ಲದೆ ಅದು ದ್ವಿಭಾಷಾ ವಸಾಹತೋತ್ತರ ಕಾಲದ ಪ್ರಾಮಾಣಿಕ ಭಾಷಾಂತರಕಾರಳಿಗೆ ನಿಜಕ್ಕೂ ಉಪಯೋಗಕರ. ಆದರೆ ಆಕೆ ನಿಜಕ್ಕೂ ದ್ವಿಭಾಷಾ ಭಾಷಾಂತರಕಾರಳಲ್ಲದಿದ್ದರೆ, ಅವಳು ತನ್ನ ತಾಯ್ನುಡಿಯಲ್ಲಿ ಮಾತನಾಡುವವಳಾಗಿದ್ದರೆ ಅವಳಿಗೆ ಅದರಿಂದ ಹೆಚ್ಚಿನ ಪ್ರಯೋಜನವೇನೂ ಲಭಿಸಲಾರದು. ಆಕೆಯ ಖಾಸಾ ಮೂಲಕ್ಷೇತ್ರವು ಸಹ ವರ್ಗವ್ಯವಸ್ಥೆಗೆ ಒಳಗಾದದ್ದು. ಆ ಸಂಸ್ಥೆ ಬಹಳ ಸಲ ಸಾಮ್ರಾಜ್ಯಶಾಹಿಗೆ ಪ್ರವೇಶವಿರುವುದರ ಅಳಿವುಳಿಕೆಗಳನ್ನು ತನ್ನ ಜೊತೆಗೆ ಒಯ್ಯುತ್ತಿರುತ್ತದೆ, ಮತ್ತು ಬಹಳ ಸಲ ಅದು ಸಾರ್ವಜನಿಕ ಸಂಪರ್ಕಭಾಷೆ ಎನ್ನುವ ಕಾರಣಕ್ಕೆ ನೆಲದ ಜನರ ಮಾತಿಗೆ ಪ್ರವೇಶವನ್ನು ಪಡೆದುಕೊಳ್ಳುತ್ತದೆ. ಹಾಗಾಗಿ ಇಲ್ಲಿ ಆಪ್ತತೆ ಎನ್ನುವುದರ ಅಗತ್ಯವು ತನ್ನೊಂದಿಗೆ ಸಾರ್ವಜನಿಕ ವಲಯಕ್ಕೆ ಒಂದು

ಗುರುತನ್ನು (ರೆಕಗ್ನಿಷನ್) ತರುತ್ತವೆ. ನಾವು ಮರಿಯನ್ ಮೂರ್‌ಳ ಅಥವಾ ಎಮಿಲಿ ಡಿಕನ್ಸನ್‌ಳ ಕೃತಿಗಳನ್ನು ಭಾಷಾಂತರಿಸುವುದನ್ನು ಯೋಚಿಸಿದ್ದರೆ. ಭಾಷಾಂತರಕಾರರಿಗೆ ಬರಬೇಕಾದ ಪ್ರಮಾಣವು ಮೂಲ ಭಾಷೆಯಲ್ಲಿ (ಇಲ್ಲಿ ಇಂಗ್ಲಿಷ್) ಸಂವಾದ ನಡೆಸುವ ಯಾರೊಬ್ಬರು ಎನ್ನುವುದು ಅಲ್ಲ, ಅದನ್ನು ತೃತೀಯ ಜಗತ್ತಿನ ಭಾಷೆಗೆ ಅನ್ವಯಿಸಿದರೆ ಅಲ್ಲಿನ ಪರಿಸ್ಥಿತಿ ಜನಾಂಗ ಕೇಂದ್ರಿತವಾಗಿರುತ್ತದೆ. ಹಾಗಿರುವಾಗ ಈ ಭಾಷಾಂತರಗಳನ್ನು ಸಿದ್ಧತೆಯಿಲ್ಲದ ನಮ್ಮ ವಿದ್ಯಾರ್ಥಿಗಳಿಗೆ ಮಹಿಳಾ ಲೇಖಕರನ್ನು ಕಲಿಯಲು ಒದಗಿಸುವುದೆಂದರೆ!

ನನ್ನ ದೃಷ್ಟಿಯಲ್ಲಿ ತೃತೀಯ ಜಗತ್ತಿನ ಭಾಷಾಂತರಕಾರರು ಆ ಭಾಷೆಯ ಸಂಪರ್ಕದಲ್ಲಿರಬೇಕು ಮತ್ತು ಆ ಭಾಷೆಯ ಸಾಹಿತ್ಯದಲ್ಲಿ ಏನೇನು ಸೃಷ್ಟಿ ನಡೆಯುತ್ತಿದೆ ಎನ್ನುವುದನ್ನು ಅರಿತಿರಬೇಕು. ಹಾಗಿದ್ದರೆ ಮಾತ್ರ ಅವರಿಗೆ ಮಹಿಳಾ ಬರವಣಿಗೆಯಲ್ಲಿನ ಒಳ್ಳೆಯದು ಮತ್ತು ಕೆಟ್ಟದ್ದನ್ನು, ಒಪ್ಪಿತ ಮತ್ತು ಪ್ರತಿರೋಧದ ಬರವಣಿಗೆಯನ್ನು ಗುರುತಿಸಿ, ಪ್ರತ್ಯೇಕಿಸಿ ನೋಡುವ ಸಾಮರ್ಥ್ಯ ಒದಗುತ್ತದೆ.

ಆ ಭಾಷಾಂತರಕಾರರು ಪಠ್ಯವನ್ನು ಎದುರಿಸಲು ಸಿದ್ಧರಿರಬೇಕು. ಇಂಗ್ಲಿಷ್ ಭಾಷೆಯ ಅಂಗಣದಲ್ಲಿ ಯಾವುದು ಪ್ರತಿರೋಧವಾಗಿರುವುದೋ ಮೂಲದ ಅಂಗಣದಲ್ಲಿ ಅದು ಆಕ್ರಮಣಕಾರಿಯಾಗಿರಬಹುದು. ಫರೀದಾ ಅಖ್ತರ್ ಬಾಂಗ್ಲಾದೇಶದಲ್ಲಿ ಮಹಿಳಾ ಜೀವನಗಳ ಹಾಗೂ ಫೆಮಿನಿಸಂನ ನಿಜವಾದ ಚಟುವಟಿಕೆಗಳನ್ನು ಲಿಂಗಾಧ್ಯಾರೋಪದ -ಜೆಂಡರಿಂಗ್ - ಮಾತುಗಳಿಂದ ಹಾಳುಮಾಡಲಾಗುತ್ತಿದೆ ಎಂದು ವಾದಿಸುತ್ತಾರೆ. ಅವು ನಿಯೋಜಿತವಾದವು. ಹೀಗೆ ಮಾತಾಡುವವರಲ್ಲಿ ಬಹಳ ಮಂದಿ ಬಹುರಾಷ್ಟ್ರೀಯ ಸರ್ಕಾರೇತರ ಸಂಸ್ಥೆಗಳ ಮಹಿಳಾ ಅಭಿವೃದ್ಧಿ ಅಂಗಗಳು. ಇವುಗಳ ಜೊತೆಗೂಡಿರುವವು ಕೆಲವು ಸ್ವಯಂ ಅಕಡೆಮಿಕ್ ಸ್ತ್ರೀವಾದಿ ಸಿದ್ಧಾಂತಿಗಳು. ಆಕೆಯ ಟಿಪ್ಪಣಿಗಳಲ್ಲಿ ಒಂದು ಲಿಂಗಾಧ್ಯಾರೋಪವನ್ನು ಬಂಗಾಳಿ ಭಾಷೆಗೆ ಭಾಷಾಂತರಿಸಲಾಗದು ಎನ್ನುವುದು. ಜೆಂಡರಿಂಗ್ ಎನ್ನುವ ಪದ ಇಂಗ್ಲಿಷ್ ಭಾಷೆಗೆ ಸಹ ಹೊಸತು ಮತ್ತು ಮುಜುಗುರ ತರುವಷ್ಟು ಬರಿದಾದದ್ದು. ಅಖ್ತರ್ ಅಂತಾರಾಷ್ಟ್ರೀಯ ಫೆಮಿನಿಸಂನಲ್ಲಿ ಸಂಪೂರ್ಣ ತೊಡಗಿಕೊಂಡಿರುವಾಕೆ. ಆಕೆಯ ನೆಲೆ ತೃತೀಯ ಜಗತ್ತು. ಅಮೆರಿಕದ ಸ್ತ್ರೀವಾದದ ಸಂದರ್ಭದಲ್ಲಿ ಜೆಂಡರ್ ಎನ್ನುವುದನ್ನು ಆಕೆಗಾಗಿ ನಾನು ಅನುವಾದಿಸಲಾಗದೆ ಹೋದೆ. ಗೆಳೆಯರಂತೆ ಮಾತಾಡಿಕೊಳ್ಳುವ ಅಖ್ತರ್‌ರಂತಹ ಸಾಮಾಜಿಕ ಸಂದರ್ಭದ ಅನ್ಯತೆ ಓದುಗಳು ಮತ್ತು ಜಾಗರೂಕ ಭಾಷಾಂತರಕಾರಳಾದ ನಾನು - ಈ ಇಬ್ಬರ ನಡುವೆ ಭಾಷಾಂತರ ಹೀಗೆ ವಿಫಲವಾಗುವುದು (ಮಿಸ್‌ಫೈರ್) ಭಾಷಾಂತರಕಾರಳಾಗಿ ನನ್ನ ಕೆಲಸದ ಬಗ್ಗೆ ನನ್ನ ತಿಳುವಳಿಕೆಯನ್ನು ಮತ್ತಷ್ಟು ಹೆಚ್ಚಿಸಿದೆ.

ಒಳ್ಳೆಯದು ಮತ್ತು ಕೆಟ್ಟದ್ದು ಎನ್ನುವುದು ಒಂದು ಅಗತ್ಯಕ್ಕೊಗ್ಗಿಸಬಹುದಾದ ಮಾನದಂಡ. ಅದೂ ಸಹ ಎಲ್ಲ ಮಾನದಂಡಗಳಂತೆಯೇ ಇರುವಂಥದ್ದು. ಇಲ್ಲಿ ರಾಚನಿಕೋತ್ತರವಾದದ (ಪೋಸ್ಟ್ ಸ್ಟ್ರಕ್ಚರಲಿಸಂ) ಇನ್ನೊಂದು ಪಾಠ ನೆರವಿಗೆ ಬರುತ್ತದೆ: ಅಂತಹ ಮಾನದಂಡದ ಎಲ್ಲ ತೀರ್ಮಾನಗಳನ್ನು ಮಾಡಲಾಗಿದೆ. ಆ ನೀತಿಗಳನ್ನು ಸರಿಯಾಗಿ ಸಮರ್ಥಿಸಿಕೊಳ್ಳುವ ಕಡೆ ನಡೆಯುವುದು ಆ ಪ್ರಯತ್ನ. ಶಾಲೆಗಳಲ್ಲಿ ಶಿಕ್ಷಣ ಸಿದ್ಧತೆಯನ್ನು ಅಗತ್ಯಗೊಳಿಸುವುದು ಅದಕ್ಕೆಂದೇ. ಅದೇನೆಂದರೆ ಪರೀಕ್ಷೆಗಳನ್ನು ಬರೆದು ಈ ಮಾನದಂಡಗಳಿಗೆ ತಾನು ಅನುರೂಪವಾಗಿರುವುದನ್ನು

ನಿರೂಪಿಸಬೇಕಾಗುವುದು. ಪ್ರಕಾಶಕ ಸಂಸ್ಥೆಗಳು ಮಾಮೂಲಿಯಾಗಿ ಈ ಮಾನದಂಡಗಳ ಪ್ರಾಪಂಚಿಕ ಗೊಂದಲಗಳಲ್ಲಿಯೇ ತೊಡಗಿರುತ್ತಾರೆ. ಭಾಷಾಂತರಕಾರರು ಈ ಮಹಾನಗರ ಐಹಿಕವಾದದ – ಮೆಟ್ರೋಪಾಲಿಟನ್ ಮೆಟೀರಿಯಲಿಸಂ – ವಿರುದ್ಧ ಹೋರಾಡಲು ಸಮರ್ಥಳಾಗಿರಬೇಕು. ಅದಕ್ಕೆ ತಜ್ಞರ ವಿಶೇಷವಾದ ಪರಿಜ್ಞಾನ ಹೊಂದಿರಬೇಕಾಗುತ್ತದೆ, ಬರಿಯ ತಾತ್ವಿಕ ಬದ್ಧತೆ ಮಾತ್ರವಲ್ಲ.

ಇನ್ನೊಂದು ಬಗೆಯಲ್ಲಿ ಹೇಳುವುದೆಂದರೆ ಭಾಷಾಂತರ ಮಾಡುವವರಿಗೆ ಭಾಷಾಂತರಿಸಲ್ಪಡುತ್ತಿರುವ ಮೂಲದ ಹೊರ-ಒಳ ಲಕ್ಷಣಗಳ ನಿರ್ದಿಷ್ಟ ಜ್ಞಾನ ಇರಬೇಕಾಗುತ್ತದೆ. ಹಾಗಿದ್ದಾಗ ತೃತೀಯ ಜಗತ್ತಿನ ಮಹಿಳೆಯರ ಎಲ್ಲ ಕೃತಿಗಳೂ ಶ್ರೇಷ್ಠ ಎನ್ನುವ ಜನಾಂಗೀಯ ಊಹೆಗಳ ವಿರುದ್ಧ ಹೋರಾಡಲು ಸಾಧ್ಯವಾಗುತ್ತದೆ. ಭಾರತೀಯ ಮಹಿಳಾ ಲೇಖಕಿಯರ ಎಲ್ಲ ಕೃತಿಗಳಿಗೂ ದೇವಿಯನ್ನು ಆವಾಹಿಸುವ ಮಹಿಳೆಯರು ಬಹಳ ಸಲ ನನ್ನ ಬಳಿ ಬಂದಿದ್ದಾರೆ. ನನಗೆ ಇದರಿಂದ ನಿಜಕ್ಕೂ ಕ್ಲೇಶವುಂಟಾಗಿದೆ, ಭಾರತೀಯ ನಾರಿ ಎನ್ನುವುದು ಫೆಮಿನಿಸ್ಟ್ ವರ್ಗವಲ್ಲ. (ಬೇರೆ ಒಂದು ಕಡೆ ನಾನು ಎಪಿಸ್ಟೆಮ್‌ಗಳು –ಬುದ್ಧಿಗ್ರಾಹ್ಯಗಳ ಅಂದರೆ ಜ್ಞಾನದ ವಸ್ತುಗಳನ್ನು ಕಟ್ಟುವ ಬಗೆಗಳು – ರಾಷ್ಟ್ರೀಯ ಹೆಸರುಗಳನ್ನು ಹೊಂದಿರಬಾರದು ಎಂದು ವಾದಿಸಿದ್ದೇನೆ.)[13] ಕೆಲವು ಸಲ, ಅವು ಯಾವ ದೇಶದಲ್ಲಿ ಹುಟ್ಟಿದವು ಎನ್ನುವುದನ್ನು ಹೊರತುಪಡಿಸಿದರೆ, ಭಾರತೀಯ ಮಹಿಳಾ ಸಾಹಿತ್ಯವು ಅಮೆರಿಕನ್ ಮಹಿಳಾ ಸಾಹಿತ್ಯ ಅಥವಾ ಬ್ರಿಟಿಷ್ ಮಹಿಳಾ ಸಾಹಿತ್ಯವೇ ಆಗಿರುತ್ತದೆ. ಒಂದು ಜನಾಂಗೋ-ಸಾಂಸ್ಕೃತಿಕ (ಎತ್ನೋ-ಕಲ್ಚರಲ್) ಪ್ರಣಾಳಿಕೆಯಿದೆ. ಅದು ತೃತೀಯ ಜಗತ್ತಿನ ಅನನ್ಯತೆಯ ಹುಟ್ಟಡಗಿಸುವುದನ್ನು ಗುರಿಯಾಗಿಸಿಕೊಂಡದ್ದು ಮತ್ತು ಅದಕ್ಕೆ ಸಾಂಸ್ಕೃತಿಕ ಪೌರತ್ವವನ್ನು ನಿರಾಕರಿಸುವ ಉದ್ದೇಶವುಳ್ಳದ್ದು. ಹಾಗಾಗೇ ಅವನ್ನು ಭಾರತೀಯ ಎಂದು ಕರೆಯಲಾಗುವುದು.

ನನ್ನ ಮೊದಲ ವಿಚಾರವೆಂದರೆ ಮೂಲ ಪಠ್ಯದ ಭಾಷಿಕ ರೆಟರಿಸಿಟಿಗೆ ಶರಣಾಗುವುದು ಭಾಷಾಂತರಕಾರಳ ಕೆಲಸ ಎನ್ನುವುದು. ಈ ವಿಚಾರಕ್ಕೆ ವಿಸ್ತಾರವಾದ ರಾಜಕೀಯ ಬಂಧಗಳಿವೆ. ಇದ್ದರೂ ಈ ಕಾರ್ಯದ ಅಮುಖ್ಯವಲ್ಲದ ಪರಿಣಾಮಗಳನ್ನು ಅಲಕ್ಷಿಸುವುದು ಎಂದರೆ ಬರಹದ ಸಾಹಿತ್ಯಗುಣ, ಪಠ್ಯಗುಣ (ಟೆಕ್ಸ್ಚುಯಾಲಿಟಿ) ಹಾಗೂ ಅದರ ಐಂದ್ರಿಕ ಸಂವೇದನಾಶೀಲತೆಗಳನ್ನು ಲುಪ್ತವಾಗಿಸುವುದು (ಮಿಚೆಲಿಯ ಮಾತಿನಲ್ಲಿ) ಎಂದು ಅರ್ಥ. ನಾನು ನನ್ನ ಎರಡನೆಯ ವಿಚಾರದತ್ತ ಹೊರಳಿದ್ದೇನೆ. ಅದೆಂದರೆ ಭಾಷಾಂತರಕಾರರು ಮೂಲ ಕೃತಿಯ ಕ್ಷೇತ್ರದಲ್ಲಿದ್ದು ತಾರತಮ್ಯವನ್ನು ಗಣಿಸುವ ಸಾಮರ್ಥ್ಯ ಹೊಂದಿರಬೇಕು ಎನ್ನುವುದು. ಇದರ ಬಗ್ಗೆ ತುಸು ವಿಸ್ತಾರವಾಗಿ ಯೋಚನೆ ಮಾಡೋಣ.

ನಾನು ದೇವಿಯನ್ನು ಏಕೆ ಆಯ್ಕೆ ಮಾಡಿಕೊಂಡೆ ಎಂದರೆ ಅವಳು ತನ್ನ ದೃಶ್ಯದಂತೆ ಇಲ್ಲ. ನಾನು ಇಂಗ್ಲಿಷ್ ಶೇಕ್ಸ್‌ಪಿಯರ್ ವಿದ್ವಾಂಸರೊಬ್ಬರ ಮಾತು ಕೇಳಿದ್ದೇನೆ. ಉಪಖಂಡದಿಂದ ಹೊರಡುವ ಶೇಕ್ಸ್‌ಪಿಯರ್ ಕುರಿತ ವಿಮರ್ಶೆಯ ಒಂದೊಂದು ತುಣುಕೂ ಆ ಕಾರಣದಿಂದಲೇ ಪ್ರತಿರೋಧದ್ದಾಗಿರುತ್ತದೆ ಎನ್ನುವುದು ಅವರ ಇಂಗಿತ. ಇಂತಹ ತೀರ್ಮಾನಗಳ ಮೂಲಕ ವಿಮರ್ಶಿಸುವುದಕ್ಕೆ ನಮಗಿರುವ ಹಕ್ಕನ್ನು ಕಸಿದುಕೊಳ್ಳಲಾಗುತ್ತದೆ. ಭೂಭಾಗವೊಂದನ್ನು ದಾಸ್ಯಕ್ಕೆ ತಳ್ಳುವುದು ಮತ್ತು ಆ ಭೂಭಾಗವನ್ನು ಲೆಕ್ಕಾಚಾರ ಹಾಕಿ ನಿರ್ಬಂಧಿಸುವುದು ನಿಜಕ್ಕೂ ಕೆಡುಕಿನದು.

ಅಂದಾಕ್ಷಣ ಸಂಧಾನ ಪ್ರಕ್ರಿಯೆಯ ಮೂಲಕ ಸ್ವಾತಂತ್ರ್ಯ ಪಡೆದ ನಂತರದ ಐವತ್ತು ವರ್ಷಗಳಲ್ಲಿ ಈ ಭೂಭಾಗದಿಂದ ಬಂದ/ಬರುತ್ತಿರುವ ಎಲ್ಲವೂ ಅಗತ್ಯವಾಗಿ ಸರಿಯಾಗಿರುತ್ತದೆ ಎಂಬ ಅರ್ಥವಲ್ಲ. ಹಳೆಯ ಮಾನವಶಾಸ್ತ್ರೀಯ ಗ್ರಹಿಕೆ(ಅದು ನಿಜಕ್ಕೂ ಕೆಟ್ಟ ಮಾನವಶಾಸ್ತ್ರ)ಯಾದ ಒಂದು ಸಂಸ್ಕೃತಿಯೊಡಲಿಂದ ಬಂದ ಪ್ರತಿಯೊಬ್ಬನೂ ಆ ಸಂಸ್ಕೃತಿಯ ಪೂರ್ಣ ದೃಷ್ಟಾಂತವಲ್ಲದೆ ಬೇರೆ ಅಲ್ಲ ಎನ್ನುವ ಪ್ರತೀತಿ ನನ್ನ ಸ್ನೇಹಿತರ ಮಾತಿನ ಸೂಚನೆಯಲ್ಲಿ ಅಭಿನಯಿಸಲ್ಪಡುತ್ತಿತ್ತು. ನಾನು ಪ್ರವಾಹದ ಎದುರು ನಡೆಯುವ ಲೇಖಕರಲ್ಲಿ, ಮುಖ್ಯಧಾರೆಯ ಲೇಖಕರಲ್ಲಿ ಕುತೂಹಲ ಹೊಂದಿರುತ್ತೇನೆ. ನನಗೆ ನಂಬಿಕೆಯುಂಟಾಗಿದೆ: ಆಸಕ್ತಿದಾಯಕ ಸಾಹಿತ್ಯಕ ಪಠ್ಯವೆಂದರೆ ಯಾವುದರ ಓದಿನಿಂದ ನೀವು ಅಧಿಕಾಂಶ ಪ್ರಜೆಗಳ ಸಾಂಸ್ಕೃತಿಕ ಪ್ರತಿನಿಧಿತ್ವವನ್ನು ಕುರಿತು ಬಹುಮತದ ದೃಷ್ಟಿಕೋನವನ್ನು ಅಥವಾ ಒಂದು ರಾಷ್ಟ್ರದ ಸ್ವ-ಪ್ರತಿನಿಧಿತ್ವವನ್ನು ಅರಿಯಲಾರಿರೋ ಅದು.

ತೃತೀಯ ಜಗತ್ತಿನ ಮಹಿಳಾ ಬರವಣಿಗೆಗಳ ಭಾಷಾಂತರ ಮಾಡುವ ಭಾಷಾಂತರಕಾರ್ತಿ ತಾನು ಆ ಕಾರ್ಯ ಕೈಗೊಳ್ಳಲು ಪಾಶ್ಚಿಮಾತ್ಯ ಸಾಹಿತ್ಯದ ಭಾಷಾಂತರಕಾರ್ತಿಯರಿಗಿಂತ ಹೆಚ್ಚು ಸನ್ನದ್ಧಳಾಗಿರುವಳೇ ಎನ್ನುವುದನ್ನು ಮೊದಲು ಖಚಿತಪಡಿಸಿಕೊಳ್ಳಬೇಕು. ಏಕೆಂದರೆ ಭಾಷಾಂತರದ ಹೂಟದಲ್ಲಿ-ರ್‍ಯಾಕೆಟ್‌ನಲ್ಲಿ ಕೊಂಚ ಸ್ಥಳಾಂತರಗೊಂಡಿದ್ದರೂ, ಎಷ್ಟೊಂದು ಹಳೆಯ ವಸಾಹತುಶಾಹಿ ಧೋರಣೆಗಳು ಜೋರಾಗಿಯೇ ಕಾರ್ಯಪ್ರವೃತ್ತವಾಗಿದೆ. ರಾಜಕೀಯೋತ್ತರವಾದವು ತಯಾರಿಯ ಕ್ಷೇತ್ರವನ್ನು ತೀವ್ರ ಸುಧಾರಣೆಗೆ ಒಳಪಡಿಸಬಲ್ಲದು. (ಭಾಷೆಯನ್ನು ಅಭ್ಯಸಿಸುವುದು ಪರೀಕ್ಷೆಯ ತಯಾರಿಯಲ್ಲಿ ಓದಿದಂತೆ ಅಲ್ಲ, ಅದು ಯಾತಕ್ಕೂ ಸಾಲದು) ಆ ಪ್ರತಿನಿಧಿಯ ಸೃಷ್ಟಿಯಂತಹ ಭಾಷೆಯ ರಂಗಾಭಿನಯಕ್ಕೆ ಎಲ್ಲರೂ ತೊಡಗಿಕೊಳ್ಳಬೇಕಾದ ಒಂದು ವಿಶೇಷ ರೀತಿಯ ಸಂಬಂಧವಿದೆ. ಆದರೆ ರಾಜಕೀಯೋತ್ತರವಾದದ ಪ್ರಣಾಳಿಕೆ ಬಹುಪಾಲು ಬೇರೆ ಎಲ್ಲೋ ಇದೆ. ಸಿದ್ಧಾಂತಕ್ಕೆ ಇರುವ ಮಹಾನಗರ ಸ್ತ್ರೀವಾದಿಗಳ ಪ್ರತಿರೋಧವು ನಮ್ಮನ್ನು ಮತ್ತೊಂದು ಕಥನಕ್ಕೆ - ನೆರೇಟಿವ್‌ಗೆ - ಕರೆದೊಯ್ಯುತ್ತದೆ.

ಭಾಷಾಂತರಕಾರ್ತಿಯ ಕೆಲಸವನ್ನು ಹಾಗೂ ಆ ಕೌಶಲವನ್ನು ಅರ್ಥೈಸಿಕೊಳ್ಳುವುದು ಪರಸ್ಪರ ಸಂಬಂಧಿತ ವಿಚಾರಗಳೇ ಆದರೂ ಅವು ವಾಸ್ತವವಾಗಿ ಬೇರೆಬೇರೆಯೆ. ನಾನು ಇಲ್ಲಿ ದುಡಿಯುವಾಗ ಹೇಗೆ ಕೆಲಸಮಾಡುತ್ತೇನೆ ಎನ್ನುವುದನ್ನು ವಿವರಿಸಿಬಿಡುತ್ತೇನೆ. ಮೊದಲು ನಾನು ಕೃತಿಯನ್ನು ವೇಗವಾಗಿ ಭಾಷಾಂತರಿಸಿಬಿಡುತ್ತೇನೆ. ಭಾಷಾಂತರದಲ್ಲಿ ಇಂಗ್ಲಿಷ್‌ಗೆ ಏನಾಗುತ್ತಿದೆ ಎಂದು ನೋಡಲು ನಾನು ಕೆಲಸ ನಿಲ್ಲಿಸಿದರೆ, ಓದುಗರನ್ನು ಕಲ್ಪಿಸಿಕೊಂಡರೆ, ಉದ್ದೇಶಿತ ವಸ್ತುವನ್ನು ಚಿಮ್ಮುಹಲಗೆಗಿಂತ ಹೆಚ್ಚು ಎಂದು ಭಾವಿಸಿದರೆ, ನನಗೆ ಕೆಲಸದ ಒಳಕ್ಕೆ ನೆಗೆಯಲು ಸಾಧ್ಯವಾಗುವುದಿಲ್ಲ; ಪಠ್ಯಕ್ಕೆ ಶರಣಾಗಲು ಸಾಧ್ಯವಾಗುವುದಿಲ್ಲ. ದೇವಿಯ ಜೊತೆಗಿನ ನನ್ನ ಸಂಬಂಧ ಸುರಳೀತವಾಗಿಬಿಡುತ್ತದೆ. ಆಕೆಗೆ ನಾನು ಹೇಳಬಲ್ಲೆ: ನಿನ್ನ ಬರೆಯುವ ಕಾಯಕದಲ್ಲಿ ನಾನು ನಿನಗೆ ಶರಣಾಗುತ್ತೇನೆ, ನಿನ್ನನ್ನು ನನ್ನ ಗಮನದ (ಪಠ್ಯದ) ವಸ್ತುವಾಗಿ (ಭಾವಿಸಿ) ಅಲ್ಲ ಎಂದು.

ಅಲ್ಲಿನ ಆ ಸ್ನೇಹದಲ್ಲಿ ಇನ್ನೊಂದು ಬಗೆಯ ಶರಣಾಗತಿ ಇದೆ. ಪಠ್ಯಕ್ಕೆ ಈ ಬಗೆಯಲ್ಲಿ ಶರಣಾಗುವುದು ಎಂದರೆ ಬಹುಪಾಲು ಶಬ್ದಾರ್ಥಬದ್ಧಳು (ಲಿಟರಲ್) ಆಗಿರುವುದು. ಈ ಬಗೆಯಲ್ಲಿ ಒಂದು ಆವೃತ್ತಿಯನ್ನು ನಿರ್ಮಿಸಿದ ಮೇಲೆ ಅದನ್ನು ನಾನು ಪುನರ್ವಿಮರ್ಶಿಸುತ್ತೇನೆ.

ಅದನ್ನು ನಾನು ಶ್ರೋತೃವಿನ - ಓದುಗನ - ದೃಷ್ಟಿಯಿಂದ ಪುನರ್ವಿಮರ್ಶಿಸುವುದಿಲ್ಲ, ನನ್ನ ಎದುರಿಗೆ ಇರುವ, ಒಂದು ಬಗೆಯ ಇಂಗ್ಲಿಷ್‌ನಲ್ಲಿರುವ ವಸ್ತುವಿನ ವ್ಯವಹಾರ ಕ್ರಮವನ್ನು (ಪ್ರೋಟೋಕಾಲ್)ಅನುಸರಿಸಿ ಪುನರ್ವಿಮರ್ಶಿಸುತ್ತೇನೆ. ಮತ್ತು ನಾನು ಪಾಠದ ಕೊಠಡಿಯಲ್ಲಿರುವ ವಿದ್ಯಾರ್ಥಿಗೆ ಈ ಪಠ್ಯ ಸಾಮಾಜಿಕ ವಾಸ್ತವತೆಯನ್ನು ಪೂರೈಸುವ ವಸ್ತುವಾಗಿ ಮಾತ್ರ ಗೋಚರಿಸದೆ ಇರಬೇಕೆಂದು ಮತ್ತು ಭಾಷೆಯ ಸೃಷ್ಟಿಶೀಲ, ಚಲನಾತ್ಮಕ ರಂಗಪ್ರವೇಶದಲ್ಲಿ ಗಮನವಿಟ್ಟ ಭಾಷಾಂತರವು ಪುನರ್ವಿಮರ್ಶೆಯಲ್ಲಿ ಅಣಕಗೊಂಡು ನಡುವಣ ಸಂಕಥನದಲ್ಲಿ ಶಾಬ್ದಿಕತೆಗೆ ಶರಣಾಗಿ ಹೋಗಿಬಿಡುವ ಬಗ್ಗೆ ಯೋಚಿಸುತ್ತಿರುತ್ತೇನೆ.

ಬಹುಶಃ ಬಾಧ್ಯಸ್ಥಿಕೆಗೆ ಒದಗುವ ವ್ಯರ್ಥ ಭರವಸೆಯ ವಿಚಾರವೇ ಬೇರೆ. ಜಾಕೆಸ್ ಡೆರಿಡನ ದೆ ಲ ಗ್ರಮಟಾಲಜಿಯನ್ನು ಭಾಷಾಂತರಿಸಿದಾಗ ಪ್ರಮುಖ ಪತ್ರಿಕೆಯೊಂದರಲ್ಲಿ ಮೊದಲ ಹಾಗೂ ಕೊನೆಯ ಬಾರಿ ಅದರ ವಿಮರ್ಶೆ ಪ್ರಕಟವಾಯಿತು. ದೇವಿಯ ಭಾಷಾಂತರಗಳ ಸಂದರ್ಭದಲ್ಲಿ ನನಗೆ ನನ್ನ ಓದುಗರು ನನ್ನ ಕೃತಿಯನ್ನು ಸರಿಯಾಗಿ ನೋಡಬಲ್ಲರೆ ಎಂಬ ಯಾವ ಭೀತಿಯೂ ನನಗಿಲ್ಲ. ಇದು ನಿಜಕ್ಕೂ ಕೆಲಸವನ್ನು ಹೆಚ್ಚು ಅಪಾಯಕಾರಿ ಮತ್ತು ಹೆಚ್ಚು ಗಂಡಾಂತರಕಾರಿ ಆಗಿಸುತ್ತದೆ. ಅದು ನನ್ನ ಮಟ್ಟಿಗೆ ಮಹಾಶ್ವೇತಾದೇವಿ ಮತ್ತು ಡೆರಿಡರನ್ನು ಭಾಷಾಂತರಿಸುವುದರಲ್ಲಿರುವ ಮುಖ್ಯ ವ್ಯತ್ಯಾಸ. ಈ ವ್ಯತ್ಯಾಸ ಬರಿಯ ನಿರಚನಾವಾದದ ತತ್ವ ಮತ್ತು ರಾಜಕೀಯ ಕಾದಂಬರಿಯ ನಡುವೆ ಇರುವ ಕೃತಕವಾದ ವ್ಯತ್ಯಾಸಕ್ಕಿಂತ ಭಿನ್ನವಾದದು.

ಇದರ ವಿರುದ್ಧದ ವಾದ ಇಷ್ಟು ನೇರ ಸತ್ಯವಲ್ಲ, ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಪುರಾತನ ಸಾಮ್ರಾಜ್ಯಶಾಹಿ ಭಾಷೆಗಳನ್ನು ಓದುವ ಅಸಂಖ್ಯಾತ ಜನರಿದ್ದಾರೆ. ಯೂರೋಪಿನ ಭಾಷೆಗಳಲ್ಲಿ ಸ್ತ್ರೀವಾದಿ ಕಾದಂಬರಿಗಳನ್ನು ಓದುವ ಮಂದಿ ಪ್ರಾಯಶಃ ಪುರಾತನ ಸಾಮ್ರಾಜ್ಯಶಾಹಿ ಭಾಷೆಗಳಲ್ಲಿಯೇ ಅವನ್ನು ಓದುತ್ತಿರುತ್ತಾರೆ. ಇದೇ ಮಾತು ಯೂರೋಪಿಯನ್ ತತ್ವಶಾಸ್ತ್ರಕ್ಕೂ ಅನ್ವಯಿಸುತ್ತದೆ. ತೃತೀಯ ಜಗತ್ತಿನ ಭಾಷೆಗೆ ಭಾಷಾಂತರಿಸುವ ಕ್ರಿಯೆಯು ಒಂದು ಬಗೆಯಲ್ಲಿ ಮತ್ತೊಂದು ರಾಜಕೀಯ ಚಟುವಟಿಕೆ. ಈ ಲೇಖನ ಬರೆಯುತ್ತಿರುವಂತೆಯೇ ನಾನು ಕಲ್ಕತ್ತೆಯ ಜಾದವ್‌ಪುರ್ ಯೂನಿವರ್ಸಿಟಿಯಲ್ಲಿ ಬಂಗಾಳಿ ಭಾಷೆಯಲ್ಲಿ ಉಪನ್ಯಾಸಗಳನ್ನು ಕೊಡಲು ಯೋಚಿಸುತ್ತಿದ್ದೇನೆ. ನನ್ನ ಶ್ರೋತೃಗಳು ಬಹಳ ಸಭ್ಯ ನಾಜೂಕಿನ ಜನ. ಬಂಗಾಳೀ ಭಾಷೆ ಮತ್ತು ನಿರಚನವಾದವನ್ನು ಚೆನ್ನಾಗಿ ಬಲ್ಲವರು. ಅವುಗಳ ಬಗ್ಗೆ ಅವರು ಇಂಗ್ಲಿಷ್ ಅಥವಾ ಫ್ರೆಂಚ್‌ನಲ್ಲಿ ಓದಿಕೊಂಡವರು. ಕೆಲವೊಮ್ಮೆ ಅದರ ಬಗ್ಗೆ ಬಂಗಾಳಿಯಲ್ಲಿ ಬರೆದವರು. ಅದು ಒಂದು ಬಗೆಯಲ್ಲಿ ವಸಾಹತೋತ್ತರ ಭಾಷಾಂತರಕಾರನ ಪರೀಕ್ಷೆ ಎಂದು ನನಗೆ ಅನ್ನಿಸುತ್ತದೆ.

ಸಾರ್ವಜನಿಕ/ಖಾಸಗಿ ಎನ್ನುವ ಭೇದ ಎಂದೋ-ಏನು ಬೇಕಾದರೂ ಕರೆಯಿರಿ, ತೃತೀಯ ಜಗತ್ತಿನ ಹಾಗೂ ಮಹಿಳಾ ಕೃತಿಗಳ ಭಾಷಾಂತರದ ಸಂದರ್ಭದಲ್ಲಿ ಅವು ಹೊಂದಿರುವ ಪರಸ್ಪರ ಸಂಬಂಧದ ವೈಚಿತ್ರ್ಯದ ಕಾರಣದಿಂದಾಗಿ ಪ್ರಜಾಪ್ರಭುತ್ವವು ಬಲಾತ್ಕಾರದ ಕಾನೂನಾಗಿ ಮಾರ್ಪಟ್ಟುಹೋಗುತ್ತದೆ. ಒಂದು ವೇಳೆ ಆ ನಿರ್ದಿಷ್ಟ ತೃತೀಯ ಜಗತ್ತಿನ ರಾಷ್ಟ್ರವು ಕೈಗಾರಿಕಾ ಕ್ರಾಂತಿಯನ್ನು ಅನುಷ್ಠಾನಗೊಳಿಸಿ ಜೊತೆಗೇ ಏಕಸ್ವಾಮ್ಯದ ಸಾಮ್ರಾಜ್ಯಶಾಹಿಯನ್ನು ಮತ್ತು ತನ್ನ ಭೂಭಾಗದ ಕ್ಯಾಪಿಟಲಿಸಮ್ಮನ್ನು ಅದರ ಪರಿಣಾಮಗಳಲ್ಲಿ ಒಂದಾಗಿ ಆಚರಣೆಗೆ ತಂದಿದ್ದರೆ, ಮತ್ತೆ ಭಾಷೆಯೊಂದನ್ನು ಅಂತಾರಾಷ್ಟ್ರೀಯ ನೇಮವೆಂದು ಹೇರಿದ್ದರೆ ಇದರ ಒಳಗನ್ನು ನೀಟಾಗಿ

ಹೊರಗಾಗಿಸುವ ವಾದಮಂಡನೆ ನಿಜಕ್ಕೂ ಸಾಧ್ಯ. ಇದೊಂದು ಎರಡನೇ ಮಹಾಯುದ್ಧದ ಪರಿಣಾಮ ಬೇರೆ ರೀತಿ ಬಂದಿದ್ದರೆ ಅಮೆರಿಕ ಜಪಾನೀ ಭಾಷೆಯನ್ನು ಆಡಬೇಕಾಗುತ್ತಿತ್ತು ಎಂಬ ಮೂರ್ಖತನದ ಜೋಕಿನಂತೆ. ಇಂತಹ ಸಮಾನತಾವಾದಿ ಹಿಮ್ಮುಖ ಬದಲಿಸಬಹುದಾದ ತೀರ್ಪುಗಳು ವಾಸ್ತವ - ಭ್ರಮೆಗಳನ್ನು (ಫ್ಯಾಕ್ಚುವಲ್ ಫ್ಯಾಂಟಸಿ) ಎದುರಿಸಲು ತಕ್ಕುದಾದವು. ಭಾಷಾಂತರ ಬಹುಜನಮತದ ಭಾಷಾ ಚಾತುರ್ಯವನ್ನು/ಪ್ರೌಢಿಮೆಯನ್ನು ಅವಲಂಬಿಸಿರುತ್ತದೆ. ಒಬ್ಬ ಪ್ರಮುಖ ಬೆಲ್ಜಿಯನ್ ಭಾಷಾಂತರ ಸಿದ್ಧಾಂತಿಯು ಬಹಳ ಭಾವನಾತ್ಮಕತೆಯುಳ್ಳ ತೃತೀಯ ಜಗತ್ತಿನ ಬಗ್ಗೆ ಮಾತನಾಡುವುದಕ್ಕಿಂತ ಯೂರೋಪಿನ ರೆನೈಸಾನ್ಸ್ -ಪುನರುಜ್ಜೀವನದ ಬಗ್ಗೆ ಮಾತನಾಡಬೇಕು. ಪ್ರಾಚೀನ ಗ್ರೀಕೋ-ರೋಮನ್‌ನಿಂದ ಅಂತರ್-ಸಾಂಸ್ಕೃತಿಕ (ಕ್ರಾಸ್ -ಕಲ್ಚರಲ್) ಭಾಷಾಂತರಗಳನ್ನು ಸಾರಾಸಗಟಾಗಿ ಆ ಕಾಲದಲ್ಲಿ ಕೈಗೆತ್ತಿಕೊಳ್ಳಲಾಗಿತ್ತು ಎಂದು ಸೂಚಿಸುವುದರ ಮೂಲಕ ಸಮಸ್ಯೆಯನ್ನು ಬಿಡಿಸುತ್ತಾನೆ. ಯಾವನೊಬ್ಬನು ಅಲಕ್ಷಿಸುವುದು ಆ ಚಾರಿತ್ರಿಕ ಪ್ರಕ್ರಿಯೆಯಲ್ಲಿ ಮೂಲಕ್ಕೆ ಕೊಟ್ಟುಕೊಂಡಿರುವ ಪರಮಾಧಿಕಾರವನ್ನು. ವಿಶ್ವದಲ್ಲಿ ಭಾಷೆಗಿರುವ ಸ್ಥಾನವೇನು ಎನ್ನುವುದನ್ನು ಭಾಷಾಂತರ ರಾಜಕಾರಣವನ್ನು ಆಣಕಿಸಿ ನಿವಾರಿಸಲು ಹೊರಡುವವರು ಗಮನಿಸಬೇಕು. ಇಂಗ್ಲಿಷ್ ಆಡುವ ಮತ್ತು ಇಂಗ್ಲಿಷ್‌ನಲ್ಲಿ ಬರೆಯುವ ಬಂಗಾಳಿಗಳ ದೊಡ್ಡ ಗುಂಪುಗಳು ಬಂಗಾಳಿಯಲ್ಲಿನ ಭಾಷಾಂತರವನ್ನು, ಭಾಷಾಂತರಕಾರರನ್ನು ಗೇಲಿಮಾಡಬಹುದು, ಟೀಕಿಸಬಹುದು. ಹೆಜೆಮನಿಯ ಭಾಷೆಗಳಲ್ಲಿ ಮಾತ್ರ ಔದಾರ್ಯವುಳ್ಳವರು ತಮ್ಮ ಮಿತಿಗಳನ್ನು ಮೀರುವುದಿಲ್ಲ; ಅಲ್ಲಿ ಅವರು ಯಾರೂ ಹೇಳದೆಯೆ ಇನ್ನೊಂದರ ಬಗ್ಗೆ ಪ್ರಸನ್ನ ಮನೋಭಾವವನ್ನು ತಾವಾಗಿ ಬೆಳೆಸಿಕೊಂಡಿರುತ್ತಾರೆ. ಆ ಕ್ರಿಯಾಸಂದರ್ಭವು ಹೋರಾಡಲು ತುಂಬ ಕಷ್ಟಕರವಾದದ್ದು. ಏಕೆಂದರೆ ಇದರಲ್ಲಿ ಸೇರಿರುವ ವ್ಯಕ್ತಿಗಳು ಪ್ರಾಮಾಣಿಕವಾಗಿ ಔದಾರ್ಯಶೀಲರಾಗಿರುತ್ತಾರೆ. ಅಲ್ಲಿ ನಿಮ್ಮನ್ನು ಕಿರುಕುಳದಾಯಕರು ಎಂಬಂತೆ ಗುರುತಿಸಲಾಗುತ್ತದೆ. ಇದು ಇನ್ನೂ ಕಷ್ಟವಾಗುವುದು ಕೆಲವೊಮ್ಮೆ ವಸಾಹತೋತ್ತರ ಸಂದರ್ಭವನ್ನು ಅರಗಿಸಿಕೊಂಡ ಮಹಾನಗರ ಸ್ತ್ರೀವಾದಿಗಳು ಕೂಗೆತ್ತಿ, ಪ್ರವೇಶ ಸಾಧ್ಯತೆಯನ್ನು ಕುರಿತ ಸ್ತ್ರೀವಾದಿ ದೃಷ್ಟಿಕೋನವನ್ನು ತರಾತುರಿಯಲ್ಲಿ ಹಂಚಿಕೊಂಡಾಗ.

ಭಾಷಾಂತರಿಸಲ್ಪಟ್ಟ ಪಠ್ಯವು ಜನಸಮೂಹಕ್ಕೆ ತಲುಪುವಂತಾಗಬೇಕು ಎಂದು ನೀವು ಬಯಸಿದರೆ ಅದನ್ನು ಯಾರು ಬರೆದರೋ ಅವರಿಗೆ ತಲುಪುವಂತೆ ಮಾಡಲು ಪ್ರಯತ್ನಿಸಿರಿ. ಅಲ್ಲಿ ಸಮಸ್ಯೆ ನಿಚ್ಚಳವಾಗುತ್ತದೆ. ಏಕೆಂದರೆ ಅದನ್ನು ಬರೆದ ಆಕೆ ಈ ಶೈಲಿಯ ಚರಿತ್ರೆಯಲ್ಲಿ ಇರುವುದಿಲ್ಲ. ಆಕೆಗೆ ತಲುಪುವಂತೆ ಮಾಡಲು ನೀವು ಇಲ್ಲಿ ಮಾಡುತ್ತಿರುವುದೇನನ್ನು? ಎಲ್ಲಿ ವ್ಯಕ್ತಿಯ ಸೃಷ್ಟಿಯಾಗಿದೆಯೋ ಅಲ್ಲಿ, ಎಲ್ಲಿ ವ್ಯಕ್ತಿಯ ವೈಯಕ್ತಿಕ ಹಕ್ಕುಗಳ ವಿಚಾರವನ್ನು ಎತ್ತಬಹುದಾಗಿದೆಯೋ ಅಲ್ಲಿ, ಪ್ರವೇಶದ ಸ್ತರವು ನಿರ್ಗಮನದ ಸ್ತರವೂ ಆಗಿಬಿಡುತ್ತದೆ.

ನೀವು ನಿಮ್ಮ ಭಾಷೆಗಿಂತ ಬಹು ದೂರದಲ್ಲಿ ಇನ್ನೊಂದು ಭಾಷೆಯ ಜೊತೆ ಆ ಭಾಷೆಯನ್ನು ಆಯ್ಕೆಯ ಭಾಷೆಯಾಗಿ ಬಳಸಲು ಉದ್ದೇಶಿಸಿ ಸಲ್ಲಾಪಿಸುವಿರಾದರೆ (ಮಿಟ್‌ವೆಗ್‌ಸೀನ್), ನೀವು ಸಂಕೀರ್ಣವಾದ ವಿಚಾರವನ್ನು ಚರ್ಚಿಸುವುದಾದರೆ, ಕೆಲವೊಮ್ಮೆ, ನೀವು ಪಠ್ಯದ ಒಂದು ಮುಖವನ್ನು ಓದುಗನಿಗೆ ತೆರೆಯುವ ಹಾದಿಯಲ್ಲಿರುತ್ತೀರಿ. ಅದಕ್ಕೆ ಹಗುರವಾದ ಮತ್ತು ಸುಲಭವಾದ ಸ್ಪರ್ಶವನ್ನು ಕೊಟ್ಟಿರುತ್ತೀರಿ. ಅದಕ್ಕೆ ಆಕೆ ತನ್ನ ಯಾವತ್ತಿನ ಚಟುವಟಿಕೆಯಲ್ಲಿ

ಅವಕಾಶವನ್ನು ಕೊಟ್ಟಿರಲಾರಳು. ಅದಲ್ಲದೆ ನೀವು ಬೇರೆ ಯಾವುದಕ್ಕಾದರೂ, ವಸ್ತುವನ್ನು ದಾಟಿಸುವ ಉದ್ದೇಶದಿಂದ, ಅವಸರದಲ್ಲಿ ನೀವು ಕಲಿತ ಭಾಷೆಯ ಮೂಲಕ, ಪ್ರವೇಶ ಒದಗಿಸುತ್ತಿದ್ದರೆ ನೀವು ಪಠ್ಯಕ್ಕೆ ಮೋಸ ಮಾಡುತ್ತಿದ್ದೀರಿ ಮತ್ತು ಗುಮಾನಿಗೆ ಎಡೆ ಮಾಡುವಂತಹ ರಾಜಕಾರಣದಲ್ಲಿ ತೊಡಗಿರುತ್ತೀರಿ.

ಮಹಿಳೆಯರಲ್ಲಿರುವ ಐಕಮತ್ಯವನ್ನು ಇಲ್ಲಿ ಅಳೆಯುವುದು ಹೇಗೆ? ಪ್ರವೇಶಕ್ಕಿರುವ ಟ್ರಾಫಿಕ್ -ಚಿಂತನೆಯ ಸಂಚಾರವು -ದ್ವಿಮುಖವಾದುದು ಎಂದು ಕಲಿಸಿಕೊಳ್ಳಲು ಸಾಧ್ಯವಾಗದಿದ್ದರೆ ಅವರ ಸಮಾನ ಅನುಭವಗಳನ್ನು ಗಣಿಸುವುದಾದರೂ ಹೇಗೆ? ನನಗೆ ಅನ್ನಿಸುವಂತೆ ಈ ಯೋಚನೆಗೆ ಒಂದು ನಾಜೂಕಿನ ಸಮಾಧಿ ಕಟ್ಟಿಬಿಡುವುದು ಲೇಸು; ಜ್ಞಾನದ ನೆಲೆಯಂತೆ, ಮಾನವೀಯ ವಿಶ್ವಾತ್ಮಕತೆಯ ಪರಿಕಲ್ಪನೆಯನ್ನೂ ಜೊತೆಗೆ ಸೇರಿಸಿ. ಬೇರೆ ದಾರಿಯಲ್ಲಿ ಸಂಬಂಧವನ್ನು ಏರ್ಪಡಿಸಿಕೊಳ್ಳಲು ಅನ್ಯತಃ ಸಾಧ್ಯವಿಲ್ಲ ಎನ್ನುವ ಎಡೆ ಮಹಿಳೆಯನ್ನು ಸಂಪರ್ಕಿಸಲು ಯತ್ನಿಸುತ್ತಿರುವವರು ಮಹಿಳೆಯರು ಕೂಡ ಸಮಾನವಾದ ಒಂದಂಶವನ್ನು ಹೊಂದಿರುವರೆಂದು ಭಾವಿಸುವುದು ಒಳ್ಳೆಯದು. ಅದು ನಿಜಕ್ಕೂ ಮಹತ್ವದ ಮೊದಲ ಹೆಜ್ಜೆ. ಆದರೆ ನಿಮ್ಮ ಆಸಕ್ತಿಯು ಕೇವಲ ಮಹಿಳೆಯರಲ್ಲಿ ಐಕಮತ್ಯವುಂಟೋ ಇಲ್ಲವೋ ಎನ್ನುವುದನ್ನು ತಿಳಿಯುವುದಾಗಿದ್ದಲ್ಲಿ ಈ ಅನಿಸಿಕೆಯನ್ನು ಅದು ವೈಶ್ವಿಕ ಅಥವಾ ಸ್ವಾಭಾವಿಕವಾದ ಗುರಿಗೆ ಇರುವ ದಾರಿ ಎಂದು ಬಗೆದು ಬಿಟ್ಟುಬಿಟ್ಟರೆ ಹೇಗೆ? ಮತ್ತು ಇನ್ನೊಂದು ಹೆಜ್ಜೆಯನ್ನಿಡಲು ಪ್ರಯತ್ನಿಸಿದರೆ ಹೇಗೆ?

ಮಹಿಳೆಯರು ಸ್ವಯಂ- ತಮ್ಮಷ್ಟಕ್ಕೆ ತಾವೇ- ಗುರುತಿಸಲು ಸಾಧ್ಯವಾಗುವಂಥ ಸಮಾನ ವಾದ ಒಂದಂಶವನ್ನು ಹೊಂದಿರುವರೆಂದು ಹೇಳುವ ಬದಲು, ಸೌಜನ್ಯಪೂರ್ವಕವಾಗಿ ಮತ್ತು ಕಾರ್ಯಸಾಧುವಾಗಿ ಅವರಲ್ಲಿ ಐಕಮತ್ಯವುಂಟೋ ಇಲ್ಲವೋ ಎನ್ನುವುದನ್ನು ಅರಿಯುವುದರಲ್ಲಿ ನನ್ನ ಮೊದಲ ಆದ್ಯತೆಯೆಂದರೆ ಆಕೆಯ ತಾಯಿನುಡಿಯನ್ನು ಕಲಿಯುವುದು ಎಂದೇಕೆ ಹೇಳಬಾರದು? ವ್ಯತ್ಯಾಸಗಳೇನು ಎನ್ನುವುದು ಕೂಡಲೇ ನಿಮ್ಮ ಅನುಭವಕ್ಕೆ ಬರುತ್ತದೆ. ಆ ಅನ್ಯ ಮಹಿಳೆ ಬಾಲ್ಯದಲ್ಲಿ ತನ್ನ ತಾಯ ಕಾಲಬುಡದಲ್ಲಿ ನಿಂತು ವಾಸ್ತವಗಳೇನು ಎಂದು ಗ್ರಹಿಸಿದ ಅವಳ ಭಾಷೆಯನ್ನು ನೀವು ಕಲಿಯಲು ಮೊದಲಿಟ್ಟಂತೆಲ್ಲ ನೀವು ಪ್ರತಿದಿನವೂ ಐಕಮತ್ಯವನ್ನು ಅನುಭವಿಸಲು ತೊಡಗುತ್ತೀರಿ. ಇದು ಸಾಂಸ್ಕೃತಿಕ ಭಾಷಾಂತರದ ಆತ್ಮೀಯತೆಯನ್ನು ಹೊಂದಲು ತಯಾರಿ - ಪ್ರವೇಶಿಕೆ. ಬದಲಿಗೆ ನೀವು ಐಕಮತ್ಯ ಕುರಿತ ನಿಮ್ಮ ಪರಿಕಲ್ಪನೆಯನ್ನು ಇನ್ನೊಬ್ಬರ ಮೇಲೆ ಹೇರಲು ಶುರುಮಾಡಿದ್ದಾದರೆ ನೀವು ಈ ಉದಾಹರಣೆಯನ್ನು ಕಾರ್ಯಸಾಧು ಮಾಡಲು ಪ್ರಯತ್ನಿಸಿ, ನಿಮ್ಮ ಐಕಮತ್ಯದ ಕಲ್ಪನೆಯು ಎಷ್ಟರಮಟ್ಟಿಗೆ ಸರಿ ಎನ್ನುವುದನ್ನು ಪರಿಶೀಲಿಸುವ ಜವಾಬ್ದಾರಿಯನ್ನು ನೀವಾಗ ಹೊರಬೇಕಾಗುತ್ತದೆ.

ಇನ್ನೊಂದು ಬಗೆಯಲ್ಲಿ ಹೇಳುವುದೆಂದರೆ, ನಿಮಗೆ ಇನ್ನೊಬ್ಬರ ಬಗ್ಗೆ ಮಾತಾಡಲಿಕ್ಕಿದ್ದರೆ ಅಥವಾ ನೀವೇ ಆ ಅನ್ಯರೆಂದು ದಾವೆ ಹೂಡಿದರೆ ನಿಮಗೆ ಅನ್ಯ ಭಾಷೆಗಳನ್ನು ಕಲಿಯುವುದು ಅತಿ ಮುಖ್ಯವಾಗುತ್ತದೆ. ಇದನ್ನು ಅಕಡೆಮಿಕ್ ಉದ್ದೇಶಗಳಿಗೆ ಭಾಷೆಯನ್ನು ಕಲಿಯುವ ಜಾಣ ಸಂಪ್ರದಾಯಕ್ಕಿಂತ ಬೇರೆಯಾಗಿ ನೋಡಬೇಕು. ನಾನು ಮಾತಾಡುತ್ತಿರುವುದು ಏಕಭಾಷಾ ಸಂಸ್ಕೃತಿಯ ಹೆಜಿಮನಿಯಿಂದ ಬಂದ ಮಹಿಳೆಯರು ಅನ್ಯಭಾಷೆಯನ್ನು ತಮ್ಮ ಭಾಷೆಯನ್ನಾಗಿಸಿಕೊಳ್ಳುವುದರ ಪ್ರಾಮುಖ್ಯತೆಯ ಬಗ್ಗೆ. ಆ ಮಹಿಳೆ ತನ್ನದೇ ವಿನಾಶದ ಪಣದಲ್ಲಿ

ಮಹಿಳಾ ಐಕಮತ್ಯವನ್ನು ಒತ್ತಾಯಿಸುವ ಮೂಲಕ, ಎಲ್ಲರ ಬದುಕನ್ನೂ ಅಸಹನೀಯಗೊಳಿಸಿಬಿಡುತ್ತಾರೆ.

ಇದರಲ್ಲಿ ಒಳಗೊಳ್ಳುವ ಪ್ರತಿಯೊಬ್ಬರೂ ಇಟ್ಟುಕೊಳ್ಳುವ ಏಕರೀತಿಯ ಸೃಷ್ಟಿಯಲ್ಲಿ ಸಂಭವಗೊಂಡಿರುವಲ್ಲಿ ಸಂಭ್ರಮಿಸಲ್ಪಡುವಂತಿರುವ ಮಹಿಳಾ ಐಕಮತ್ಯದ ನಂಬಿಕೆಗಳು ನನ್ನಲ್ಲಿ ಅಸಹನೀಯತೆಯನ್ನು ಹುಟ್ಟಿಸಿಬಿಡುತ್ತವೆ. ವಿಶ್ವಾದ್ಯಂತ ಮಹಿಳೆಯರು ಹೆಣ್ಣಾಗಿ ಅಥವಾ ಸ್ತ್ರೀವಾದಿಯಾಗಿ ಬದುಕಿ ಬೆಳೆದ ಅಸಂಖ್ಯಾತ ಭಾಷೆಗಳಿವೆ. ಆದರೂ ನಾವು ಉರುಹೊಡೆದು ಹೊಡೆದು ಕಲಿಯುತ್ತಿರುವ ಶಕ್ತಿವಂತ ಯೂರೋಪಿಯನ್ ಭಾಷೆಗಳಿವೆ; ಕೆಲವೊಮ್ಮೆ ಬಲಿಷ್ಠ ಏಷಿಯಾದ ಭಾಷೆಗಳು, ಅತಿ ಕಡಿಮೆ ಆಫ್ರಿಕದ ಭಾಷೆಗಳು. ಇನ್ನುಳಿದ ಪರಭಾಷೆಗಳನ್ನು ಜ್ಞಾನಶಾಸ್ತ್ರಗಳ ವಿಘಟನೆಯ ನಡುವೆ ಜ್ಞಾನವನ್ನು ಸೃಷ್ಟಿಸಬೇಕಾದ ಮಾನವಶಾಸ್ತ್ರಜ್ಞರು ಮಾತ್ರ ಕಲಿಯುತ್ತಾರೆ. ಸಾಮಾನ್ಯವಾಗಿ(ಅಗತ್ಯವಾಗಿ ಎಂದೇನೂ ಅಲ್ಲ) ಅವರಿಗೆ ನಾವು ಚರ್ಚಿಸುತ್ತಿರುವ ಮೂರು ಭಾಗಗಳ ರಚನೆಯ ಬಗ್ಗೆ ಆಸಕ್ತಿಯಿರುವುದಿಲ್ಲ.

ಐಕಮತ್ಯವನ್ನು ಸೈದ್ಧಾಂತಿಕ ಪಕ್ಷವೆಂದು ಚರ್ಚಿಸುತ್ತಿರುವೆವಾದರೆ ಪ್ರಪಂಚದ ಎಲ್ಲ ಮಹಿಳೆಯರೂ ಅಕ್ಷರಸ್ಥರಲ್ಲ ಎನ್ನುವುದನ್ನು ಸಹ ನಾವು ನೆನಪಿಟ್ಟುಕೊಳ್ಳಬೇಕು. ಅವರ ಭಾಷಿಕ ಸಂರಚನೆಯನ್ನು ನಾವು ಹಂಚಿಕೊಳ್ಳಲಾರೆವಾಗಿ ಅವರ ಪರಂಪರೆ ಮತ್ತು ಸಂದರ್ಭಗಳು ನಮ್ಮ ಪಾಲಿಗೆ ಮಸುಕಾಗಿಯೇ ಉಳಿದಿವೆ. ಈ ದೃಷ್ಟಿಕೋನದಿಂದಲೇ ನನಗೆ ಭಾಷೆಗಳನ್ನು ಕಲಿಯುವುದರಿಂದ ಹೆಣ್ಣು ಎನ್ನುವ ಚಿಹ್ನೆಯನ್ನು ಬಳಸುವ ಅರ್ಥವೇನು ಎನ್ನುವದನ್ನು ಕುರಿತ ನಮ್ಮ ಪೂರ್ವಗ್ರಹಿಕೆಗಳು ಹರಿತವಾಗುತ್ತವೆ ಎಂದು ಅನ್ನಿಸಿದೆ. ವಸ್ತುಗಳಿಗೆ ಪ್ರವೇಶ ನಮಗೆ ಲಭಿಸುವಂತಿರಬೇಕು ಎಂದರೆ, ಈ ನಮಗೆ ಅನ್ನುವವರು ಯಾರು? ಆ ಚಿಹ್ನೆಗೆ ಅರ್ಥವೇನು?

ಲೇಖನದುದ್ದಕ್ಕೂ ನಾನು ಮಹಿಳೆಯರ ಉದಾಹರಣೆಗಳನ್ನು ಕೊಟ್ಟಿದ್ದೇನಾದರೂ ಈ ವಾದವು ಎಲ್ಲಕ್ಕೂ ಸಮಾನವಾಗಿ ಅನ್ವಯವಾಗುತ್ತದೆ. ಮಹಿಳೆಯ ರೆಟರಿಸಿಟಿ ದುಪ್ಪಟ್ಟು ಮಸುಕಾಗಿರಬಹುದು. ಯಾರೇ ಇರಲಿ, ಎದುರಿಗೆ ಕಾರ್ಯಸಾಧು ಆದ್ಯತೆಗಳನ್ನು ಇಟ್ಟುಕೊಳ್ಳಬೇಕಾದರೂ ಒಂದೇ ವಿಷಯದ ಮೇಲೆ ಸಂಪೂರ್ಣವಾಗಿ ಗಮನವಿಟ್ಟುಕೊಳ್ಳುವುದರಲ್ಲಿ ನನಗೆ ಯಾವ ಅನುಕೂಲತೆಯೂ ಕಾಣುವುದಿಲ್ಲ. ಈ ಕೃತಿಯಲ್ಲಿ ನಾವು ರಾಚನಿಕೋತ್ತರ ಚಿಂತನೆ ಮತ್ತು ಸ್ತ್ರೀವಾದ ಸಿದ್ಧಾಂತದ ಮೇಲೆ ಅದರ ಪ್ರಭಾವವನ್ನು ಕುರಿತು ಯೋಚಿಸುತ್ತಿದ್ದೇವೆ. ಎಲ್ಲಿ ರಾಚನಿಕೋತ್ತರ ಚಿಂತನೆಯ ಒಂದಿಷ್ಟನ್ನು ಭಾಷೆಯ ಸಾಹಿತ್ಯಕ ಕಾರ್ಯಕ್ರಮಗಳ ಅನ್ವಯ ಪ್ರತಿನಿಧಿಯ ಸಂರಚನೆಗೆ ಅನ್ವಯಿಸಬಹುದೋ ಅಲ್ಲಿ ಲಿಂಗಗಳ ನಡುವಣ ತರತಮ ಗಣನೆಯ ಸಾಮಾಜಿಕ ಕಾರಣದಿಂದಾಗಿ ಮಹಿಳೆಯರ ಪಠ್ಯಗಳು ಭಿನ್ನವಾಗಿ ಕಾರ್ಯನಿರ್ವಹಿಸುತ್ತವೆ. ಈ ಅಂಶ ವಸಾಹತುಶಾಹಿಯ ಸಂದರ್ಭಕ್ಕೆ ಸಹ ಸಾಮಾನ್ಯವಾಗಿ ಅನ್ವಯಿಸುತ್ತದೆ. KÃOÀ ಯು ಕಿಕೂಯು ಭಾಷೆಯಲ್ಲಿ ಬರೆಯಲು ತೀರ್ಮಾನಿಸಿದಾಗ ಅವನು ಖಾಸಗಿ ಭಾಷೆಯೊಂದನ್ನು ಸಾರ್ವಜನಿಕ ಕ್ಷೇತ್ರಕ್ಕೆ ತರುತ್ತಿರುವನೆಂದು ಕೆಲವರು ಭಾವಿಸಿದರು. ಆದರೆ ಸಮಾಜವೊಂದರಲ್ಲಿ ಬಹುಮಂದಿ ಹಂಚಿಕೊಂಡಿರುವ ಭಾಷೆಯನ್ನು ಖಾಸಗಿಯದನ್ನಾಗಿ ಮಾಡಿದ್ದಾದರೂ ಯಾವುದು?

ನಾನು ಭಾಷಾ ಕಲಿಕೆಯನ್ನು ಕುರಿತು ಮಾತಾಡುತ್ತಿರುವಾಗ ಖಾಸಗಿ ಭಾಷೆಗಳೆಂದು ಕರೆಯಲಾಗುವ ಆ ಭಾಷೆಗಳ ಬಗ್ಗೆ ಯೋಚಿಸುತ್ತಿದ್ದೆ. ಆ ಖಾಸಗಿ ಭಾಷೆಗಳೆಂದು ಹೆಸರಿಸುವ ಭಾಷೆಗಳ ಒಳಗೂ ಭಾಷೆಯ ರಂಗಾಭಿನಯವು ಸೆಕ್ಸ್‌ಡ್ ವ್ಯಕ್ತಿಯನ್ನಷ್ಟೇ ಅಲ್ಲ, ಜೆಂಡರ್ಡ್ ಪ್ರತಿನಿಧಿಯನ್ನು ಸೃಷ್ಟಿಸುವ ಬಗೆಗಳು ಭಿನ್ನವಾಗಿರುತ್ತವೆ ಎನ್ನುವುದು ನನ್ನ ನಿಶ್ಚಿತಾಭಿಪ್ರಾಯ. ಇದು ಘಟಿಸುವುದು ಎಡೆಬಿಡದೆ ರೆಟರಿಸಿಟಿಯಿಂದ ಅಡಚಣೆಗೆ ಒಳಗಾಗುವ ಮತ್ತು ಸಂಭವನೀಯತೆಯನ್ನು ಸೂಚಿಸುವ ಕೇಂದ್ರೀಕರಣದ ಒಂದು ಆವೃತ್ತಿಯಿಂದ. ಬೇರೆ ಒಂದು ಬಗೆಯಲ್ಲಿ ಸಾಧಿಸಿ ತೋರಿಸಿದ ಹೊರತು ಇದು ನನಗೆ ಪ್ರಭಾವೀ ಮತ್ತು ಅಧೀನ ಜೆಂಡರಿಂಗ್‌ನ ಸ್ಥಿತಿ ಮತ್ತು ಪರಿಣಾಮ ಮಾತ್ರವೇ ಎಂದು ತೋರುತ್ತದೆ. ಅದು ಹಾಗಿದ್ದಲ್ಲಿ ನಾವು ಮಹಿಳಾ ಪತ್ರಗಳ ಮೇಲೆ ಗಮನ ಹರಿಸುವುದಕ್ಕೆ ಕೆಲವು ಕಾರಣಗಳು ಸಿಕ್ಕುತ್ತವೆ. ನಾವು ಹೆಣ್ಣು ಎನ್ನುವ ಪದವನ್ನು ಆ ನಿಮ್ನ ವ್ಯಕ್ತಿಗಳ ಆವರಣಕ್ಕೆ ಬಳಸಿಕೊಳ್ಳೋಣ; ಆದ್ಯ ಮತ್ತು ಅಪ್ರಧಾನ ಲೈಂಗಿಕ ಗುಣಲಕ್ಷಣಗಳನ್ನು ಸಾಮಾಜಿಕ ಕೆತ್ತನೆಗಳಲ್ಲಿ ಹಾಗೆ ವಿವರಿಸಲಾಗಿದೆ. ಭಿನ್ನ ಭಾಷೆಗಳ ಭಿನ್ನ ರೆಟರಿಕಲ್ ಪೊಟಗಳ ಒಳಗೇ ಪ್ರತ್ಯೇಕಿಸಲಾಗಿರುವ ಒಬ್ಬಗೆಯ ಸಾಮಾನ್ಯತೆಯನ್ನು ಜಾಗರೂಕತೆಯಿಂದ ಗಮನಿಸಲು ಆಗ ನಾವು ಪ್ರಾರಂಭಿಸಬಹುದು. ಆದರೆ, ಇಲ್ಲಿಯೂ ಸಹ ನಾವು ವರ್ಗಗಳ ಚಾರಿತ್ರಿಕ ಶ್ರೇಷ್ಠತೆಯನ್ನು ಗಮನದಲ್ಲಿ ಇಟ್ಟುಕೊಂಡಿರಬೇಕು. ಭಾರತೀ ಮುಖರ್ಜಿ, ಅನಿತಾ ದೇಸಾಯಿ ಮತ್ತು ಗಾಯತ್ರಿ ಸ್ಪಿವಾಕ್ ಇವರಲ್ಲಿ ಮತ್ತು ಅನಕ್ಷರಸ್ಥ ಮನೆಗೆಲಸದ ಹೆಣ್ಣಿನಲ್ಲಿ ಒಂದೇ ಬಗೆಯ ಪ್ರತಿನಿಧಿಯ ರೆಟರಿಕಲ್ ರೂಪನಿರ್ಣಯ ಇರುವುದಿಲ್ಲ.

ಸಾಮಾನ್ಯತೆಯನ್ನು ಜಾಗರೂಕ ಹಾಗೂ ಜವಾಬ್ದಾರಿಯುತ ಭಾಷಾಂತರ ಪ್ರಕ್ರಿಯೆಯಿಂದ ಗಮನಿಸುವುದು ನಮ್ಮನ್ನು ಭಿನ್ನತೆಯ ವಲಯಗಳಿಗೂ, ಭಿನ್ನ ಭಿನ್ನತೆಗಳಿಗೂ ಒಯ್ಯಬಲ್ಲುದು. ಇದು ಮುಖ್ಯವೂ ಆಗಬಲ್ಲುದು. ಏಕೆಂದರೆ, ಸಾಮ್ರಾಜ್ಯಶಾಹಿಯ ಪರಂಪರೆಯಲ್ಲಿ ಮಹಿಳೆ ಎಂಬ ಕಾನೂನು ಸಮ್ಮತ ವ್ಯಕ್ತಿ, ಆ ಪ್ರದೇಶದ ಮಹಿಳಾ ಮಾನವಶಾಸ್ತ್ರೀಯ ಅಥವಾ ಸಾಹಿತ್ಯಕ ವ್ಯಕ್ತಿಯೊಂದಿಗಿನ ಹೋಲಿಕೆಯಲ್ಲಿ ಐರೋಪ್ಯೀಕರಣದ ವೈಫಲ್ಯವನ್ನು ಸೂಚಿಸುತ್ತಾಳೆ. ಉದಾಹರಣೆಗೆ ಆಧುನಿಕ ಅಲ್ಜೀರಿಯಾದ ಫ್ರೆಂಚ್ ಮತ್ತು ಇಸ್ಲಾಮಿಕ್ ಕೌಟುಂಬಿಕ ರಿವಾಜುಗಳ ನಡುವೆ ಇರುವ ವ್ಯತ್ಯಾಸಗಳು. ಕುಟುಂಬ, ವಿವಾಹ, ವಾರಸುದಾರಿಕೆ, ಸಂತಾನದ ಧರ್ಮಸಮ್ಮತತೆ ಮತ್ತು ಮಹಿಳಾ ಸಾಮಾಜಿಕ ಪ್ರಾತಿನಿಧ್ಯ ಇವುಗಳಲ್ಲಿವೆ. ಈ ಭಿನ್ನತೆಗಳನ್ನು ನಾವು ಮನಸ್ಸಿನಲ್ಲಿ ಇಟ್ಟುಕೊಂಡಿರಬೇಕು. ಮೊದಲ ವಿಶ್ವದಲ್ಲಿನ ಮೂಲನಿವಾಸಿ ಅಲ್ಪಸಂಖ್ಯಾತರ, ಅದೇ ತೃತೀಯ ವಿಶ್ವದಲ್ಲಿನ ಬಹುಸಂಖ್ಯಾತರ ಭಿನ್ನತೆಗಳನ್ನು ನಾವು ಗೌರವಿಸಬೇಕು.

ಸಂಭಾಷಣೆಯ ನಡುವೆ ಬ್ಯಾರೆಟ್ ನನ್ನನ್ನು ಕೇಳಿದರು, ನಾನೇನಾದರೂ ಫೂಕೋನ ವಿಚಾರಗಳತ್ತ ಒಲವು ಹೆಚ್ಚಿಸಿಕೊಂಡಿರುವೆನೋ ಎಂದು. ಅದು ನಿಜಕ್ಕೂ ವಾಸ್ತವ. ಕ್ಯಾನ್ ದಿ ಸಬಾಲ್ಟರ್ನ್ ಸ್ಪೀಕ್ ಕೃತಿಯಲ್ಲಿ ನಾನು ಫೂಕೋನ ವಿಚಾರಗಳ ಬಗ್ಗೆ ಕಟು ವಿಮರ್ಶೆಯ ನಿಲುವು ತಳೆದಿದ್ದೆ. ಅದು ಸಾಮ್ರಾಜ್ಯಶಾಹಿಯ ಸಾಮಾನ್ಯ ವಿಮರ್ಶೆಯಾಗಿತ್ತು.[14] ನನಗೆ ಅವನ pouvoir-savior (ಶಕ್ತಿ - ಜ್ಞಾನ) ಸಿದ್ಧಾಂತ, ಬಹಳ ಉಪಯೋಗಕರ ಎಂದು ಕಂಡಿದೆ. ಫೂಕೋ ಫ್ರೆಂಚ್‌ಭಾಷೆಗೆ ಈ ಸಾಮಾನ್ಯವಾದ ಜೋಡಿಪದವನ್ನು (....ಅಂತೆ ಅರಿಯುವ ಸಾಮರ್ಥ್ಯ) ಕೊಡುಗೆಯಾಗಿ ಕೊಟ್ಟಿದ್ದಾನೆ, ಅದು ñsOoosw&gwh (ನುಡಿಯುವ ಇಚ್ಛೆ - ಅರ್ಥದ ಉದ್ದೇಶ) ಎಂಬ ಜೋಡಿಪದದ ಮಗ್ಗುಲಲ್ಲಿ ಸದ್ದಿಲ್ಲದೆ ಸ್ಥಾನ ಪಡೆಯಲು.

ಅತ್ಯಂತ ಸಾಮಾನ್ಯ ಪಾತಳಿಯಲ್ಲು pouvoir- savior ಎನ್ನುವುದು ನಾವು ಸಾಮಾನ್ಯ ವಸ್ತುಗಳನ್ನೇ ಆದರೂ ಗ್ರಹಿಸಲು ಸಹಾಯ ಮಾಡುವ ಪರಸ್ಪರ ಹಂಚಿಕೊಂಡ ಕೌಶಲ್ಯ. ಇದು ಖಂಡಿತವಾಗಲೂ puissance/connaissance ಎನ್ನುವುದರ ಲೆಕ್ಕದಲ್ಲಿ ಶಕ್ತಿ/ ಜ್ಞಾನವಷ್ಟೇ ಅಲ್ಲ, ಅವೆಲ್ಲವೂ ಒಟ್ಟುಗೂಡಿದ ಸಂಸ್ಥೆಗಳು. ಮನುಷ್ಯ ಗ್ರಹಿಸುವ ಸಾಮಾನ್ಯ ವಿಧಾನ, ಇನ್ನೊಂದೆಡೆ ಅದು ಅಧೋಮನುಜನಲ್ಲಿ ಕಳೆದುಹೋಗುವುದು.

pouvoir- savior ಎನ್ನುವುದನ್ನು ಮಹಿಳೆಯ ದೃಷ್ಟಿಯಿಂದ ಗಮನಿಸಿದ ನನ್ನ ಗಮನವಿರುವುದು ಹೊಸದಾಗಿ ವಲಸೆ ಬಂದವರು ಮತ್ತು ತಾಯ್ನುಡಿಯ ಬದಲಾವಣೆ ಹಾಗೂ ತಾಯಿ ಮತ್ತು ಮಗಳ ನಡುವಣ pouvoir- saviorನಲ್ಲಿ. ಮಗಳು ಹೆರುವ ಹಕ್ಕಿನ ಬಗ್ಗೆ ಮಾತನಾಡಿದಾಗ ತಾಯಿ ಗೌರವದ ಬಗ್ಗೆ ಮಾತನಾಡಿದರೆ ಅದು ಭಾಷಾಂತರದ ಹುಟ್ಟೋ, ಸಾವೋ?

ತನ್ನ ತಾನು ರಕ್ಷಿಸಿಕೊಳ್ಳುವುದರಲ್ಲಿ ಇರುವ ನೈತಿಕ ಪ್ರಶ್ನೆಗಳನ್ನು ಕುರಿತಂತೆ ಮಂಡಿಸಿದ ತನ್ನ ಹೊಸ ಸಿದ್ಧಾಂತದಲ್ಲಿ ಫೂಕೋ ಬಹಳ ಆಸಕ್ತಕರವಾಗಿ ಕಂಡುಬರುತ್ತಾನೆ. ಸಾಮ್ರಾಜ್ಯಶಾಹಿಗೆ ಮಾತ್ರ ಸಂಬಂಧಿಸಿದಂತೆ ಇರುವಂತಹ - ನೈತಿಕ ವ್ಯಕ್ತಿ ಮನುಷ್ಯನಾಗಿ ಕೊಡಲ್ಪಟ್ಟಿರುತ್ತಾನೆ ಎನ್ನುವ ಜಾತ್ಯತೀತ ನಂಬಿಕೆಗಿಂತ ಒಬ್ಬ ವ್ಯಕ್ತಿ, ಒಂದು ನಿರ್ದಿಷ್ಟ ಸಮುದಾಯದಲ್ಲಿ, ತನ್ನ ತಾನು ರಕ್ಷಿಸಿಕೊಳ್ಳುವತ್ತ ಯಾವ ಬಗೆಯ ನಿರ್ದೇಶನಗಳನ್ನು ಸ್ವೀಕರಿಸಿರುತ್ತಾನೆ ಎನ್ನುವುದನ್ನು ಪರಿಶೀಲಿಸುವುದು ನೈತಿಕತೆಯ ಪ್ರಶ್ನೆಗಳನ್ನು ಉತ್ತರಿಸಲು ಮುಖ್ಯವಾಗಿರುತ್ತದೆ. ರಾಜನೀತಿಕವಾಗಿ, ನೈತಿಕತೆಯ ತತ್ವದ ಸಾಬೂನಿನಲ್ಲಿ ಒಗೆದು ಶುಭಗೊಳಿಸಿದ ಕ್ರೈಸ್ತಧರ್ಮಕ್ಕೆ ಸರಿಹೋಲುವ ಜಾತ್ಯತೀತತೆಯಲ್ಲಿ ನೈತಿಕತೆಯ ವಿಚಾರವು ಮುಖಹೀನವಾದುದು. ಇದರಿಂದ ಹೊರನೆಗೆವ ಫೂಕೋ ವ್ಯಕ್ತಿ ನೈತಿಕವಾಗುವುದಕ್ಕೆ ಇರುವ ಅನ್ಯ ಮಾರ್ಗಗಳು ಯಾವುವು ಎನ್ನುವ ಪ್ರಶ್ನೆಗಳನ್ನು ಅನ್ವೇಷಿಸುತ್ತಾ ಇದ್ದವನು. ಇದು ಆಸಕ್ತಿಕರ. ಏಕೆಂದರೆ ಸಾಮ್ರಾಜ್ಯಶಾಹಿ ಮತ್ತು ಜಾತ್ಯತೀತತೆಗಿರುವ ಸಂಪರ್ಕವನ್ನು ಗಮನಿಸಿದರೆ ಧರ್ಮವನ್ನು ಹೊರತುಪಡಿಸಿದರೆ ಸಾಮಾನ್ಯ ಧ್ವನಿಯನ್ನು ತಲುಪುವ ಪರ್ಯಾಯ ಮಾರ್ಗವಿಲ್ಲ. ಧರ್ಮವನ್ನು ನೈತಿಕ ವಿಚಾರವನ್ನು ಹುಟ್ಟುಹಾಕುವ ಹಾದಿ ಎಂದು ನೋಡದಿದ್ದರೆ ನಮಗೆ ಸಿಗುವುದು ವಿವಿಧ ಬಗೆಯ ಮೂಲಭೂತವಾದಗಳಷ್ಟೆ. ಸಾಂಸ್ಕೃತಿಕ ರಾಜಕಾರಣದಲ್ಲಿ ಮತ್ತು ಅದರ ಹೊಸ ನೈತಿಕತೆಯ ತತ್ವಗಳ ಸಂಪರ್ಕಗಳ ಸಂಬಂಧದಲ್ಲಿ ಕೆಲಸ ಮಾಡುವವರು ನೈತಿಕ ವಿಚಾರಗಳ ವ್ಯುತ್ಪತ್ತಿಯಲ್ಲಿನ ಧರ್ಮದ ಪ್ರಶ್ನೆಗಳ ಕುರಿತು ಆಸಕ್ತಿ ಹೊಂದಿರಬೇಕಾಗುತ್ತದೆ. ಇಲ್ಲಿ ಫೆಮಿನಿಸ್ಟ್ ಕಾರ್ಯಗಳಿಗೆ ಅವಕಾಶಗಳು ಹೆಚ್ಚಿಗೆ ಇರುತ್ತವೆ. ಏಕೆಂದರೆ ಪಶ್ಚಿಮದ ಸ್ತ್ರೀವಾದಿಗಳು ಈವರೆಗೂ ಧರ್ಮವೊಂದು ಸಾಂಸ್ಕೃತಿಕ ಭಿನ್ನತೆಯ ಕುರುಹು ಎನ್ನುವುದಕ್ಕಿಂತ ಅದೊಂದು ಸಾಂಸ್ಕೃತಿಕ ಸಾಧನ ಎನ್ನುವುದನ್ನು ಅರಿತೇ ಇಲ್ಲ. ನಾನು ಸಧ್ಯದಲ್ಲಿ ಪ್ರೊಫೆಸರ್ ಬಿ.ಕೆ. ಮತಿಲಾಲ್‌ರ ಜೊತೆ ಆಚರಿಸಲಾಗುವ ಹಿಂದೂ ನೈತಿಕತೆಯ ವಿಚಾರವನ್ನು ಕುರಿತು ಕೆಲಸ ಮಾಡುತ್ತಿದ್ದೇನೆ. ಆತ ಜ್ಞಾನವಂತ ಪುರುಷ ಸ್ತ್ರೀವಾದಿ. ನಾನು ಸಕ್ರಿಯ ಸ್ತ್ರೀವಾದಿ. ಅವರ ಮುಕ್ತತೆ ಮತ್ತು ಅಧ್ಯಯನದ ನೆರವಿನಿಂದ ನಾನು ನೈತಿಕ ಪರಿಣಾಮ ವೃದ್ಧಕಗಳ ಮತ್ತು ನೈತಿಕ ಚಾಲಕಶಕ್ತಿಗಳ ನಡುವಣ ಭಿನ್ನತೆಯನ್ನು ಅರಿಯಲು ಸಂಸ್ಕೃತ ಮಹಾಕಾವ್ಯದ ಕೆಲ ಭಾಗಗಳನ್ನು ಎಲ್ಲ ಅಂಗೀಕೃತ ವಿಧಾನಗಳಿಗಿಂತ ಭಿನ್ನವಾಗಿ ಭಾಷಾಂತರಿಸಲು ಪ್ರಯತ್ನಿಸುತ್ತಿದ್ದೇನೆ. ಏಕೆಂದರೆ ನಾನು ನೆಚ್ಚುವುದು - ಕಲಿಯುತ್ತಿದ್ದೇನೆ ಅನ್ನುವುದನ್ನು ಅಷ್ಟೇ ಅಲ್ಲ,

ಒಳ್ಳೆಯ ಇಂಗ್ಲಿಷ್ ಅನ್ನು ಅಷ್ಟೇ ಅಲ್ಲ, ಬದಲಿಗೆ ನಾನು ಬಹಳ ಮಾತಾಡಿರುವ ಮೂರು ಭಾಗದ ಯೋಜನೆಯನ್ನು ನೆಚ್ಚುತ್ತೇನೆ ಎನ್ನುವುದರಿಂದ. ಇದು ಓದುಗರನ್ನು ಸಂಪ್ರೀತಗೊಳಿಸುತ್ತದೆ ಎಂದು ನಾನು ಆಶಿಸುತ್ತೇನೆ. ಚಾರಿತ್ರಿಕವಾಗಿ ಜಾತ್ಯತೀತವಾದ ಆದರ್ಶದಿಂದಲ್ಲದೆ ಬೇರೊಂದೆಡೆಯಿಂದ ಉದ್ಭವಿಸುವ ನೈತಿಕತೆಯನ್ನು (ಇದು ಲಿಂಗಾಧಾರಿತ ಭಿನ್ನತೆಯನ್ನು ಕುರಿತ ನೈತಿಕತೆ, ಮೂಲಭೂತವಾದ ಉತ್ಥಾನವನ್ನು ಯಾವುದೇ ಕ್ಷಮೆಯಾಚನೆ ಅಥವಾ ಜ್ಞಾನೋದಯದ ಹೆಸರಿನಲ್ಲಿ ತಿರಸ್ಕರಿಸುವ ನೈತಿಕತೆ) ನಾವು ಗಮನಿಸುವವರಾದರೆ ಆಗ pouvoir- savior ಅಥವಾ ಫೂಕೋನ ತನ್ನ ತಾನು ರಕ್ಷಿಸಿಕೊಳ್ಳುವ ವಿಚಾರ ನಮಗೆ ಪ್ರಬೋಧಕವಾಗಿರುತ್ತದೆ ಮತ್ತು ಈ ಅನ್ಯಮಾರ್ಗಗಳು ಸಾಮಾನ್ಯ ಪರಿಭಾಷೆಯಲ್ಲಿ ನಮ್ಮನ್ನು ಭಾಷಾಂತರಕ್ಕೆ ಕರೆದೊಯ್ಯುತ್ತವೆ.

ಒಟ್ಟರ್ಥದಲ್ಲಿ ಭಾಷಾಂತರ

ಬ್ಯಾರೆಟ್ ಅವರ ಸಂಗಡ ನಡೆಸಿದ ಪ್ರಾಥಮಿಕ ಸಂಭಾಷಣೆಯಲ್ಲಿ ಬೆಳಕಿಗೆ ಬಂದದ್ದಕ್ಕೆ ನಾನು ಎರಡು ಭಾಗಗಳನ್ನು ಸೇರಿಸಲು ಬಯಸುತ್ತೇನೆ. ಇಂಗ್ಲಿಷ್‌ನಲ್ಲಿನ ಸಾಂಸ್ಕೃತಿಕ ಭಾಷಾಂತರ ಕುರಿತು ಮೂರು ಉದಾಹರಣೆಗಳ ಮೂಲಕ ಸಾಮಾನ್ಯ ಪರಿಭಾಷೆಯಲ್ಲಿ ಭಾಷಾಂತರದ ರಾಜಕಾರಣವನ್ನು ಕುರಿತು ಹೇಳುತ್ತೇನೆ. ಸಂಕುಚಿತಾರ್ಥದಲ್ಲಿ ಭಾಷಾಂತರದ ಪಾಠಗಳು ಎನ್ನಿಸಿಕೊಳ್ಳುವವು ಸಹ ಹೆಚ್ಚಿನ ಅರ್ಥಗಳನ್ನು ಹೊಳೆಯಿಸಬಲ್ಲವು.

ಮೊದಲಿಗೆ ಜೆ. ಎಂ. ಕೋಟ್ಜೀಯ ಫೋ.[15] ಸ್ಥಳವಂದಿಗನಿಗೆ ಧ್ವನಿಗೊಡುವ ಪ್ರಭಾವಿಯ ಇಚ್ಛೆಯ ಅನೌಚಿತ್ಯವನ್ನು ಪ್ರತಿನಿಧಿಸುತ್ತದೆ. ರೂಕ್ಷವಾದ ಹದಿನೆಂಟನೆಯ ಶತಮಾನದ ಇಂಗ್ಲಿಷ್ ಹೆಣ್ಣು ಸುಸಾನ್ ಬಾರ್ಟನ್ ಮಾತು ಉದುಗಿದ ಫ್ರೈಡೇಗೆ ಇಂಗ್ಲಿಷ್‌ನಲ್ಲಿ ಓದುವ, ಬರೆಯುವ ಪಾಠ (ರಾಬಿನ್‌ಸನ್ ಕ್ರೂಸೋದಿಂದ) ಹೇಳಲು ಪ್ರಯತ್ನಿಸಿದಾಗ ಅವನು ಅರಿವಿಗೆಟುಕದ ಚಿತ್ರಸಂಕೇತದಂತಹ ಒಂದನ್ನು ಬರೆದು ಅಳಿಸಿಬಿಡುತ್ತಾನೆ, ತೋರಿಸದೆ ಮುಚ್ಚಿಟ್ಟುಕೊಳ್ಳುತ್ತಾನೆ. ಏಕಭಾಷೆಯ ಶ್ರೇಷ್ಠತೆಯ ಪಾತಳಿಯಿಂದ ನೀವು ಭಾಷಾಂತರ ಮಾಡಲಾರಿರಿ. ಕೋಟ್ಜೀ ಬಿಳಿಯ ನಾಲಗೆಯವನು. ಫ್ರೈಡೇಯನ್ನು ಕೊಡದೆ ಮುಚ್ಚಿಟ್ಟುಕೊಳ್ಳುವ ಪ್ರತಿನಿಧಿಯಾಗಿಸಿಕೊಂಡು ರಾಬಿನ್‌ಸನ್ ಕ್ರೂಸೋವನ್ನು ಭಾಷಾಂತರಿಸುತ್ತಾನೆ.

ಎರಡನೆಯದು ಟೋನಿ ಮೋರಿಸನ್‌ರ ಬಿಲವೆಡ್. ಅವಳಲ್ಲಿ ತಾಯಿಯಿಂದ ಮಗಳಿಗೆ ಮಾತೃಭಾಷೆ ಬದಲಾಗುವ ಸನ್ನಿವೇಶವನ್ನು ನೋಡೋಣ. ಖಚಿತವಾಗಿ ಹೇಳಬೇಕೆಂದರೆ ಅದು ಬದಲಾವಣೆಯೇ ಅಲ್ಲ; ಅದೊಂದು ಲುಕ್ಸಾನು. ಏಕೆಂದರೆ ಕಥಾನಕವು ವಲಸೆಯದಲ್ಲ ಗುಲಾಮತನದ್ದು. ಕಾದಂಬರಿಯ ಕೇಂದ್ರ ಪಾತ್ರ ಸಿತೆ ನೆನಪುಮಾಡಿಕೊಳ್ಳುವುದು ವಾಟ್ ನಾನ್ ಳನ್ನು. ಆಕೆ ತನ್ನ ತಾಯಿಯ ಜೊತೆಗಿದ್ದ ಸಹ ಗುಲಾಮಳು ಮತ್ತು ಸ್ನೇಹಿತೆ. ವಾಟ್ ನಾನ್ ಹೇಳಿದಳು. ತಾನು ಹೇಳಿದ ಆ ಭಾಷೆಯ ಸಹಿತ (ಎಲ್ಲವನ್ನೂ) ಮರೆತುಹೋಗಿರುವೆ ಎಂದು. ತನ್ನ ಒಡತಿ ಆಡುವ ಅದೇ ಮಾತು ಮತ್ತು ಎಂದೂ ಮರಳಿಬಾರದ ಮಾತು. ಆದರೆ ಅಲ್ಲಿದ್ದ ಸಂದೇಶ ಅದು ಇತ್ತು ಮತ್ತು ಯಾವಾಗಲೂ ಇರುವುದಾಗಿತ್ತು (ಪು.62). ಈ ಸಂದೇಶ ಸೂಚಿಸುವುದು ವಿಸ್ಮೃತಿಯೆಂಬ ಸಾವಿನ ಮೂಲಕ ಸಿತೆಯ ದೆವ್ವದಂತ ಮಗಳು ಬಿಲವೆಡ್‌ಗೆ ಸಾಗುವುದು ಕೊಡದೆ ಅಡಗಿಸಿ ಮುಚ್ಚಿಟ್ಟುಕೊಳ್ಳುವುದರ ಮೂಲಕ: ಇದು ದಾಟಿಸಬಹುದಾದ ಕಥೆಯಲ್ಲ(ಪು.275).

ತಾಯಿ ಮಗಳ ನಡುವೆ ಚಾರಿತ್ರಿಕವಾದ ಒಂದು ಕೊಡದೆ ಅಡಗಿಸಿ ಮುಚ್ಚಿಟ್ಟುಕೊಳ್ಳುವುದರ ಪ್ರವೇಶವಾಗುತ್ತದೆ. ಹೊಸದಾಗಿ ವಲಸೆ ಬಂದ ತಾಯಿ ಮಗಳ ನಡುವಣ ಸಂದರ್ಭ - ಅದು ಭಾಷಾಂತರದ ಹುಟ್ಟೋ, ಸಾವೋ? ಎನ್ನುವ ಪ್ರಶ್ನೆಯನ್ನು ಹುಟ್ಟುಹಾಕಿದರೆ ಇಲ್ಲಿ ಲೇಖಕ ಹಿಂಸೆಯ ಮೂಲಕ ಕಥೆಯೊಂದರ ಸಾವಿನಲ್ಲಿನ ಹುಟ್ಟನ್ನು, ಹುಟ್ಟಿನಲ್ಲಿನ ಸಾವನ್ನು ಪ್ರತಿನಿಧಿಸುತ್ತಾನೆ. ಆ ಕಥೆ ದಾಟಿಸುವುದಕ್ಕಾಗಲೀ, ಭಾಷಾಂತರಿಸಲಿಕ್ಕಾಗಲೀ ಇರುವುದಲ್ಲ. ಖಚಿತವಾಗಿ ಹೇಳುವುದೆಂದರೆ ಅದೊಂದು ಅಪೋರಿಯ - ಸಂದೇಹ. ಎಲ್ಲಿ ಶುರು ಮಾಡುವುದು, ಏನು ಹೇಳುವುದು ಅಥವಾ ಏನು ಮಾಡುವುದು ಮುಂತಾದ ಸಂದೇಹ - ಆದರೂ ಅದರ ಮೇಲೆ ಭಾಷಾಂತರಿಸಲಾಗದ್ದು ಎನ್ನುವ ಗುರುತನ್ನು ಹಚ್ಚಿಕೊಂಡಿದ್ದರೂ ಸಹ ದಾಟಿಸಲಾದದ್ದು: ನಾವು ಕೈಲಿ ಹಿಡಿದಿರುವ ಆ ಜಿಲವೆಡ್ ಎಂಬ ಹೊಲಿದ ಪುಸ್ತಕದಲ್ಲಿ. ಇದನ್ನು ಶಕ್ತಿಯ ಆವಾಸಗಳಲ್ಲಿರುವ ಪ್ರವೇಶಸಾಧ್ಯತೆಯನ್ನು ಕುರಿತ ಆತ್ಮವಿಶ್ವಾಸದೊಂದಿಗೆ ಹೋಲಿಸಿ ನೋಡಿ. ಅಲ್ಲಿ ಚರಿತ್ರೆ ಮರಳಿ ತನ್ನನ್ನು ಪೂರ್ವಸ್ಥಿತಿಗೆ ತರುವುದನ್ನು ಕಾದುಕುಳಿತಿದೆ.

ತಾಯಿ ಮಗಳ ನಡುವಿನ ಹಿಂಸೆಯ ಆ ಸನ್ನಿವೇಶವು (ಮಗಳು ಸಿತೆ ತನ್ನ ಮಗಳು ಡೆನ್ವರ್‌ಗೆ ಹೇಳಿದ ಮತ್ತು ದಾಟಿಸಿದ ಹಿಂಸೆ. ಮಗಳು ಅಲ್ಲಿ ಬಿಸುಡಲು ಯೋಗ್ಯವಾದ ಬಿಳಿಯ ಹುಡುಗಿಯ ಹೆಸರನ್ನು ಹೊದ್ದುಕೊಂಡಿದ್ದಾಳೆ. ಹೆರುವುದನ್ನು ಕುರಿತಂತೆ ಮಹಿಳಾ ಐಕಮತ್ಯವನ್ನು ಆಂಶಿಕವಾಗಿ ಸೂಚಿಸುತ್ತಿರುವಂತೆ) ಜಿಲವೆಡ್‌ನ (ಅ)ಸಾಧ್ಯತೆಯ ಸಂದರ್ಭ.

ಅವಳು ನನ್ನನ್ನು ಎತ್ತಿಕೊಂಡಳು. ಸ್ಮೋಕ್‌ಹೌಸಿನ ಹಿಂಬದಿಗೆ ಒಯ್ದಳು. ಅಲ್ಲಿ ಅವಳು ತನ್ನ ಮೇಲಿನ ಅಂಗಿಯ ಮುಂದಿನ ಭಾಗವನ್ನು ಬಿಚ್ಚಿ ತನ್ನ ಮೊಲೆಯನ್ನು ಮೇಲೆತ್ತಿ ತೋರಿಸಿದಳು. ಅವಳ ಎದೆಗೂಡಿನ ಎಲುಬಿನ ಚರ್ಮದ ಮೇಲೆ ಸುಟ್ಟು ಒಂದು ವೃತ್ತ ಮತ್ತು ಕ್ರಾಸನ್ನು ಬರೆಯಲಾಗಿತ್ತು. ಅವಳು ಹೇಳಿದಳು: ಇವಳು ನಿನ್ನ ಮ್ಯಾಂ. ಇವಳು. ಮತ್ತೆ ಅವಳು ಅದನ್ನು ತೋರಿಸುತ್ತಾ ಹೇಳಿದಳು, ನಾನೊಂದೆ ಎಸ್ ಮ್ಯಾಂ. ಆದರೆ ನೀವು ನನ್ನ ಹೇಗೆ ಗುರುತು ಹಚ್ಚುತ್ತೀರಿ? ... ನನಗೆ ಗುರುತು ಹಾಕಿರಿ ..... ಮತ್ತೆ ಆಕೆ ಹಾಗೆ ಮಾಡಿದರೇ? ಡೆನ್ವರ್ ಕೇಳಿದಳು. ಆಕೆ ನನ್ನ ಮುಖಕ್ಕೆ ಬಾರಿಸಿದಳು. ಯಾತಕ್ಕೆ? ನನಗೆ ಆಗ ಅದು ಅರ್ಥವಾಗಲಿಲ್ಲ. ನನ್ನದೇ ಗುರುತು ನನಗೆ ಬೀಳುವ ತನಕ.

ಮಾಲಿಕನ ಬ್ರಾಂಡ್ ಅನ್ನು ತನ್ನದೆಂದು ಹೇಳಿಕೊಳ್ಳುವ ಈ ದೃಶ್ಯ ಗುರುತುಗಳ ಮಾಲೀಕತ್ವ ಹೊಂದಿದ ಸ್ವತ್ತಿನ ಏಜೆಂಟರುಗಳಾದ ಅನ್ಯ ಬಿಳಿಯ ಗಂಡಸರು ಹೊಂದಿರುವ ಗುರುತುಗಳ ತುಂಡು ಸರಪಳಿಯಲ್ಲಿ, ಗುಲಾಮರಾದ ಹೆಣ್ಣು ಮಕ್ಕಳ ಮರು ನೆನಪಿನ ಕೂಡು ಸರಪಳಿಯ ಮೂಲಕ, ಈ ಹೆಣ್ಣುಮಕ್ಕಳು ಅಲ್ಲಿ ಪ್ರತಿನಿಧಿಗಳಾಗಿರುವ, ದಾಟಿಸಬಾರದ ಚರಿತ್ರೆಯನ್ನು ಸೃಷ್ಟಿಸಲು ಯತ್ನಿಸುತ್ತದೆ. ಇದು ಅಗತ್ಯಾನುಸಾರಿಯಾಗಿರುವುದು. ಇಲ್ಲಿನ ಅಗತ್ಯವು ತನ್ನ ಭಾಷೆಯನ್ನು ಕೊಡುವ ಮೂಲಕ ಚರಿತ್ರೆಯನ್ನು ಸೃಷ್ಟಿಸಲು ಯತ್ನಿಸುತ್ತಿರುವ ಬಿಳಿಯ ಹೆಂಗಸಿನಿಂದ ಬರೆದದ್ದನ್ನು ಕೊಡದೆ ಮುಚ್ಚಿಡುವ ಫ್ರೈಡೇಯ ದೃಶ್ಯಕ್ಕಿಂತಲೂ ಹೆಚ್ಚು ಹೃದಯಸ್ಪರ್ಶಿ. ಸಾಮಾನ್ಯ ಅರ್ಥದಲ್ಲಿ ಇದರ ಪಾಠ ಭಾಷಾಂತರದಲ್ಲಿ (ಅ)ಸಾಧ್ಯವೆನ್ನುವುದು. ರೆಟರಿಕ್ ಖಡಾಖಂಡಿತವಾದ ಸಂಭವನೀಯತೆಯತ್ತ ಬೊಟ್ಟುಮಾಡುತ್ತದೆ. ಅದು ಕಾಲಾನುಕ್ರಮವಾಗಿ ಇರಬೇಕಿಲ್ಲ. ಋತುಮಾನ ಚಕ್ರಕ್ಕೆ ಅನುಸಾರಿಯಾಗಿಯೂ ಇರಬೇಕಿಲ್ಲ. ಬರಿಯ ನೋವು ನಲಿವುಗಳ

ಅನುಸಾರಿಯಾದರೆ ಆಯಿತು. ಹಾಗೆಯೇ ಎಲ್ಲ ಕುರುಹುಗಳು ಹೋದವು, ಮರೆತುಹೋದದ್ದು ಹೆಜ್ಜೆ ಗುರುತುಗಳಷ್ಟೇ ಅಲ್ಲ, ನೀರೂ. ಮತ್ತೆ ಅಲ್ಲಿ ಅಲ್ಲಿ ಕೆಳಗಿರುವುದು ಕೂಡಾ. ಉಳಿದದ್ದು ನೋವು. ನೆನಪು ಮಾಡಿಕೊಳ್ಳದ, ಲೆಕ್ಕಕ್ಕಿಲ್ಲದವರ ಉಸಿರಲ್ಲ... ಕುರುಹುಗಳನ್ನು ಅಳಿಸಿದ ಬಳಿಕ (ಮಹಿಳಾ)ಚರಿತ್ರೆಯನ್ನು ಪೂರ್ವಸ್ಥಿತಿಗೆ ತರುವ ಯಾವ ಯೋಜನೆಯೂ ಇಲ್ಲ - ಆದರೆ ಸೂರಿನಲ್ಲಿ ಸುಳಿವ ಗಾಳಿ, ಅಥವಾ ಬೇಗ ಕರಗುವ ವಸಂತದ ಬರ್ಫ. ಕೇವಲ ಹವೆ - ನೋವು.

ಸಂಭವನೀಯತೆಯ ಆವಾಹನೆಯನ್ನು ಹೀಗೆ ಮಾಡಿದ ಬಳಿಕ- ಎಲ್ಲಿ ನಿಸರ್ಗ- ಪರಿಸರವು ಬಹಳ ದೊಡ್ಡ ಶರೀರ, ಆದರೆ ಹೆಣ್ಣಿನ ಅವಯವಗಳಿಲ್ಲ ಎಂಬಂತೆ ಆಗಿರಬಹುದೋ ಅಲ್ಲಿ ನಾವು ದಿ ಗಯಾನಾ ಕ್ವಾರ್ಟರ್‌ನ ಕರ್ತೃ ವಿಲ್ಸನ್ ಹ್ಯಾರಿಸ್‌ನ ಜೊತೆ ಸೇರಿಕೊಳ್ಳಬಹುದು. ಅವನಿಗೆ ಮರಗಳು ಭೂಗೋಳದ ಪುಪ್ಪುಸಗಳು. ಹ್ಯಾರಿಸ್ ಸ್ಥಳೀಯ ಕಲ್ಪನೆಯ ಮರುಹುಟ್ಟನ್ನು ಭಾಷಾಂತರ ಎಂದಷ್ಟೇ ಅಲ್ಲ, ಜೀವಿಗಳ ಸಮರ್ಥನಾಂತರ (trans substantiation) ಎಂದು ಶ್ಲಾಘಿಸುತ್ತಾನೆ. ನಾನು ಏನನ್ನು ಸಾಮಾನ್ಯಾರ್ಥದಲ್ಲಿ ಭಾಷಾಂತರಕಾರರ ಜವಾಬ್ದಾರಿ ಎಂದು ಕರೆದೆನೋ - ಭಾಷಾಂತರಕಾರರು ಎರಡೂ ಭಾಷೆಗಳ ರೆಟರಿಕಲ್ ಮೌನಗಳ ನಡುವೆ ಕಣ್ಣುಮುಚ್ಚಾಲೆಯಾಟವನ್ನು ಆಡಲು ಸಮರ್ಥರಾಗಿರಬೇಕು ಎಂದು - ಅದನ್ನೇ ಹ್ಯಾರಿಸ್ ಕ್ಯಾರಿಬ್ (ಕ್ಯಾರೀಬಿಯನ್) ಇಂಗ್ಲಿಷ್‌ನ ಅನುವಾದದ ಅಗತ್ಯವನ್ನು ಕುರಿತಂತೆ ಹೀಗೆ ಮಾತಿನಲ್ಲಿಡುತ್ತಾನೆ:

ಮನುಷ್ಯರ ಮೂಳೆಯಿಂದ ತಯಾರಿಸಿದ ಕ್ಯಾರೀಬಿಯನ್ ಮೂಳೆಕೊಳಲು ಕ್ಯಾರೀಬಿಯನ್ ಆತ್ಮದಲ್ಲಿರುವ ಒಂದು ಚಿತ್ರ. ಅದೊಂದು ಪ್ರಾಚೀನ ತಂತ್ರಜ್ಞಾನ. ಅದನ್ನು ನಾವು ಉತ್ತಮಗೊಳಿಸಬಹುದು (ಅವ್ಯತ್ಯಾಂತರ?). ನಾವು ನಮ್ಮಲ್ಲಿರುವ ಪೂರ್ವಪಕ್ಷಗಳನ್ನು, ಪೂರ್ವಗ್ರಹಗಳನ್ನು ಸುಟ್ಟು ಮುಕ್ತರಾಗಲು ಮೂಳೆಕೊಳಲಿನ ಸಹಾಯ ಪಡೆದುಕೊಳ್ಳಬಹುದು: ಅದನ್ನು ಅನ್ಯ ರೀತಿಯಲ್ಲಿ ಓದುವ ಬದಲಿಗೆ - ಅಲಂಕಾರಿಕವಾಗಿ ಒಂದಿಷ್ಟು ನರಮಾಂಸವನ್ನು ಭಕ್ಷಿಸಿದಂತೆ. ನರಭಕ್ಷಣೆಯೊಂದಿಗೆ ಸಂಗೀತದ ಸಂಸರ್ಗ ಪರಮಾರ್ಶ್ವರ್ಯದ ಮಹೋನ್ನತ ವಿರೋಧಾಭಾಸ. ಮೂಳೆಕೊಳಲಿನ ಸಂಗೀತವು ಯಾವಾಗ ಬಾಗಿಲು ತೆರೆಯುತ್ತದೋ ಆಗ, ಸರ್ವರಾಹಿತ್ಯವು ಒಳಗೆ ಹರಿಯುತ್ತದೆ ಮತ್ತು ಸ್ಥಳೀಯ ಕಲ್ಪನೆಯು ಕ್ವಾಂಟಮ್ ಇಮ್ಮೀಡಿಯಸಿಗೆ ಅಗತ್ಯವಾದ ಊಹಿಸಲಾಗದ ಸಂಪನ್ಮೂಲಗಳನ್ನು ಕಲೆ ಹಾಕಿಕೊಡುತ್ತದೆ.

ಮೂಳೆಕೊಳಲನ್ನು ಕ್ಯಾರೀಬಿಯನ್ ಲೇಖಕರು ಅಲಕ್ಷಿಸಿದ್ದಾರೆ ಎನ್ನುವ ವಿಲ್ಸನ್ ಹ್ಯಾರಿಸ್ ಪ್ರಗತಿಪರ ವಾಸ್ತವತಾವಾದವು - ಪ್ರೋಗ್ರೆಸಿವ್ ರಿಯಲಿಸಂ - ಪ್ರಶಸ್ತಿ ಗೆಲ್ಲುವ ಕಾದಂಬರಿ ಬರೆಯುವ ಆತ್ಯಾಕರ್ಷಕ ಮಾರ್ಗ. ಪ್ರೋಗ್ರೆಸಿವ್ ರಿಯಲಿಸಂ ಮೂಳೆಯನ್ನು ಅಳೆಯುತ್ತದೆ. ಪ್ರೋಗ್ರೆಸಿವ್ ರಿಯಲಿಸಂ ವಸ್ತುವಿನ ವರ್ಗಾವಣೆಯಾಗುವ ಭಾಷಾಂತರ ಕ್ರಿಯೆಗೆ ಬಹಳ ಸಲೀಸಾದ ಪ್ರವೇಶ ಎನ್ನುತ್ತಾನೆ.

ಪಶ್ಚಿಮದ ಪ್ರೋಗ್ರೆಸಿವ್ ರಿಯಲಿಸಂ ಸ್ಥಳೀಯ ಕಲ್ಪನೆಯನ್ನು ಮೂಢಾರಾಧನೆಯೆಂದು, ಅಂಧಶ್ರದ್ಧೆಯೆಂದು ತಿರಸ್ಕರಿಸಿದೆ. ಪ್ರಾಯಶಃ ಈ ತಿರಸ್ಕರಣೆಯನ್ನು ಅತ್ಯಂತ ಶಿಸ್ತುಬದ್ಧಗೊಳಿಸಿದವನು ಹೆಗೆಲ್. ಮನೋವಿಶ್ಲೇಷಕ ಸಾಂಸ್ಕೃತಿಕ ವಿಮರ್ಶೆ ಅದರ ಇಂದಿನ ಅತ್ಯಾಕರ್ಷಕ ಅವತಾರದಲ್ಲಿ ಕೆಲವೊಮ್ಮೆ ಮೂಳೆಯನ್ನು ಅಸ್ವಾಭಾವಿಕ ನಿಷ್ಕೃಷ್ಟತೆಯಿಂದ ಅಳೆದಿದೆ. ಹ್ಯಾರಿಸ್‌ನ

ದೃಷ್ಟಿಗೆ ತದ್ವಿರುದ್ಧವಾದ ಹೆಗೆಲ್‌ನ ದೃಷ್ಟಿಯನ್ನು ಈ ಕೆಳಗಿನ ಉದ್ಧೃತ ಭಾಗ ವಿವರಿಸುತ್ತದೆ. ಇದು ಅನುದ್ದೇಶಿತವೆನ್ನುವಂತಿಲ್ಲ. ಇಲ್ಲಿ ಮಹೋನ್ನತದ ವಿರೋಧಾಭಾಸ ಮತ್ತು ಮೂಳೆ ಜಡತೆ ಎಂದು ನೋಡಲಾದ ಅ-ಭಾಷೆಯ ಕಡೆಗೆ ನಮ್ಮನ್ನು ಕರೆದೊಯ್ಯುತ್ತದೆ. ಅಲ್ಲಿ ಉದ್ಧೃತ ಭಾಗದ ಆಕೃತಿ ಬರಿಯ ತರ್ಕ ಮಾತ್ರ. ಪರಮೋಚ್ಚ ಭಾಷೆಯ ಅಧಿಕಾರ ಅದನ್ನು ಭಾಷಾಂತರಗೊಳಿಸಲು ಅಸಾಧ್ಯವಾದದ್ದನ್ನಾಗಿ ಮಾಡಿಬಿಡುತ್ತದೆ.

ಆದ್ದರಿಂದಲೇ ಮಹೋನ್ನತವು ವಸ್ತುವೊಂದರ ವಿರೋಧಾಭಾಸ. ಅದು ತನ್ನ ಪ್ರತಿನಿಧಿತ್ವದ ವಲಯದೊಳಗೆ ಯಾವುದನ್ನು ಪ್ರಸ್ತುತಗೊಳಿಸಲು ಅಸಾಧ್ಯವೋ ಅದರ ಒಂದು ದೃಷ್ಟಿಯನ್ನು ಒದಗಿಸುತ್ತದೆ. ಅದು ನೇತ್ಯಾತ್ಮಕ ದೃಷ್ಟಿ. ಹಾಗಾಗಿ ಮೂಳೆ, ತಲೆಬುರುಡೆ - ಇವು ವಸ್ತುಗಳು. ಅವು ತಾವು ಇರುವ ಕಾರಣಕ್ಕೆ ಖಾಲಿಯನ್ನು ತುಂಬುತ್ತವೆ; ಅದರಿಂದ ವಸ್ತುವಿನ ಪ್ರತಿನಿಧಿತ್ವವನ್ನು ಸೂಚಿಸುವುದು ಅಸಾಧ್ಯವಾದದ್ದು. ಸಂಪತ್ತು ಎಂಬುದು ಆತ್ಮ ಎಂಬ ಸೂಚನೆಯು, ಈ ಸ್ತರದಲ್ಲಿ, ಚೇತನವು ಮೂಳೆ ಎಂಬ ಸೂಚನೆಯನ್ನು ಪುನರುಚ್ಚರಿಸುತ್ತದೆ (ಎರಡೂ ಹೆಗೆಲ್‌ನ ಸೂಚನೆಗಳೇ). ಎರಡೂ ಸಂದರ್ಭಗಳಲ್ಲಿ ನಾವು ಒಂದು ಸೂಚನೆಯನ್ನು ವ್ಯವಹರಿಸುತ್ತಿರುತ್ತೇವೆ. ಅದು ಮೊದಲ ನೋಟಕ್ಕೇ ಅಸಂಗತ ಮತ್ತು ಅಸಂಬದ್ಧ, ಅಲ್ಲದೆ ಸಮಾನವೆಂದು ಭಾವಿಸಲು ಚೂರೂ ಹೊಂದಾಣಿಕೆಯಿರದ ಸೂಚನೆ. ಎರಡೂ ಸಂದರ್ಭಗಳಲ್ಲಿ ನಾವು ಎದುರುಗೊಳ್ಳುವುದು ಅದೇ ತಾರ್ಕಿಕ ಆಕೃತಿಯ ಪಠ್ಯಭಾಗವನ್ನು. ಇಲ್ಲಿ ವಸ್ತುವು ಭಾಷೆಯ ಮಾಧ್ಯಮದಲ್ಲಿ ಸಂಪೂರ್ಣ ಲುಪ್ತವಾಗಿಹೋಗಿದೆ. ಈ ಭಾಷೆ ಆಂಗಿಕಾಭಿನಯದ, ಸೋಗಿನ ಮುಖಭಾವದ, ಹೊಗಳುಭಟ್ಟಂಗಿತನದ ಭಾಷೆ. ಲುಪ್ತವಾದ ಭಾಷೆ ತನ್ನ ಜ್ಞೇಯಾರ್ಥವನ್ನು ಅ-ಭಾಷಾ ವಸ್ತುವಿನ ಜಡತೆಯಲ್ಲಿ ಕಂಡುಕೊಳ್ಳುವುದು (ಬುರುಡೆ, ಹಣ).

ಮೋರಿಸನ್‌ರ ಪೆದರ್ -ನೋವು - ಅನ್ನು ಭಾಷಾಂತರಿಸುವಲ್ಲಿ ವಿಲ್ಸನ್ ಹ್ಯಾರಿಸ್‌ನ ದೃಷ್ಟಿ ಅಮೂರ್ತವಾದದ್ದು. ಅದು ಕ್ವಾಂಟಂ ಫಿಸಿಕ್ಸ್‌ನ ಸಾಗರೋಪಮ ಆವೃತ್ತಿಯನ್ನು ತಯಾರು ಮಾಡಿದಂತೆ. ಆದರೆ ಈ ಭಾಗದಲ್ಲಿ ಉಲ್ಲೇಖಿಸಿದ ಮೂರೂ ಸಾಂಸ್ಕೃತಿಕ ಭಾಷಾಂತರಗಳು - ಕ್ರಿಯೋಲ್, ಗುಲಾಮಳ ಮಗಳು, ಕ್ಯಾರಿಬ್‌ನ ಇಂಗ್ಲಿಷ್ ಬಳಕೆ - ಇಂಥಲ್ಲಿನ ಭಾಷಾಂತರದ ಮಿತಿಗಳತ್ತ ಗಮನ ಸೆಳೆಯುವ ರೆಟರಿಕ್ ಅನ್ನು ಗಮನಿಸುವಂತೆ ನಿರ್ದೇಶಿಸುತ್ತವೆ. ನಾವು ಭಾಷಾಂತರದ ಪಾಠಗಳನ್ನು ಈ ಪ್ರಖರ ಸಾಮರ್ಥ್ಯದ ಒಳಗಿನ - ಹೊರಗಿನ ಭಾಷಾಂತರಕಾರರಿಂದ ಕಲಿತುಕೊಳ್ಳೋಣ ಮತ್ತು ಅದನ್ನು ಇತರ ಭಾಷೆಗಳ ಸಂದರ್ಭಗಳಿಗೆ ಕ್ರಿಯಾ(ಭಾಷಾ)ಂತರಿಸಿ ಕೊಳ್ಳೋಣ.

ಓದುವಿಕೆ-ಭಾಷಾಂತರದಂತೆ

ಕೊನೆಯಲ್ಲಿ ವಸಾಹತೋತ್ತರ ಒಳ-ಹೊರಗಿನ ಓದುಗಳು ತಾನು ಕೃತಿಯನ್ನು ಓದುತ್ತಿರುವಂತೆಯೇ ಹೇಗೆ ಶ್ವೇತಸಿದ್ಧಾಂತವನ್ನು ಭಾಷಾಂತರಿಸಿಕೊಳ್ಳುತ್ತಿರುತ್ತಾಳೆ ಎನ್ನುವುದನ್ನು ತೋರಿಸಲು ಇಚ್ಛಿಸುತ್ತೇನೆ. ಅದರಿಂದ ಆಕೆಗೆ ಮೂಲದ ಕಣವನ್ನು ತರತಮ ದೃಷ್ಟಿಯಿಂದ ಗ್ರಹಿಸಲು ಅನುಕೂಲವಾಗುತ್ತದೆ. ಆಕೆ ಯಾವುದು ಪ್ರಯೋಜನಕಾರಿಯೋ ಅದನ್ನು ಬಳಸಲು ಬಯಸುತ್ತಿರುತ್ತಾಳೆ. ಇದು ಭಾಷಾಂತರಕಾರ್ತಿಗೆ ಪಾಠವನ್ನು ದಾಟಿಸುತ್ತಿರುತ್ತದೆ ಎಂದು ನಾನು

ಅದರ ಸಂಕುಚಿತಾರ್ಥದಲ್ಲಿ ಭಾವಿಸುತ್ತೇನೆ,

ನರಭಕ್ಷಣೆಯೊಂದಿಗೆ ಸಂಗೀತದ ಸಂಸರ್ಗ ಪರಮಾಶ್ಚರ್ಯದ ಮಹೋನ್ನತ ವಿರೋಧಾಭಾಸ. ನನಗೆ ಅನ್ನಿಸುವುದು ವಿಲ್ಸನ್ ಹ್ಯಾರಿಸ್ ಇಲ್ಲಿ ಮಹೋನ್ನತ ಎನ್ನುವುದನ್ನು ಒಂದಷ್ಟು ನಿಖರತೆಯಿಂದಲೇ ಬಳಸುತ್ತಿದ್ದಾನೆ ಮತ್ತು ಆ ಮೂಲಕ ಅವನು ಪುರೋಗಾಮಿ ಪಾಶ್ಚಿಮಾತ್ಯ ಪ್ರಜೆಯು ವಾಸ್ತವವಾದಿ ಚರಿತ್ರೆಯ ವಿಶ್ಲೇಷಕ ಎನ್ನುವದನ್ನು ನಿರ್ಲಕ್ಷಗೊಳಿಸುತ್ತಿದ್ದಾನೆ; ಅಲ್ಲಗಳೆಯುತ್ತಿದ್ದಾನೆ ಎನ್ನುವುದರಿಂದ. ಮೂಳೆಕೊಳಲಿಂದ ದೂರಸರಿದ, ಸೈದ್ಧಾಂತಿಕವಾದ ಸೌಂದರ್ಯಾತ್ಮಕ ಮಹೋನ್ನತದ (ಎಸ್ತೆಟಿಕಲಿ ಸಬ್ಲೈಮ್ ಆಗಿರುವುದರ) ಇಂಗ್ಲಿಷ್ ವ್ಯಾಖ್ಯಾನದಿಂದ ಏನಾದರೂ ಪ್ರಯೋಜನವುಂಟೆ? ಇದಕ್ಕೆ ಉತ್ತರದ ರೂಪದಲ್ಲಿ ನಾನು ಪೀಟರ್ ದ ಬೊಲ್ಲ ಅವರ ದಿ ಡಿಸ್ಕೋರ್ಸ್ ಆಫ್ ದಿ ಸಬ್‌ಲೈಮ್ ಎಂಬ ಉತ್ಕೃಷ್ಟ, ಪಾಂಡಿತ್ಯಪೂರ್ಣ ನಿರೂಪಣೆಯ ಓದನ್ನು ಭಾಷಾಂತರದ ಸಹಾನುಭೂತಿಯ ಓದಿನ ಉದಾಹರಣೆಯಾಗಿ ಬಳಸಿಕೊಳ್ಳುತ್ತೇನೆ. ಇದು ಶರಣಾಗತಿಯಲ್ಲ, ಒಂದಷ್ಟು ದೂರ ಉಳಿದೇ ನಡೆಸುವ ಸ್ನೇಹಪೂರ್ಣ ಕಲಿಕೆ.[21]

ಪು.4. ಹದಿನೆಂಟನೇ ಶತಮಾನದಲ್ಲಿ ಸಬ್ಜೆಕ್ಟ್ - ಪ್ರಜೆಯಾಗಿರುವುದು ಎಂದರೆ ಏನು? ಭಾಷಾಂತರಕಾರನಾಗಿ ಓದುಗ ಎನ್ನುವುದು ಉದ್ದೀಪನಗೊಳಿಸಲ್ಪಟ್ಟಿದೆ. ಬ್ರಿಟನ್‌ನ ಸುದೀರ್ಘ ಹದಿನೆಂಟನೇ ಶತಮಾನದ ಸಂವಿಧಾನದ ಮತ್ತು ರಾಷ್ಟ್ರವೊಂದು ಚಕ್ರಾಧಿಪತ್ಯವಾಗಿ ರೂಪಾಂತರಗೊಂಡದ್ದರ ಚಿತ್ರಣ. ಆ ಕಥೆಯನ್ನು ಓದೋಣವೇ? ಕೃತಿ ಅದರ ಬಗ್ಗೆ ಕೊಂಚವೇ ಹೇಳುತ್ತದೆ, ಅದೂ ಹೊರಳಲು ಮಾತ್ರ. ಮತ್ತು ಮಹಿಳೆಯರನ್ನು ತಮ್ಮ ಪ್ರತಿನಿಧಿತ್ವದ ನಿರ್ಮಾಣದಲ್ಲಿ ಆ ಬದಲಾವಣೆಯ ಪರಿಣಾಮ ತಾಕಿದವರೆಂಬ ದೃಷ್ಟಿಯಿಂದ ನೋಡಲಾಗುವುದಿಲ್ಲ. ಈ ಕೃತಿಯ ಪ್ರಬಲ ಫೆಮಿನಿಸ್ಟ್ ಸಹಾನುಭೂತಿಗಳು ಹೇಗಿವೆ ಎಂದರೆ ಇಂಗ್ಲಿಷ್ ಮಹಿಳೆಯನ್ನು ಮಾತ್ರ ಲಿಂಗಭೇದದ ಬಲಿಪಶು ಎಂದು ಪರಿಗಣಿಸಲಾಗಿದೆ. ಆದರೆ ಪಠ್ಯದ ಪ್ರೌಢಿಮೆ ನಮಗೆ ಈ ಬಗೆಯ ರೆಟರಿಕಲ್ ಓದು ಇಪ್ಪತ್ತನೆಯ ಶತಮಾನದಲ್ಲಿ ಇಂಗ್ಲಿಷ್‌ನ ವಸಾಹತೋತ್ತರ ಓದುಗನಾಗಿರುವುದು ಎಂದರೆ ಏನು ಎಂಬ ಪ್ರಶ್ನೆಯನ್ನು ಕೇಳಲು ಅವಕಾಶ ಮಾಡಿಕೊಡುವುದೆಂದು ಯೋಚಿಸಲು ನೆರವಾಗುತ್ತದೆ. ದಿ ಡಿಸ್ಕೋರ್ಸ್ ಆಫ್ ದಿ ಸಬ್ಲೈಮ್ ಕೃತಿಯ ಪ್ರಾತಿನಿಧಿಕ ಓದುಗ ವಸಾಹತೋತ್ತರನಾಗಿರುತ್ತಾನೆ. ಇಲ್ಲಿ ಪಾಲಿಸಿರುವುದು ಬಹುಸಂಖ್ಯಾತರ ಕಾನೂನೋ ಇಲ್ಲವೇ ಬಲಶಾಲಿಗಳ ಕಾನೂನೋ?

ಪು.72. ಭಾಷಾಂತರಕಾರನಾಗಿ ಓದುಗ ಮಹೋನ್ನತ ಎನ್ನುವುದನ್ನು ಕುರಿತು ಬರ್ಕ್ ಮಾಡಿದ ಚರ್ಚೆಗೆ ಬರುತ್ತಾರೆ.

ಬರ್ಕ್‌ನ ಪಠ್ಯದಲ್ಲಿನ ಆಂತರಿಕ ವಿರೋಧವು... ಈ ರೂಪಕಾಲಂಕಾರದ ಪೂರ್ಣ ಅಭಿನಯಕ್ಕೆ ಅಡ್ಡಿ ಉಂಟುಮಾಡುತ್ತದೆ. ಶಕ್ತಿ... ಮಹೋನ್ನತದ ತಾಂತ್ರಿಕಾಂಶಗಳನ್ನು ವಿಶದಪಡಿಸುವಲ್ಲಿ ರೂಪಕಾಲಂಕಾರದಂತೆ, ಆ ಮೂಲಕ ಮಹೋನ್ನತ ಅನುಭವದ ಒಂದು ವಿವರಣೆಯನ್ನು ಅಪೂರ್ವವಾಗಿ ಸೋಲಿಸುತ್ತದೆ- ಸಬಲೀಕೃತ ವ್ಯಕ್ತಿ ಎಂಬ ಸಂಬಂಧದಲ್ಲಿ. ಬರ್ಕ್, ಹಲವಾರು ಕಾರಣಗಳಿಗಾಗಿ- ಅವುಗಳಲ್ಲಿ ನಾವು ಸಂಕ್ಷೇಪವಾಗಿ ಹೇಳುವುದೆಂದರೆ, ಬರ್ಕ್, ಹಲವಾರು ಕಾರಣಗಳಿಗಾಗಿ- ಅವುಗಳಲ್ಲಿ ನಾವು ಸಂಕ್ಷೇಪವಾಗಿ ಹೇಳುವುದೆಂದರೆ, ರಾಜಕೀಯ ಆಕಾಂಕ್ಷೆಗಳು ಮತ್ತು ಪರಿಣಾಮಗಳನ್ನೂ ಸೇರಿಸಬಹುದು- ಮಹೋನ್ನತ

ಎನ್ನುವುದರ ವಿವರಣೆಗೆ ತೊಡಗುವುದಕ್ಕಿಂತ ಕೊಂಚ ಮೊದಲೇ ನಿಂತುಬಿಡುತ್ತಾನೆ. ಹಾಗೆ ಮಾಡುವುದರ ಮೂಲಕ ಅವನು ಇದರ ಮಗ್ಗುಲಲ್ಲಿ ನಡೆಯುತ್ತಿರುವ ಚರ್ಚೆ - ಭಗವಂತನ ಎಲ್ಲೆಗಳ ಒಳಗೆ ತನ್ನ ಸ್ವಯಮಾಧಿಕಾರದಿಂದ ತನ್ನ ತಾನು ನೆಲೆಗೊಳಿಸಿಕೊಳ್ಳುವ ಧರ್ಮಶಾಸ್ತ್ರದ ಅತ್ಯಂತಿಕ ಶಕ್ತಿ - ಯನ್ನು ಪುನರ್‌ಪ್ರತಿಷ್ಠಾಪಿಸುತ್ತಾನೆ.

ಬರ್ಕ್ ಇಂಗ್ಲಿಷ್ ದೊರೆಯ ಮಾನಸಿಕ ರಂಗದ ಗುಪ್ತ ಸ್ಥಳಗಳನ್ನು ವಸಾಹತುಗಳಲ್ಲಿ ಹುಡುಕುವಲ್ಲಿ ಗಂಭೀರವಾಗಿ ತೊಡಗಿಕೊಂಡಿದ್ದ. ವಸಾಹತುಗಳ ಬಗ್ಗೆ ಅವನಿಗಿದ್ದ ಕಲ್ಪನೆಗಳು ಬೇರೆ ಬೇರೆ ಬಗೆಯವು. ಅದ್ದರಿಂದ ಕಾನ್ಸಾಡನ ಎದುರು - ಮಹೋನ್ನತವಾದದ್ದೂ, ಅಧಿಕಾರವನ್ನು ಹೊಂದಿದ್ದೂ ಆದದ್ದರ ಎದುರು - ಭೀತಿ ತುಂಬಿ ಕುಳಿತಿದ್ದ ಒಬ್ಬಾನೊಬ್ಬ ಕಟ್ಟ್ನನಂತೆ ಅವನಿದ್ದ. ಅದರಿಂದಲೇ? ಅಥವಾ ಚೀನೀ ಹೆಂಗಸಿನ ಎದುರು ಕುಳಿತ ಒಬ್ಬಾನೊಬ್ಬಳು ಕಿಸ್ಟೀವಾಳಂತೆಯೇ? ಬರ್ಕ್ ಅವಧ್‌ನ ಬೇಗಂಗಳನ್ನು ಕಾನೂನಿನ ಅನ್ಯಯ ಪ್ರಜೆಗಳು ಎಂದು, ಅವರನ್ನು ಬೇರೆ ಎಲ್ಲೋ ಒಂದು ಕಡೆ ತಾನು ಸ್ವಯಂ ಅಧಿಕೃತಗೊಳಿಸಿರುವ ಎಂದು ಭಾವಿಸಲು ಪ್ರಯತ್ನಿಸಿದ್ದ. ಅದರಿಂದಲೋ? ದಿ ಡಿಸ್ಕೋರ್ಸ್ ಆಫ್ ದಿ ಸಬ್ಲೈಮ್ ಕೃತಿಯು ಮಹೋನ್ನತವಾದದು -ಸಬ್ಲೈಮ್- ಎನ್ನುವುದರ ಬಗ್ಗೆ ಬರೆದ ಇನ್ನಿತರೆ ಸಂಕಥನಗಾರರಿಗೂ ಬರ್ಕನಿಗೂ ಇದ್ದ ಭಿನ್ನತೆಯನ್ನು ಗಮನಿಸಿದೆ: ಅದು ಇತರೆ ಭಾಷಾಂತರಕಾರನಾಗಿ ಓದುಗ ವರ್ಗಕ್ಕೆ ಸೇರಿದವರಿಗೆ ಇಂತಹ ಪಾಂಡಿತ್ಯಪೂರ್ಣ ಚಿಂತನೆಗಳಲ್ಲಿ ತೊಡಗಿಕೊಳ್ಳಲು ಮತ್ತು ಆ ಪುಸ್ತಕವನ್ನು ಮೀರಬೇಕು ಮತ್ತು ಪುಸ್ತಕದ ಹರಹನ್ನು ವಿಸ್ತರಿಸಬೇಕು ಎಂದು.

ಭಾಷಾಂತರಕಾರನಾಗಿ ಓದುಗ ಬರುವುದು ಇಂಗ್ಲಿಷ್ ನ್ಯಾಷನಲ್ ಡೆಟ್‌ಗೆ. ಬ್ರಿಟಿಷ್ ವಸಾಹತುಶಾಹಿ ರಾಷ್ಟ್ರ ಮತ್ತು ಸಾಮ್ರಾಜ್ಯಗಳ ನಡುವೆಯ ಕೂಡುಗೆರೆಯನ್ನು ಹಿಂಸಾತ್ಮಕವಾಗಿ ಕಿತ್ತ ನಿರಚನೆ ಅದು.[33] ಸಾಮ್ರಾಜ್ಯಶಾಹಿಯಲ್ಲಿ ರಾಷ್ಟ್ರ ಸಾಮ್ರಾಜ್ಯವಾಗಿ ಉದಾತ್ತೀಕರಣಗೊಂಡಿದ್ದು ಹಾಗೂ ನಿರಾಕೃತವಾಗಿದ್ದು (ಈ ಪದ ಇಂಗ್ಲಿಷ್‌ನಲ್ಲಿ ಹೀಗೆ ಬರೆದಿದೆ (subl(im)ate) ಸಬ್ಲೇಟ್ ಎಂಬ ಪದವನ್ನು ಹೀಗೆ ವಿವರಿಸಲಾಗಿದೆ: ನಿರಾಕರಿಸು, ಕಸಿದುಕೋ. ನಿರಾಕರಣ, ಭಾಷಿಕ ಪ್ರಕ್ರಿಯೆಯಲ್ಲಿನ ಒಂದು ವಸ್ತುವಂತೆ ನಿವಾರಿಸಿಕೊಳ್ಳುವುದು, ಆದರೂ ಸಂಶ್ಲೇಷಣೆಯ ಒಂದು ಅಂಶವಂತೆ ಉಳಿಸಿಕೊಳ್ಳುವುದು. negate, deny. 2. : to negate or eliminate (as an element in a dialectic process) but preserve as a partial element in a synthesis.) — ಇದರ ಬಗ್ಗೆ ದಿ ಡಿಸ್ಕೋರ್ಸ್‌ನಲ್ಲಿ ಯಾವುದೇ ಕುರುಹು - ಪ್ರಸ್ತಾಪವಿಲ್ಲ. ದಿ ಬ್ಯಾಂಕ್ ಆಫ್ ಇಂಗ್ಲೆಂಡ್ ಬಗ್ಗೆ ಚರ್ಚಿಸಲಾಗಿದೆ. 1696ರಲ್ಲಿ ಅದರ ಸ್ಥಾಪನೆ, ಇಂದಿನ ಚೆಕ್‌ಗಳ ವಂಶದಲ್ಲಿ ಹಿರಿಯರ ರೂಪಕ್ಕೆ ಲೆಟರ್ ಆಫ್ ಕ್ರೆಡಿಟ್‌ನ ರೂಪಾಂತರ, ಈಸ್ಟ್ ಇಂಡಿಯಾ ಕಂಪೆನಿಯ ಅಪಾರ ಸಂಪತ್ತಿಗೂ, 1690ರಲ್ಲಿ ಕಲ್ಕತ್ತಾವನ್ನು ಕಟ್ಟುವುದಕ್ಕೂ ನಡುವೆ ಯಾವುದೋ ಒಂದು ಬಗೆಯ ಸಂಬಂಧ ಏರ್ಪಡುತ್ತದೆ. ನ್ಯಾಷನಲ್ ಡೆಟ್ - ರಾಷ್ಟ್ರೀಯ ಸಾಲ - ಎನ್ನುವುದು ವಾಸ್ತವವಾಗಿ ಚಿಕ್ಕಟ್ಟನ್ನು ನಿರ್ವಹಿಸಲು ಇರುವ ಅವಕಾಶ. ಅಲ್ಲಿ ಸಬ್ಲೈಮ್ - ಮಹೋನ್ನತವಾದ ವಸ್ತುವನ್ನು ಅತ್ಯಾಕರ್ಷಕ ಆದರ್ಶದ ಹಾಗೆ ಮಾಡುವ ರಾಷ್ಟ್ರವು ಸಾಲ ಕೊಟ್ಟವನು ಎಂಬ ಚಿಹ್ನೆಯನ್ನು ಅಪಪ್ರಯೋಗ ಮಾಡಿ ಅಥವಾ ಅದು ಚಲಾವಣೆಯಲ್ಲಿರುವ ಹಣಕ್ಕೂ, ಸಾಲಕ್ಕೂ ನಡುವೆ ಇರುವ ಶಾಶ್ವತ ವ್ಯತ್ಯಾಸವೆಂದು ಕರೆಯುವುದರ ಮೂಲಕ ಸುಳ್ಳು ರೂಪಕವನ್ನಾಗಿಸುತ್ತದೆ.

ಫ್ರೆಂಚ್ ಯುದ್ಧ ನಿಜವಾಗಲೂ ಅದು ಆ ಕ್ಷಣದ ಸಮರ್ಥನವಾದ ಕಾರಣ. ಅದನ್ನು ವಿಸ್ತಾರವಾದ ಬಿಕ್ಕಟ್ಟಿನ ಭಾಗವನ್ನಾಗಿ ಹೊಸೆಯಲಾಯಿತು. ದಿ ಡಿಸ್ಕೋರ್ಸ್‌ಗೆ ರಾಷ್ಟ್ರವು ವಸಾಹತುಶಾಹಿ ಆರ್ಥಿಕತೆಯನ್ನು ರಕ್ಷಿಸುವುದನ್ನು ಕಾಣಲಾಗುವುದಿಲ್ಲ. ಜೆಂಡರಿಂಗ್‌ನ ಜನಾಂಗ ನಿರ್ದಿಷ್ಟತೆಯ ಸಂದರ್ಭದಲ್ಲಿ ಹೇಗೋ ಬಹುರಾಷ್ಟ್ರೀಯ ಬಂಡವಾಳದ ಮಟ್ಟಿಗೂ ಹಾಗೆಯೇ ವಾದವನ್ನು ಕೌಟುಂಬಿಕವಾಗಿ, ಇಂಗ್ಲೆಂಡಿನ ಒಳಗೇ, ಯೂರೋಪಿಯನ್ ಆಗಿ ಇರಿಸಿಕೊಳ್ಳಲಾಗಿದೆ. ಭಾಷಾಂತರಕಾರಳಾಗಿ ಓದುಗಳು ಎನ್ನುವುದು ಅಸಮಾನತೆಯಲ್ಲಿ ಕಟ್ಟಿದ ಮೂಗಿನಲ್ಲಿ ರಭಸವಾಗಿ ಉಸಿರೆಳೆದುಕೊಳ್ಳುತ್ತಿದೆ. ಆಕೆ ಕಳೆದುಕೊಂಡ ಒಪ್ಪಿತ ಸ್ಥಿತಿಗೆ (ಲಿಟರಾಲಿಟಿಗೆ) ಮರಳಲು ಕಂಡ ರೂಪಗೆಡಿಸುವ ಸಾಧನ ಎಂಬ ಇಂಗ್ಲಿಷ್ ದೇಹದ ಚರಿತ್ರೆಯನ್ನು ಗಮನಿಸುವ ಬದಲು ಮಹಾಶ್ವೇತಾಳ ಸ್ತ್ರೀ ದೇಹದ ರೋಷದ ಆಕೃತಿಯೆ ದೇಹವೆಂಬ ವಿವರಣೆಯಲ್ಲಿ ನೆಮ್ಮದಿಯನ್ನು ಕಂಡುಕೊಳ್ಳುತ್ತಿದ್ದಾಳೆ. ಭಾಷಾಂತರದಲ್ಲಿ ಓದುವುದು ಇಲ್ಲಿ ಹುಸಿಯಾಗಿಹೋಗಿದೆ.

ಭಾಷಾಂತರಕಾರನಾಗಿ ಓದುಗ ಬರುವುದು ಹಿರಿಯ ಪಿಟ್‌ಗೆ. ಪ್ರಾರಂಭಕ್ಕೆ ಅವನ ಸೀಮಿತ ಕಾರ್ಯಕ್ಕೊದಗುವ ವಿಚಾರವನ್ನು ರಾಷ್ಟ್ರವನ್ನು ಒಳಗೊಂಡಿದ್ದರಿಂದ ಒತ್ತಾಯಿಸಲಾಗಿದ್ದು ಎಂದು ನೋಡಿದ್ದರೂ ಪಿಟ್‌ನ ಧ್ವನಿಯ ಬಗ್ಗೆ ಮಾತಾಡುವಾಗ ಅವನ ಸಾಮ್ರಾಜ್ಯದ ವಿಚಾರದ ಬಗ್ಗೆ ಪ್ರಸ್ತಾಪಿಸದೆ ಇರಲು ಸಾಧ್ಯವಿಲ್ಲ.

ಪಿಟ್‌ನ ಮಾತು ಕಾಲಘಟ್ಟದ ಚೇತನ ಮತ್ತು ಗುಣಗಳ ಒಳಕ್ಕೆ ಪ್ರವೇಶಿಸಿ ಎರಡರಲ್ಲೂ ಮಧ್ಯಪ್ರವೇಶ ಮಾಡುತ್ತದೆ: ಏಕಕಾಲದಲ್ಲಿ ರಾಷ್ಟ್ರದ ಸೇವೆಯಲ್ಲಿರುವ ಖಾಸಗಿ ವ್ಯಕ್ತಿ ಮತ್ತು ಸಾರ್ವಜನಿಕರ, ರಾಷ್ಟ್ರೀಯತೆಯ, ವಾಣಿಜ್ಯ ಸಾಮ್ರಾಜ್ಯದ ಅಗತ್ಯಗಳಿಂದ ನಾಶವಾದ ಖಾಸಗಿ ವ್ಯಕ್ತಿ - ಇವುಗಳ ಪರಮೋಚ್ಚ ಉದಾಹರಣೆ. ಈ ದೃಷ್ಟಿಯಲ್ಲಿ ದೇಹವನ್ನು ಪಠ್ಯಂತರಗೊಳಿಸುವ (textualize) ಪಿಟ್‌ನ ಧ್ವನಿ ಶತಮಾನದ ಉಳಿದ ಕಾಲದುದ್ದಕ್ಕೂ ಅತ್ಯುತ್ತಮ ಉದಾಹರಣೆಯಾಗಿ ನಿಂತಿತು.

ಬಿಲವೆಡ್‌ನಲ್ಲಿ ನಾವು ಗುಲಾಮಿ ತಾಯಿ ಮತ್ತು ಗುಲಾಮಿ ಮಗಳ ನಡುವೆ ಹೊರಮೈ ಪಠ್ಯಂತರಗೊಳ್ಳುವುದರ ಅಕ್ಷರರೂಪಿ ವರ್ಣನೆಯನ್ನು ನೋಡಿದ್ದೇವೆ. ಅಲ್ಲಿ ತಾಯಿ ಮಗಳನ್ನು ಅವಳು ಆ ಪಠ್ಯದ ಚಿಹ್ನೆಗಳನ್ನು ದಾಟಿಸಲು ಸಾಧ್ಯ ಎಂದು ಯೋಚಿಸುವುದನ್ನು ತಡೆಯಲು ಹೊಡೆಯುತ್ತಾಳೆ. ಅಕ್ಷರಶಃ, ಮಗಳ ಸ್ವಂತ ಬ್ರ್ಯಾಂಡಿಂಗ್‌ನ ಹೊಡೆತದ ಬಳಿಕ ಮಾಡಿದ ಮರುಯೋಚನೆ (ಆಫ್ಟರ್‌ಥಾಟ್). ಭಾಷಾಂತರಕಾರಳಾಗಿ ಓದುಗಳು ದೇಹದ ಒಳಗಿನದರ ಪಠ್ಯಂತರವನ್ನು ಪ್ರಜ್ಞೆಯ ಲಕ್ಷಣವಾಚಿಯಾದ ಧ್ವನಿಯ ಮೂಲಕ ಒಡೆಯ ತಂದೆಯಿಂದ ಒಡೆಯ ಮಗನಿಗೆ ದಾಟಿಸುವುದರ ವೃತ್ತಾಂತವನ್ನು ನಿರೀಕ್ಷಿಸಬೇಕೇ? ಯುವಕ ಪಿಟ್ 1784ರ ಇಂಡಿಯಾ ಆಕ್ಟ್‌ನ ಮೂಲಕ ರಾಷ್ಟ್ರೀಯತೆಯ ಸಾಮ್ರಾಜ್ಯವನ್ನು ಸಾರ್ವಭೌಮ ರಾಷ್ಟ್ರವನ್ನಾಗಿ ಬದಲಿಸಲು ಮೊದಲ ಹೆಜ್ಜೆಯನ್ನಿಟ್ಟ. ದಿ ಡಿಸ್ಕೋರ್ಸ್ ಆಫ್ ದಿ ಸಬ್ಲೈಮ್ ಆ ಮಹೋನ್ನತವನ್ನು ದಾಟಿಸುವುದರ ಹಂಚಿಕೆಯಾಗಿತ್ತೇ?

ಊಹೆಗೆ ನಿಲುಕುವಂತೆ ಭಾಷಾಂತರಕಾರಳಾಗಿ ಓದುಗಳು ದಿ ಡಿಸ್ಕೋರ್ಸ್‌ನ ರೆಟರಿಸಿಟಿಯಲ್ಲಿ ನೆಲೆ ಕಂಡುಕೊಳ್ಳುತ್ತಾಳೆ. ಹತ್ತನೇ ಅಧ್ಯಾಯ ಪ್ರಾರಂಭಗೊಳ್ಳುವುದು

ಹೀಗೆ: ಸಿದ್ಧಾಂತವು ಹೇಗೆ ಕಾನೂನಾಗಿ ರೂಪುಗೊಂಡು ಪದ್ಧತಿಯೊಂದನ್ನು ನಿಯಂತ್ರಿಸಲು ಹೊರಡುತ್ತದೆ, ಹೇಗೆ ಅದು ತಾನು ನಿಯಂತ್ರಿಸಲಾಗದ ಅತಿಗಳನ್ನು ಹುಟ್ಟುಹಾಕುತ್ತದೆ, ಕೇಂದ್ರದಿಂದ ಗಡಿಗೆ ತನ್ನ ಮಿತಿಯನ್ನು, ಮಿತಿಗೊಳಿಸುವ ವಿದ್ಯಮಾನವನ್ನು ದೂಡುತ್ತದೆ ಎನ್ನುವುದನ್ನು ಈ ಅಧ್ಯಯನದ ಎರಡನೇ ಭಾಗ ಸುಸ್ಥಿರವಾಗಿ ಪರಿಶೀಲಿಸುತ್ತದೆ. ನಿರಚನವಾದಿ ಭಾಷಾಂತರಕಾರಳಾಗಿ ಓದುಗಳಿಗೆ ಈ ಉಧೃತ ಭಾಗ ಕೃತಿಯ ಮಿತಿಯ ಒಳಗೇ ಇದ್ದರೂ, ಇದು ವಿವರಿಸುವುದು ತನ್ನ ಶೋಧನೆಯ ವಸ್ತುವನ್ನೇ ಹೊರತು ಸ್ವಯಂ ತನ್ನನ್ನೇ ಅಲ್ಲವಾದರೂ ಸಹ, ಪಠ್ಯದ ಸ್ವವಿವರಣೆಯಾಗಿ ಒದಗುತ್ತದೆ. ಕೃತಿಯ ಅಂತ್ಯವನ್ನು ತಲುಪುವ ವೇಳೆಗೆ ಭಾಷಾಂತರಕಾರಳಾಗಿ ಓದುಗಳಿಗೆ ಪಠ್ಯದೊಳಕ್ಕೆ ತನ್ನನ್ನೇ ಬರೆದಿರುವುದೆಂಬ ಭಾವನೆ ಬಂದುಬಿಟ್ಟಿರುತ್ತದೆ.

ಆ ನಿರಾಕರಣೆಯ ಮತ್ತು ಪ್ರತಿರೋಧದ ಚರಿತ್ರೆಯಾಗಿ ಈ ಕೃತಿ ತಾನೇ ಚರಿತ್ರೆಯಾಗಿ ಅಸ್ತಿತ್ವಕ್ಕೆ ಬರುವುದರ ದಾಖಲೆಯೊಂದನ್ನು ಪ್ರಸ್ತುತಪಡಿಸುತ್ತದೆ; ಅದು ತಾನು ಭಿನ್ನವಾಗಿ ಯೋಚಿಸಲು ಬಯಸುವ ವಿಚಾರ. ಆದ್ದರಿಂದ ಮುಕ್ತಾಯವು ಅದರ ಮಿತಿಯ ಬಗ್ಗೆ ಇಂಗಿತ ಸೂಚನೆ ಮಾಡಬೇಕು, ಹೇಳದಿರುವುದರ ಬಗ್ಗೆ ಮೌನವಾಗಿರಲು ನಿರಾಕರಿಸಿ ಮತ್ತೊಂದರ ಕಡೆಯಿಂದ ಮಾತನಾಡುವುದರ ಮೂಲಕ ಗಡಿಯು ಮೂಲಕ್ಕೆ ಹಿಂತಿರುಗುವ ಅಪಾಯವನ್ನು ಮೈಮೇಲೆ ಎಳೆದುಕೊಳ್ಳಬೇಕು. ಇದು ಸಮಂಜಸವಾದದ್ದು.

ಇದಕ್ಕಿಂತ ಆಚೆಗೆ ಅನ್ಯ ಅವಕಾಶದ ಚುಂಬನಕ್ಕಾಗಿ ಹಪಹಪಿಕೆ, ಅದು ಬರಿಯ ನೋವು (ವೆವರ್) ಭಾಷಾಂತರಕಾರನಾಗಿ ಓದುಗಳ ಚಿತ್ರದ ಅಡಿಯಲ್ಲಿ ನಾನು ಚರಿತ್ರೆಯೊಂದನ್ನು ಕಲೆಹಾಕಲು ಮಾಸ್ಟರ್‌ಮಾರ್ಕುಗಳನ್ನು ಬಳಸಿಕೊಂಡು ನಿಗೂಢ ವಸಾಹತೋತ್ತರ ಓದುವಿಕೆಯ ರಾಜಕಾರಣಕ್ಕೆ ಒಂದು ರೂಪ ಒದಗಿಸಲು ಪ್ರಯತ್ನಿಸಿದ್ದೇನೆ. ಹೀಗೆ ನಾವು ಯಾವಯಾವ ಕೃತಿಗಳನ್ನು ಓದಬಹುದು ಮತ್ತು ಯಾವಯಾವ ಕೃತಿಗಳನ್ನು ಪಕ್ಕಕ್ಕಿಡಬೇಕು ಎನ್ನುವುದನ್ನು ಕಂಡುಕೊಳ್ಳುತ್ತೇವೆ. ನಾನು ಪೀಟರ್ ದ ಬೋಲ್ಲಸ ದಿ ಡಿಸ್ಕೋರ್ಸ್ ಆಫ್ ದಿ ಸಬ್ಲೈಮ್ ಅನ್ನು ವಸಾಹತುಶಾಹಿ ಹದಿನೆಂಟನೇ ಶತಮಾನದ ನೀರಸ ಚರಿತ್ರೆಯನ್ನು ಅನಾವರಣಗೊಳಿಸಲು ಬಳಸಿಕೊಳ್ಳಬಹುದು. ಸಮಕಾಲೀನ ಸಾಹಿತ್ಯ ಸಿದ್ಧಾಂತಗಳನ್ನು ಅರಿತ ಲೇಖಕಿಯಾಗಿದ್ದ ಟೋನಿ ಮೋರಿಸನ್ ಪಾಲ್ ದ ಮ್ಯಾನ್‌ನ ದಿ ಪರ್ಪ್ಲಾಯಿನ್ಸ್ ರಿಬ್ಬನ್ ಕೃತಿಯನ್ನು ಪಕ್ಕಕ್ಕೆತ್ತಿಡುವ ನಿರ್ಬಂಧಕ್ಕೆ ಒಳಗಾಗಿದ್ದಳೇ?

ಸಾವಿರದ ಎಂಟುನೂರ ಎಪ್ಪತ್ತನಾಲ್ಕು ಮತ್ತು ಬಿಳಿಯರು ಇನ್ನೂ ತಪ್ಪಿಸಿಕೊಂಡು ತಿರುಗುತ್ತಿದ್ದರು. ಕೊಲ್ಲುವ ಕಿಚ್ಚಿನ ಮೇಲೆ ಮನುಷ್ಯನ ನೆತ್ತರು ಬೇಯುತ್ತಿತ್ತು. ಅದಷ್ಟೇ ಉಳಿದಿದ್ದ ವಿಚಾರ. ಆದರೆ ಅದ್ಯಾವುದೂ ಅವನ ಅಸ್ಥಿಮಜ್ಜೆಯನ್ನು ಬಸಿಯಲಾಗಿರಲಿಲ್ಲ... ಅದು ರಿಬ್ಬನ್... ಅದು ತನ್ನ ನಾವೆಗೆ ಸಿಕ್ಕಿಸಿದ ಅತಿ ಮುಖ್ಯವಾದ ಗರಿ ಎಂದು ಅವನು ಎಣಿಸಿದ. ಅದನ್ನವನು ಕಿತ್ತ. ಅವನ ಕೈಗೆ ಬಂದಿದ್ದು ಇನ್ನೂ ನೆತ್ತಿಯ ಚರ್ಮಕ್ಕೆ ಅಂಟಿಕೊಂಡಿದ್ದ ತುಪ್ಪಳದಂತಹ ಒದ್ದೆ ಕೂದಲಿನ ಸುತ್ತ ಗಂಟು ಹಾಕಿದ್ದ ಕೆಂಪು ರಿಬ್ಬನ್. ಅವನು ರಿಬ್ಬನ್ ಅನ್ನು ಇರಿಸಿಕೊಂಡ. ಚರ್ಮದ ವಾಸನೆ ಅವನನ್ನು ಕಾಡಿತು.

ಆ ಬಳಿಕ ಮೋರಿಸನ್ ಎಷ್ಟೊಂದು ಅಂಚು ಸವೆದ ಭಾಷೆಯನ್ನು ಕಾರ್ಯಕ್ಕೆಳೆಸುತ್ತಾರೆಂದರೆ ಮತ್ತೆ ಎಷ್ಟು ಸವೆಸಿದರೂ ಅದರಿಂದ ಒಂದು ಪಠ್ಯಭಾಗವನ್ನು ಕಲಿಸುವುದು ಸಾಧ್ಯವೇ ಇಲ್ಲ. ಈ ಬಾರಿ, ಅವನು ಒಂದೇ ಒಂದು ಪದವನ್ನು ಹೊರತು ಮಾಡಿ ಬೇರೆ ಯಾವುದೇ ಪದವನ್ನೂ ಅರ್ಥದಲ್ಲಿ ಇಡದಿದ್ದರೂ ಅವನಿಗೆ ಅದನ್ನು ಆಡುವವರು ಯಾರೆಂಬ ಅರಿವಿತ್ತು. ಗೋಣುಮುರಿದ ಜನರು, ಕಿಚ್ಚು ಬೇಯಿಸಿದ ನೆತ್ತರವರು, ತಮ್ಮ ರಿಬ್ಬನ್ ಕಳಕೊಂಡ ಹೆಣ್ಣುಮಕ್ಕಳು. ಹದಿನೆಂಟನೇ ಶತಮಾನದ ಜಿನೀವಾದಲ್ಲಿ ಕೊಟ್ಟ ಭರವಸೆಗಳ ಮತ್ತು ಮಾಡಲಾರದಕ್ಕೆ ಕೇಳಿದ ಕ್ಷಮೆಗಳ ವಿವರಣೆಗಳು ಈ ಕಿರುಚಾಟದ ಪರಿಧಿಯೊಳಕ್ಕೆ ಬಂದಾವೆ? ಅದನ್ನು ನಾನು ಶೋಧಿಸಲು ಹೋಗುವುದಿಲ್ಲ. ಮೂಳೆಕೊಳಲಿನ ಆಳತೆಗೂ ತೊಡಗುವುದಿಲ್ಲ. ಭಾಷಾಂತರದ ಹೆಸರಿನಲ್ಲಿ ನಾನು ಈ ಪುಟಗಳನ್ನು ಬಿಲವೆಡ್‌ನ ಕರ್ತೃವಿಗೆ ಸಮರ್ಪಿಸಿಬಿಡುತ್ತೇನೆ.

ಟಿಪ್ಪಣಿಗಳು

1. ಈ ನಿಬಂಧದ ಮೊದಲ ಭಾಗವು 1990ರಲ್ಲಿ ಮಿಚೆಲಿ ಬ್ಯಾರೆಟ್ ಜೊತೆ ನಡೆಸಿದ ಮಾತುಕತೆಯನ್ನು ಆಧರಿಸಿದೆ.
2. ಸೀಗಲ್ ಪ್ರೆಸ್ ಕಲ್ಕತ್ತಾದಿಂದ ಪ್ರಕಟವಾಗಲಿದೆ(2002).
3. ಫೆಸಿಲಿಟೇಶನ್ ಎನ್ನುವುದು ಫ್ರಾಯ್ಡನ ಪರಿಭಾಷೆಯ ಪದ. ಅದನ್ನು ಫ್ರೆಂಚ್ ಭಾಷೆಯಲ್ಲಿ ಫ್ರಯೇಜ್ ಎಂದು ಭಾಷಾಂತರ ಮಾಡಲಾಗಿದೆ. ಪದವನ್ನು ಫ್ರಾಯ್ಡ್ ಮಾನಸ ಸಲಕರಣೆಯೊಂದರ ಕಾರ್ಯನಿರ್ವಹಣೆಯ ನರರೋಗಶಾಸ್ತ್ರೀಯ ಮಾದರಿಯೊಂದನ್ನು ಪ್ರಸ್ತುತಪಡಿಸುವಾಗ ಬಳಸಿದ. ಅದರ ನಿಘಂಟುವಿನ ಅರ್ಥ ಹೀಗಿದೆ: ಉದ್ರೇಕವು ಒಂದು ನ್ಯೂರಾನ್‌ನಿಂದ ಇನ್ನೊಂದಕ್ಕೆ ಹರಿಯುವಾಗ ಒಂದಷ್ಟು ಪ್ರತಿರೋಧಕ್ಕೆ ಒಳಗಾಗುತ್ತದೆ. ಆ ಹರಿವು ಇದರಲ್ಲಿ ಒಂದಿಷ್ಟನ್ನು ಖಾಯಮ್ಮಾಗಿ ಕಳೆದುಕೊಳ್ಳುತ್ತದೆ. ಆ ಹರಿವು ಮತ್ತು ಕಳೆದುಕೊಳ್ಳುವುದನ್ನು ಫೆಸಿಲಿಟೇಶನ್ ಎನ್ನಲಾಗಿದೆ. ಉದ್ರೇಕವು ಇಂತಹ ಸೌಲಭ್ಯವಿಲ್ಲದ ಕಡೆಗಿಂತಲೂ ಅಂತಹ ಸೌಲಭ್ಯ ಹೊಂದಿರುವ ಹಾದಿಯನ್ನು ಆಯ್ದುಕೊಳ್ಳುತ್ತದೆ

1. (J.Laplanche and J.B. Pontalis, The Language of Psycho-analysis. Hogarth Press, London,1973. p.157).
2. Jacques Derrda: Force of Law: The Mystical Foundation of Authority" Tr. Mary Quaintaince, Deconstruction and Possibility of Justice: Cordozo Law Review, XI (July-Aug, 1990): p.923.
3. "The Wet Nurse", in Kali for Women(eds) Truth Tales: Stories by Indian Women (The Women's Press, London,1987) pp.1-50 (First published by Kali for Women, Delhi. 1986) and "breast Giver" in Gayatri Chakravorty Spivak, In Other Worlds: Essays in Cultural Politics (Methuen/Routledge, New York, 1987). pp. 222-40.
4. ಇಮ್ಯಾನ್ಯುಯೆಲ್ ಲೆವಿನಾಸ್‌ಗೆ ವಿರುದ್ಧವಾಗಿ ಲೂಸ್ ಇರಿಗರಿ ಒಪ್ಪಿಸುವ ಬಗೆಯಲ್ಲಿ ವಾದಿಸುವುದು ಲೈಂಗಿಕ ತಾರತಮ್ಯದ ನೈತಿಕತೆಯ ಒಳಗೇ ಕಾಮವೆನ್ನುವುದು ನೈತಿಕವಾದದ್ದು "The fecundity of the Caress", in her Ethics of Sexual Difference, tr. Carolyn Burke and G.C.Gill (Cornell University Press, Ithaca, N.Y.(1993).

5. Sudhir Kakkar, The Inner World: A Psycho-analytic Study of Childhood and Society in India, 2nd edition,(Oxford University Press, Delhi,1981), pp.171 ff ಈ ಚರ್ಚೆಯ ಒಂದು ಭಾಗವು ಮತ್ತೊಂದು ಬಗೆಯಲ್ಲಿ ನನ್ನ Psychoanalysis in Left Field; and Fieldworking: Examples to fit the Titleಕೃತಿಯಲ್ಲಿ ಸೇರಿದೆ. Michael Munchow and Sonu Shamdasani(eds), Psychoanalysis, Philosophy and Culture (Routledge, London, 1994), pp. 41-75.

6. ಭಾರತದ ರಾಷ್ಟ್ರೀಯತೆಯ ಪುಂಸ್ತ್ರೀಕರಣವನ್ನು ಕುರಿತ ವಿಸ್ತೃತ ಚರ್ಚೆಗಾಗಿ ನೋಡಿ Partha Chatterjee, "Nationalism and the Woman Question:, in Kumkum Sangari and Sudesh Vaid (eds.) Re-casting Woman (Rutgers University Press, New Brunswick, NJ, 1990) pp. 233-53.

7. Max Weber, The Religion of India: The Socialism of Hinduism and Buddhism, tr. Hans H Gerth and Don Martindale (Free Press, Glencoe, Ill., 1958).

8. Spivak, "Stagings of the Origin", in Third Text.

9. Ifi Amadiume, Male Daughters Female Husbands (Zed Books, London, 1987).

10. Yayori Matsui (ed.) Women's Asia (Zed Books, London,1989) ch.1.

11. "More on Power/Knowledge", in Thomas E.Wartenberg(ed.), rethinking Power (State University of New York Press, Albany, NY, 1992).

12. Spivak, "Can the Subaltern Speak?," in Cary Nelson and Lawrence Grossberg (eds.) Marxism and the Interpretation of Culture(University of Illinois Press, Urbana, Ill.,1998) pp.271-313.

13. ಈ ಮತ್ತು ಇದಕ್ಕೆ ಸಂಬಂಧಿಸಿದ ಮುಂದುವರಿದ ವಿವರಣೆಗಳಿಗೆ ನೋಡಿ ನನ್ನ "Versions of the Margin: Coetzee's Foe reading Defoe's Crusoe/Roxana" inJonathan Arac (ed.) Theory and Its Consequence (John Hopkins University Press, Baltimore, 1990).

14. Tony Morrison, Beloved (Plume Books, New York, 1987)

15. "Literary Representation of the Subaltern", in my in other worlds, pp. 241-68.

16. Karl Marx, "Economic and Philosophical Manuscripts: in Rodney Livingstone and George Benton tr., Early writings (Vintage, New York, 1975)pp279-400; Wilson Harris, the Guyana Quartet, (Faber, London, 1985). These quotations are from Wilson Harris, "Cross-

cultural Crisis: Imagery, Language, And the Intuitive Imagination", Commonwealth Lectures, 1990, Lecture no.2,31 Oct.1990, University of Cambridge.


17. ಹೆಗೆಲ್‌ನ ಮತ್ತು ಹೆಗಲ್‌ಪೂರ್ವದ ಫೆಟಿಶ್ –ಕುರುಡು ಶ್ರದ್ಧೆ - ಕುರಿತ ವ್ಯಾಖ್ಯಾನದ ದಿಕ್ಕನ್ನು ಡೆರಿಡಾ ಶೋಧಿಸುತ್ತಾನೆ. ಫೆಟಿಶ್‌ನ ಆರಾಧಕ ಮನುಷ್ಯರ ಮಾಂಸವನ್ನು ತಿನ್ನುತ್ತಾನೆ. ದೇವರ ಆರಾಧಕ ಪ್ರಭುಭೋಜನವನ್ನು ಭುಜಿಸುತ್ತಾನೆ. ಇಲ್ಲಿ ಹ್ಯಾರಿಸ್ ಫೆಟಿಶ್ ಅನ್ನು ನೇಟಿವ್ ಕಲ್ಪನೆಯ ಮೂಲಕ ನೋಡಲು ತೊಡಗುತ್ತಾನೆ. (Jacques Derrida, Glas, tr. Richard Rand and John P. Leavey, Jr. University of Nebraska Press, Lincoln, Nebr.,1986).

18. Slovoz Zizec, the Sublime Object of Ideology, tr. Jon Barnes (Verso, London. 1989), pp203,208,212.

19. Peter de Bolla, The Discourse of the Sublime: Readings in History, Aesthetics and the subject(Blackwell, Oxford, 1989).

20. References and discussions of "the Begums of Oudh", and "The Impeachment of Warren Hastings" are to be found in the Writings and Speeches of Edmund Burke, ed. P.J. MArshall(Clarendon Press, Oxford, 1981) Vol.5; India: Madras and Bengal , pp410-12, pp465-6 and in vol.6 India: Launching of The Hastings Impeachment respectively.

21. See my "Reading the Archives: the Rani of Sirmur:, in Francis Barker(ed.),Europe and Its Others



ಜವಾಹರಲಾಲ್ ನೆಹರು ಅವರ ದ್ವಂದ್ವಗಳು

ಇಂಗ್ಲಿಷ್ ಮೂಲ: **ಆರ್ ಎಲ್ ಎಂ ಪಾಟೀಲ್**

ಕನ್ನಡಕ್ಕೆ: **ಬಿ ಎಸ್ ಜಯಪ್ರಕಾಶ ನಾರಾಯಣ**

ಒಬ್ಬ ವಾಗ್ಮಿಯಾಗಿಯೂ ಒಬ್ಬ ಬರಹಗಾರನಾಗಿಯೂ ಜವಾಹರಲಾಲ್ ನೆಹರು ನಿಜಕ್ಕೂ ಸರಸ್ವತಿಯ ವರಪುತ್ರನೇ ಆಗಿದ್ದರು. ತಾವು ಸರಿಯೆಂದು ನಂಬಿದ್ದನ್ನು ಅವರು ತಮ್ಮ ಕೇಳುಗರಿಗೂ ಓದುಗರಿಗೂ ತಮ್ಮದೇ ಆದ ಧಾಟಿಯಲ್ಲಿ ಮನದಟ್ಟು ಮಾಡಿಕೊಡುತ್ತಿದ್ದರು. ಇದನ್ನು ಅವರು ತಮ್ಮ ವಿರುದ್ಧ ತಾವೇ ವಾದಿಸುವ ಬಗೆಯಲ್ಲಿ ಸಾಧಿಸುತ್ತಿದ್ದರು. ಅವರು ತಮ್ಮ ಅಂತರಂಗದ ದನಿಯನ್ನು ಹಂಚಿಕೊಳ್ಳಲೆಂದು ಭಾಷಣಗಳನ್ನು ಮಾಡುತ್ತಿದ್ದರು. ಅವರು ಯಾವತ್ತೂ ತಮ್ಮ ಭಾಷಣಗಳಲ್ಲಿ ತಮ್ಮನ್ನು ಒಪ್ಪದವರ ವಿರುದ್ಧ ವಾಗ್ದಾಳಿ ಮಾಡುತ್ತಿರಲಿಲ್ಲ. ನಿಜ ಹೇಳಬೇಕೆಂದರೆ, ತಮ್ಮ ವಾದ ಮಂಡನೆಯ ಶುರುವಿನಲ್ಲಿ ಅವರು ತಮ್ಮ ಎದುರಾಳಿಗಳ ವಾದವನ್ನೇ ಒಪ್ಪುತ್ತಿರುವಂತೆ ಕಾಣುತ್ತಿತ್ತು. ಆದರೆ ಅಂತಿಮವಾಗಿ ಅವರು ತಮ್ಮ ವಾದವನ್ನೇ ಮುಂದಿಡುತ್ತಿದ್ದರು. ಅವರ ಈ ಶೈಲಿಯಲ್ಲಿ ತಮ್ಮನ್ನು ಒಪ್ಪದವರ ಮೇಲೆ ಗೆದ್ದ ವೀರಾವೇಶವೇನೂ ಇರುತ್ತಿರಲಿಲ್ಲ; ಬದಲಿಗೆ, ಹೆಚ್ಚು ಸಮನ್ವಯತೆಯಿಂದ ಕೂಡಿದ್ದ, ಸಮಂಜಸವಾಗಿರುತ್ತಿದ್ದ ನಿಲುವನ್ನು ಅವರು ಪ್ರಕಟಿಸುತ್ತಿದ್ದರು. ಇದರ ಜತೆಗೆ ಅವರು ಸಂಘರ್ಷಗಳನ್ನು/ವಿರೋಧಾಭಾಸಗಳನ್ನು ಸ್ವೀಕರಿಸುತ್ತಿದ್ದರೇ ವಿನಾ ಅವನ್ನು ಮುರಿಯಲು ನೆಹರು ಪ್ರಯತ್ನಿಸುತ್ತಿರಲಿಲ್ಲ. ಅವರ ಈ ಕೌಶಲಕ್ಕೆ ಸಾಕ್ಷಿಗಳಾಗಿ ಅವರು ಅತ್ಯಂತ ಮಹತ್ವದ ವಿಚಾರಗಳ ಬಗ್ಗೆ ತಾಳಿದ ನಿಲುವುಗಳನ್ನು ನೋಡಬಹುದು. ಉದಾಹರಣೆಗೆಂದು ಕಾಶ್ಮೀರ ವಿವಾದ, ಭಾರತ-ಚೀನಾ ಗಡಿ ವಿವಾದ, ಕಾಮನ್‌ವೆಲ್ತ್ ಒಕ್ಕೂಟ, ರಾಜ್ಯ ಪುನರ್ವಿಂಗಡಣೆ, ಸಮಾಜವಾದ, ನ್ಯಾಯಾಂಗ ವರ್ಸಸ್ ಶಾಸಕಾಂಗ, ಗಾಂಧೀಜಿಯ

ಪ್ರಸ್ತುತತೆ, ಪ್ರಧಾನಿ ಮತ್ತು ಸಂಪುಟ ಸದಸ್ಯರು ಮುಂತಾದ ವಿಷಯಗಳ ಬಗ್ಗೆ ಅವರು ತಾಳಿದ ನಿಲುವುಗಳನ್ನು ಹೇಳಬಹುದು. ಈ ವಿಚಾರಗಳಿಗೆ ಸಂಬಂಧಿಸಿದ ನಿಲುವುಗಳಲ್ಲಿ ಅವರು ಯಾವತ್ತೂ ಸ್ಥಿರವಾಗಿರಲಿಲ್ಲ, ಹಾಗೆ ನೋಡಿದರೆ, ಇಂಥ ಅನೇಕ ವಿಷಯಗಳಲ್ಲಿ ಅವರು ಸ್ವಯಂ ವಿರೋಧಾಭಾಸಗಳ ಬಲೆಯಲ್ಲಿದ್ದರು.

ಇವನ್ನೆಲ್ಲ ಆಳವಾಗಿ ಪರಿಶೀಲಿಸಿದರೆ ಒಂದು ಸಂಗತಿ ಸ್ಪಷ್ಟವಾಗುತ್ತದೆ. ಅದೇನೆಂದರೆ, ತಮ್ಮೊಂದಿಗೆ ತಾವೇ ವಾದ ಮಂಡನೆಗೆ ತೊಡಗುತ್ತಿದ್ದ ಅವರಿಗೆ ಯಾವ ವಿಷಯದಲ್ಲೂ ಒಂದು ಅಂತಿಮ/ಮೂಲಭೂತ ನಿಲುವನ್ನು ತಲುಪುವ ಶಕ್ತಿ ಇರಲಿಲ್ಲ. ತಮ್ಮ ಯಾವುದಾದರೂ ನಿಲುವು ಸೋಲುಣ್ಣುವುದು ಖಚಿತ ಎನ್ನುವುದು ಗೊತ್ತಾದ ಪಕ್ಷದಲ್ಲಿ ಅವರು ಮೊದಲೇ ಅದಕ್ಕೆ ಬೇಕಾದ ಸಮರ್ಥನೆಯನ್ನು ಸಿದ್ಧಪಡಿಸಿಕೊಳ್ಳುತ್ತಿದ್ದರು. ಹೀಗೆ ಅವರ ವ್ಯಕ್ತಿತ್ವದಲ್ಲಿ ಈ ಎರಡು ಮುಖಗಳೂ ಇದ್ದವು. ಎರಡು ಉದಾಹರಣೆಗಳ ಮೂಲಕ ನೆಹರು ಅವರ ನಿಲುವುಗಳ ಸ್ವರೂಪವನ್ನು ನೋಡಬಹುದು. ಇದರಲ್ಲಿ ಒಂದು ಉದಾಹರಣೆ ಕಾಮನ್‌ವೆಲ್ತ್ ಒಕ್ಕೂಟದಲ್ಲಿ ಭಾರತದ ಸದಸ್ಯತ್ವಕ್ಕೆ ಸಂಬಂಧಿಸಿದ್ದಾದರೆ, ಇನ್ನೊಂದು ಅವರ ಇಡೀ ರಾಜಕೀಯ ಜೀವನದಲ್ಲಿ ಪ್ರತಿಪಾದಿಸಿದ ಸಿದ್ಧಾಂತದ ಆಧಾರಸ್ತಂಭವಾಗಿದ್ದ ಸಮಾಜವಾದಕ್ಕೆ ಸಂಬಂಧಿಸಿದ್ದು. ಇದರಲ್ಲಿ ಒಂದು ಉದಾಹರಣೆ ಚಿಕ್ಕದು; ಇನ್ನೊಂದು ದೊಡ್ಡದು. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕುವುದಕ್ಕೂ ಮೊದಲು ಬ್ರಿಟೀಷರ ಪರಿಕಲ್ಪನೆಯಾದ ಕಾಮನ್‌ವೆಲ್ತ್ ರಾಷ್ಟ್ರಗಳ ಒಕ್ಕೂಟದ (ಬ್ರಿಟಿಷ್ ಕಾಮನ್‌ವೆಲ್ತ್ ಆಫ್ ನೇಷನ್ಸ್) ಕಟು ಟೀಕಾಕಾರರಾಗಿದ್ದರು. ಎಸ್ ಗೋಪಾಲ್ ಅವರು ತಾವು ಬರೆದಿರುವ ನೆಹರು ಜೀವನ ಚರಿತ್ರೆಯ ಒಂದನೇ ಸಂಪುಟದ ೩೫೨-೩೫೩ನೇ ಪುಟಗಳಲ್ಲಿ ನೆಹರು ಅವರು ೧೯೪೮ನೇ ಇಸವಿಯ ಡಿಸೆಂಬರ್‌ನಲ್ಲಿ ಆಡಿರುವ ಮಾತುಗಳನ್ನು ಉಲ್ಲೇಖಿಸಿದ್ದಾರೆ. ಆ ಮಾತುಗಳು ಹೀಗಿವೆ-

''ಪರಿಣಾಮಗಳು ಏನೇ ಆಗಲಿ, ಭಾರತವು ಬ್ರಿಟಿಷ್ ಕಾಮನ್‌ವೆಲ್ತ್ ಒಕ್ಕೂಟದಲ್ಲಿ ಇರುವುದಿಲ್ಲ. ಇದು ನಾನೊಬ್ಬನಾಗಲಿ, ಅಥವಾ ನಾವ್ಯಾರೋ ಒಂದಿಷ್ಟು ಜನ ತೀರ್ಮಾನಿಸಬೇಕಾದ ಸಂಗತಿಯಲ್ಲ. ಕಾಮನ್‌ವೆಲ್ತ್ ಒಕ್ಕೂಟದಲ್ಲಿ ಭಾರತ ಉಳಿದುಕೊಂಡಿದ್ದೇ ಆದರೆ ಅದು ಕೊನೆಗೆ ಆ ನಿಲುವನ್ನು ಪ್ರತಿಪಾದಿಸಿದವರನ್ನೇ ಗುಡಿಸಿ ಹಾಕಲಿದ್ದು, ಭಾರತಕ್ಕೆ ದೊಡ್ಡ ಗಂಡಾಂತರವನ್ನು ತಂದೊಡ್ಡಲಿದೆ. ಹೀಗಾಗಿ ನಾವು ಪ್ರಾಯೋಗಿಕವಾಗಿ ಯೋಚಿಸಬೇಕು. ಅದೇನೆಂದರೆ, ಮುಂದಿನ ವರ್ಷ ಮಧ್ಯಭಾಗದ ಹೊತ್ತಿಗೆ ಭಾರತವು ಈ ಕಾಮನ್‌ವೆಲ್ತ್ ಒಕ್ಕೂಟದಿಂದ ಹೊರಬರಲಿದೆ''. ಆದರೆ ಅಂತಿಮವಾಗಿ ಇದಕ್ಕೆ ತದ್ವಿರುದ್ಧವಾದುದೇ ಸಂಭವಿಸಿತು.

೧೯೪೯ನೇ ಇಸವಿಯ ಏಪ್ರಿಲ್ ೨೭ರಂದು ಲಂಡನ್‌ನಲ್ಲಿ ನಡೆದ ಕಾಮನ್‌ವೆಲ್ತ್ ಒಕ್ಕೂಟದ ಸಮಾರೋಪ ಗೋಷ್ಠಿಯಲ್ಲಿ ಮಾತನಾಡಿದ ನೆಹರು, ಭಾರತವು ಕಾಮನ್‌ವೆಲ್ತ್ ಒಕ್ಕೂಟದಲ್ಲಿ ಮುಂದುವರಿಯುವುದಾಗಿ ಘೋಷಿಸಿದರು. ಅಲ್ಲದೆ, ತಮ್ಮ ಈ ನಿಲುವನ್ನು ಅನುಮೋದಿಸುವಂತೆ ಅವರು ಕೆಲವೇ ದಿನಗಳಲ್ಲಿ ಸಂಸತ್ತನ್ನು ಕೇಳಿಕೊಂಡರು. ಇದನ್ನು ಅವರು, ಒಂದು ಒಡಂಬಡಿಕೆಯೆಡೆಗೆ ತಮಗಿರುವ ಬದ್ಧತೆ ಎಂದು ಭಾವಿಸಿದರು. ಒಂದು ಕಾಲದಲ್ಲಿ ಕಾಮನ್‌ವೆಲ್ತ್ ಒಕ್ಕೂಟವನ್ನು ಹಿಗ್ಗಾಮುಗ್ಗಾ ಟೀಕಿಸುತ್ತಿದ್ದ ನೆಹರೂ ಹೀಗೇಕೆ ಕೊನೆಗೆ ತದ್ವಿರುದ್ಧ ವಾದ ನಿಲುವನ್ನು ತಾಳಿದರು? ಭಾರತದ ಸಂಸದರಿಗೆ ತಮ್ಮ ಈ ನಿರ್ಧಾರ ಒಪ್ಪಿಗೆಯಾಗುವಂತೆ ಮಾಡಲು ನೆಹರು 'ಬ್ರಿಟಿಷ್ ಕಾಮನ್‌ವೆಲ್ತ್ ಆಫ್ ನೇಷನ್ಸ್' ಎನ್ನುವ ಹೆಸರಿನಲ್ಲಿದ್ದ 'ಬ್ರಿಟಿಷ್'

ಎನ್ನುವ ಹೆಸರನ್ನು ಕೈಬಿಡುವಂತೆ ದನಿ ಎತ್ತಿದರು. ಆದರೆ ನೆಹರು ಅವರ ಅಂತಿಮ ನಿರ್ಧಾರ ಹೊರಬೀಳುವ ಕೆಲದಿನಗಳ ಮೊದಲು ಈ ಬಗ್ಗೆ ಬ್ರಿಟನ್ ಸಂಸತ್(ಹೌಸ್ ಆಫ್ ಕಾಮನ್ಸ್)ನಲ್ಲಿ ತಮಗೆ ಎದುರಾದ ಪ್ರಶ್ನೆಗೆ ಉತ್ತರಿಸಿರುವ ಅಲ್ಲಿನ ಪ್ರಧಾನಿ ಕ್ಲೆಮೆಂಟ್ ಅಟ್ಲಿ ''ಬ್ರಿಟಿಷ್ ಕಾಮನ್‌ವೆಲ್ತ್ ಆಫ್ ನೇಷನ್ಸ್ ಎನ್ನುವ ಹೆಸರಿನಿಂದ 'ಬ್ರಿಟಿಷ್' ಎನ್ನುವ ಪದವನ್ನು ಅಧಿಕೃತವಾಗಿ ಕೈಬಿಟ್ಟಿಲ್ಲ'' ಎಂದಿದ್ದರು! ಆದರೆ, ನೆಹರು ಅವರು ಈ ಬಗ್ಗೆ ತಮ್ಮನ್ನು ಸಮರ್ಥಿಸಿಕೊಂಡು ಕೊಟ್ಟಿರುವ ಉತ್ತರ ದೀರ್ಘವಾಗಿದ್ದು, ಏಮ್ಮುಖವಾಗಿದೆ. ಅವರ ಆ ಉತ್ತರದಲ್ಲಿ ಸಮತೋಲನ ಕಾಣುವುದಿಲ್ಲ. ಜತೆಗೆ, ಕೆಲವೇ ತಿಂಗಳ ಹಿಂದೆ ಕಾಮನ್‌ವೆಲ್ತ್ ಒಕ್ಕೂಟವನ್ನು 'ಬ್ರಿಟಿಷ್ ಸಾಮ್ರಾಜ್ಯಶಾಹಿಯ ಆಮದು,' ಎಂದು ಕಟುವಾಗಿ ತಾವು ವಿರೋಧಿಸುತ್ತಿದ್ದುದರ ಪ್ರಸ್ತಾಪವೇ ಆ ಉತ್ತರದಲ್ಲಿಲ್ಲ. ಆದರೆ, ತಮ್ಮ ಈ ಉತ್ತರದ ಕೊನೆಯ ಭಾಗದಲ್ಲಿ ಅವರು ದಿಢೀರನೆ ಬದಲಾದ ತಮ್ಮ ನಿಲುವನ್ನು ಬಹಿರಂಗವಾಗಿಯೇ ಪ್ರಶ್ನಿಸಿದ ತಮ್ಮ ಟೀಕಾಕಾರರನ್ನು ನೆನಪಿಸಿಕೊಂಡಿದ್ದಾರೆ. ಆ ಮಾತುಗಳನ್ನು ನೋಡಿ-

''ನನ್ನ ಈ ನಿಲುವನ್ನು ಪ್ರಶ್ನಿಸುತ್ತಿರುವವರೆಲ್ಲ ನಾವೆಲ್ಲರೂ ಒಂದು ಕಾಲದಲ್ಲಿದ್ದ ಇನ್ನೂ ಹಳೆಯ ಕಾಲದ ಆ ಪಂಜರದಲ್ಲೇ ಇದ್ದಾರೆ. ಆ ಪಂಜರದಿಂದ ಮಾನಸಿಕವಾಗಿ ಹೊರಬರಲು ಬಾಗಿಲುಗಳು ತೆರೆದಿದ್ದರೂ ಇವರ್‍ಯಾರೂ ಅದರ ಪ್ರಯೋಜನವನ್ನು ಪಡೆದುಕೊಂಡಿಲ್ಲ. ಈ ಪೈಕಿ ನನ್ನ ಕೆಲವು ಗೆಳೆಯರು, ನಾನು ಹದಿನೈದೋ, ಇಪ್ಪತ್ತೋ ವರ್ಷಗಳ ಹಿಂದೆ ಮಾಡಿದ ಭಾಷಣಗಳನ್ನು ಉಲ್ಲೇಖಿಸುತ್ತಿದ್ದಾರೆ. ಇರಲಿ, ಇವರೆಲ್ಲ ನನ್ನ ಭಾಷಣಗಳಿಗೆ ಅಷ್ಟೊಂದು ಬೆಲೆ ಕೊಡುವುದಾದರೆ ಅವರೆಲ್ಲ ನನ್ನ ಈಗಿನ ಈ ಭಾಷಣವನ್ನು ಇನ್ನೂ ಹೆಚ್ಚು ಎಚ್ಚರದಿಂದ ಕೇಳಿಸಿಕೊಳ್ಳುತ್ತಿರಬಹುದು.

ಜಗತ್ತು ಬದಲಾಗಿದೆ. ಕೆಡುಕು ಕೆಡುಕೇ; ಒಳ್ಳೆಯದು ಒಳ್ಳೆಯದೇ. ಅದನ್ನು ಅಲ್ಲಗಳೆಯಲು ನಾನು ಪ್ರಯತ್ನಿಸುತ್ತಿಲ್ಲ. ಸಾಮ್ರಾಜ್ಯಶಾಹಿ ವ್ಯವಸ್ಥೆಯು ಯಾವತ್ತಿದ್ದರೂ ಒಂದು ಕೆಡುಕೇ ಆಗಿದ್ದು, ಅದು ಎಲ್ಲೇ ಬೇರೂರಿದ್ದರೂ ಅದನ್ನು ಕಿತ್ತೊಗೆಯಬೇಕು. ಹಾಗೆಯೇ, ಜನಾಂಗೀಯವಾದ ಕೂಡ ಕೆಡುಕಾಗಿದ್ದು, ಅದರ ವಿರುದ್ಧವೂ ಹೋರಾಡಬೇಕು. ಇವೆಲ್ಲವೂ ಸತ್ಯವೇ. ಆದರೆ, ಇವೆಲ್ಲದರ ಮಧ್ಯೆಯೇ ಜಗತ್ತು ಬದಲಾಗಿದೆ; ಇಂಗ್ಲೆಂಡ್ ಕೂಡ ಬದಲಾಗಿದೆ; ಯೂರೋಪೂ ಬದಲಾಗಿದೆ. ಭಾರತ ಸಹ ಬದಲಾಗಿದೆ; ಎಲ್ಲವೂ ಬದಲಾಗಿದೆಯಷ್ಟೇ ಅಲ್ಲ, ಎಲ್ಲವೂ ಈಗಲೂ ಬದಲಾಗುತ್ತಿದೆ.''

ಇಷ್ಟು ಮಾತನಾಡಿದ ನೆಹರು, ನಂತರ ಕಳೆದ ಮುನ್ನೂರು ವರ್ಷಗಳಲ್ಲಿ ಯೂರೋಪು ಮಾಡಿರುವ ಸಾಧನೆಗಳ ಬಗ್ಗೆ ಸಾರಾಂಶ ರೂಪದ ಮಾತುಗಳನ್ನೂ ಆಡಿದರು! ಬಳಿಕ ತಮ್ಮ ಟೀಕಾಕಾರರ ಕಟುವಾದ ಮಾತುಗಳಿಗೆ ಮರಳಿದ ಅವರು ''ಖಂಡಿತವಾಗಿಯೂ ನನಗೆ ಕೂಡ ನಿಮ್ಮಂತೆಯೇ ಮಾತನಾಡಲು ಬರುತ್ತದೆ. ನಾನು ಕೂಡ ಮನಸ್ಸು ಮಾಡಿದರೆ ಇನ್ನೊಬ್ಬರ ಮನಸ್ಸು ನೋಯುವಂತೆ ಮಾತನಾಡಬಲ್ಲೆ. ಅಷ್ಟೇ ಅಲ್ಲ, ನಿಮ್ಮಂತೆಯೇ ಚರ್ಚಾಪಟುಗಳು ಬಳಸುವಂತಹ ಭಾಷೆಯನ್ನೂ ಬಳಸಬಲ್ಲೆ. ಆದರೆ, ಅಂಥ ಭಾಷೆಯನ್ನು ಬಳಸುವುದು ನನಗೆ ಇಷ್ಟವಿಲ್ಲ'' ಎಂದು ಹೇಳುವ ಮೂಲಕ ಅಂತಿಮವಾಗಿ ಅತ್ಯಂತ ಧೈರ್ಯದಿಂದ ತಮ್ಮ ನೈತಿಕ ನಿಲುವನ್ನು ಪ್ರದರ್ಶಿಸಿದರು

ತಮ್ಮ ಎದುರಾಳಿಗಳನ್ನು ಕ್ಷಮಿಸುವುದು ನೆಹರು ಅವರ ಬತ್ತಳಿಕೆಯಲ್ಲಿದ್ದ ಒಂದು ಜಾಣ ಉಪಾಯವಾಗಿತ್ತು. ಆದರೆ ಈ ಚರ್ಚೆ-ಉತ್ತರಗಳ ಪ್ರಕ್ರಿಯೆಯಲ್ಲಿ ಅವರು, ಸ್ವತಃ ತಾವೇ ಮೊದಲು ಆಡಿದ್ದ ಮಾತುಗಳ ಬಗ್ಗೆ ಏನೊಂದನ್ನೂ ಹೇಳಲಿಲ್ಲ. ಅವರು ಏನಾದರೂ ಒಂದು ಸದುದ್ದೇಶವಿಟ್ಟುಕೊಂಡು ಹೀಗೆ ತಮ್ಮ ಆಲೋಚನೆಯನ್ನು ಬದಲಿಸಿದರೇನು? ಈ ಪ್ರಶ್ನೆಗೆ ಖಂಡಿತವಾಗಿಯೂ 'ಇಲ್ಲ' ಎಂದೇ ಹೇಳಬೇಕಾಗುತ್ತದೆ. ಏಕೆಂದರೆ, ಕಾಮನ್‌ವೆಲ್ತ್ ಒಕ್ಕೂಟದ ವಿಚಾರದಲ್ಲಿ ಅವರು ಕೊಟ್ಟ ಉತ್ತರ ನಿರ್ದಿಷ್ಟವಾಗಿಯಾಗಲಿ, ಪ್ರಾಮಾಣಿಕವಾಗಿಯಾಗಲಿ ಇರಲಿಲ್ಲ. ಇದರ ಬದಲಿಗೆ ಅವರು ಸುತ್ತುಬಳಸಿನ ದಾರಿ ಹಿಡಿದು, ಕಳೆದ ಮುನ್ನೂರು ವರ್ಷಗಳಲ್ಲಿ ಯೂರೋಪು ಮತ್ತು ಉಳಿದ ಜಗತ್ತಿನಲ್ಲಿ ಆಗಿರುವ ಬದಲಾವಣೆಗಳ ಸಮಜಾಯಿಷಿಯನ್ನು ಕೊಡುತ್ತ ಹೋದರು. ಹೀಗೆ ಹೇಳುವ ಮೂಲಕ ಅವರು ಕೊನೆಗೆ 'ನಾವು ಬೇರೆಯವರಿಗೆ ಒಳ್ಳೆಯವರಾಗಿದ್ದರೆ, ಅವರಲ್ಲಿರುವ ಒಳ್ಳೆಯತನ ಹೊರಬರುತ್ತದೆ' ಎನ್ನುವ ಸಿದ್ಧಾಂತವನ್ನು ಪ್ರತಿಪಾದಿಸಿದರು.

ಆಗ ನೆಹರು ಅವರಿಗೆ ಸಂಸತ್‌ನಲ್ಲಿ ನಿಚ್ಚಳ ಬಹುಮತವಿತ್ತು. ಆಗಂತೂ ಅವರಿಗೆ ಸದನದಲ್ಲಿ ಯಾವುದೇ ವಿಚಾರವನ್ನು ಮುಂದಿಟ್ಟರೂ ಸೋಲುವ ಭಯವಿರಲಿಲ್ಲ. ಆದರೂ ಅವರು ಸದನದಲ್ಲಿ ತಮ್ಮ ಮುಗ್ಧತೆ, ಬುದ್ಧಿವಂತಿಕೆ ಮತ್ತು ಸಮಯ-ಸಂದರ್ಭಗಳನ್ನು ತಾನು ಹೇಗೆ ಸರಿಯಾಗಿ ಅರ್ಥ ಮಾಡಿಕೊಂಡಿದ್ದೇನೆ ಎನ್ನುವುದನ್ನು ಸಾಬೀತುಪಡಿಸಲು ಹೆಣಗುತ್ತಿದ್ದರು. ಸಂಸತ್‌ನಲ್ಲಿ ಅವರು ತಮ್ಮನ್ನು ತಾವು ಸಮರ್ಥಿಸಿಕೊಂಡು ಕೊಟ್ಟ ಈ ಉತ್ತರದಲ್ಲಿ ತಮ್ಮ ಸಂಸದೀಯ ಮಿತ್ರರಿಗೆ ತಿಳಿವಳಿಕೆ ಹೇಳಲು ಪ್ರಯತ್ನಿಸುತ್ತಿದ್ದರೇ ವಿನಾ ಅವರು ಎತ್ತಿದ ತಕರಾರುಗಳ ಬಗ್ಗೆ ಅವರು ಹೆಚ್ಚು ಚಿಂತಿತರಾಗಿರಲಿಲ್ಲ. ಒಟ್ಟಿನಲ್ಲಿ ಅವರು ಅಂದು ಧೈರ್ಯದಿಂದ ಇದ್ದರು ಎನ್ನುವುದರಲ್ಲಿ ಅನುಮಾನವಿಲ್ಲ.

ಇದೊಂದೇ ಅಲ್ಲ, ಮಿಕ್ಕ ವಿಷಯಗಳಲ್ಲೂ ನೆಹರು ಹೀಗೆಯೇ ಇದ್ದರು. ಭಾಷೆಗಳ ಆಧಾರದ ಮೇಲೆ ರಾಜ್ಯಗಳ ಪುನರ್ವಿಂಗಡಣೆ, ಶೇಖ್ ಅಬ್ದುಲ್ಲಾ ಅವರ ವಿಚಾರ ಮತ್ತು ಜಮ್ಮು-ಕಾಶ್ಮೀರ ವಿವಾದಕ್ಕೆ ಸಂಬಂಧಿಸಿದಂತೆ ಜನಾಭಿಪ್ರಾಯಕ್ಕೆ ಅವಕಾಶ ಕೊಡುವ ವಿಚಾರ ಹೀಗೆ ಯಾವುದೇ ಇರಲಿ, ನೆಹರು ಅವರು ತಮ್ಮ ನಿಲುವುಗಳನ್ನು ಬಹುಬೇಗನೇ ಬದಲಿಸಿ ಬಿಡುತ್ತಿದ್ದರು. ಆದರೆ, ಹೀಗೆ ಮಾಡುವಾಗ ಅವರಿಗೆ ತಮ್ಮ ವ್ಯಕ್ತಿತ್ವದ ವಿರೋಧಾಭಾಸವನ್ನೇ ಅವರು ಗಮನಿಸುತ್ತಿರಲಿಲ್ಲ. ತಮ್ಮ ನಿಲುವು ಯಾವುದೇ ಆಗಿರಲಿ, ಎಲ್ಲದಕ್ಕೂ ಅವರು ಮನಮುಟ್ಟುವಂಥ ಒಂದು ವಾದವನ್ನು ಮಂಡಿಸುತ್ತಿದ್ದರು. ಅವರು ಯಾವತ್ತೂ ಒಂದೇ ನಿಲುವಿಗೆ ಅಂಟಿಕೊಳ್ಳುತ್ತಿರಲಿಲ್ಲ. ಬದಲಿಗೆ, ಅಗತ್ಯ ಬಿದ್ದರೆ ಒಂದು ನಿಲುವನ್ನು ಬದಲಿಸುವ ಸ್ವಭಾವ ಮತ್ತು ಧೈರ್ಯ ಅವರಲ್ಲಿತ್ತು. ಈ ಗುಣ ಅವರಿಗೊಂದು ವಿಚಿತ್ರವಾದ ಪ್ರಭೆಯನ್ನು ತಂದಿತ್ತು. ಅವರ 'ಸಮಾಜವಾದ ಸಿದ್ಧಾಂತ'ಕ್ಕೆ ಸಂಬಂಧಿಸಿದಂತೆ ಇದನ್ನು ಇನ್ನಷ್ಟು ವಿವರವಾಗಿ ಹೇಳಬಹುದು.

ನೆಹರು ತಮ್ಮ ವಿದ್ಯಾರ್ಥಿದಿನಗಳಲ್ಲಿ ಲಂಡನ್‌ನಲ್ಲಿ ಓದುತ್ತಿದ್ದಾಗಲೇ ಒಂದು ಬೌದ್ಧಿಕ ಅಸ್ಮಿತೆಗಾಗಿ ಹುಡುಕಾಡುತ್ತಿದ್ದರು. ಆಗಲೇ ಅವರು ಸಮಾಜವಾದದ ಬಗ್ಗೆ ಬಹಳ ಉತ್ಸುಕರಾಗಿದ್ದರು. ೧೯೨೦ ಮತ್ತು ೧೯೩೦ರ ದಶಕಗಳಲ್ಲಿ ಅವರು ಸ್ವಯಂನಿರ್ದೇಶಿತ ಸಮಾಜವಾದಿಯಾಗಿದ್ದರು. ಆಗ ಅವರು ಒಲ್ಲದ ಮನಸ್ಸಿನ ಗಾಂಧೀವಾದಿಯಾಗಿದ್ದರು. ಆ

ದಿನಗಳಲ್ಲಿ ಅವರು ''ಭಾರತದಲ್ಲಿ ರಾಷ್ಟ್ರೀಯ ಚಳವಳಿಯು ಸಮಾಜವಾದದ ಜತೆಜತೆಯಲ್ಲೇ ಸಾಗಬೇಕು,'' ಎನ್ನುತ್ತಿದ್ದರು. ಹೀಗೆ ಸಮಾಜವಾದವನ್ನು ಪ್ರಬಲವಾಗಿ ಪ್ರತಿಪಾದಿಸುತ್ತಿದ್ದುದರಿಂದ ನೆಹರು ಅವರು ಎಡಪಂಥೀಯ ಕಾಂಗ್ರೆಸ್ಸಿಗರ ಪಾಲಿಗೆ ಕಣ್ಮಣಿಯಾದರು. ಆಗ ಅವರು ಸಮಾಜವಾದವನ್ನು ಅರ್ಥೈಸಿಕೊಂಡಿದ್ದ ವಿಧಾನ ಪ್ರತಿಭಾನ್ವಿತವಾಗಿತ್ತಾದರೂ ಅದು ಪುಸ್ತಕಗಳಿಂದ ಪಡೆದ ಅರಿವಿನಿಂದಲೇ ಆವರಿಸಿಕೊಂಡಿತ್ತು ಎನ್ನುವುದುನಿಜ. ಅದು ಆದರ್ಶದ ಅತಿರೇಕದಿಂದ ಕೂಡಿದ್ದು, ಆಕರ್ಷಕವಾಗಿತ್ತು. ಉತ್ಪಾದನೆ ಮತ್ತು ಹಂಚಿಕೆಗಳ ರಾಷ್ಟ್ರೀಕರಣಕ್ಕೆ ಸಿಕ್ಕಾಬಟ್ಟೆ ಒತ್ತು ಕೊಡುತ್ತಿದ್ದ ಸಮಾಜವಾದವು 'ಲೆನಿನ್‌ವಾದಿ'ಯೂ ಆಗಿತ್ತು. ಜಗತ್ತಿನ ಉಳಿದ ಕಡೆಗಳಲ್ಲಾದಂತೆಯೇ ಯೂರೋಪಿನಲ್ಲೂ ಭವಿಷ್ಯದಲ್ಲಿ ಇದೊಂದೇ ಆಯ್ಕೆ ಉಳಿದಿರುವುದು ಎನ್ನುವುದು ಅವರ ಸಿದ್ಧಾಂತವಾಗಿತ್ತು. ಒಟ್ಟಿನಲ್ಲಿ ಅದು ಬಡವರ, ತುಳಿತಕ್ಕೆ ಒಳಗಾದವರ ಮತ್ತು ಶೋಷಿತರ ಕೂಗಾಗಿತ್ತು. ಇದನ್ನೆಲ್ಲ ಗಮನಿಸಿದ ನೆಹರು, ದೇಶಕ್ಕೆ ಸ್ವಾತಂತ್ರ್ಯ ಸಿಕ್ಕೊಡನೆಯೇ ತಾವು ಕೊಡಲಿರುವ 'ಅತಿಯಾದ ಸಮಾಜವಾದ'ವನ್ನು (ಓವರ್‌ಡೋಸ್ ಆಫ್ ಸೋಷಿಯಲಿಸಂ) ಒಪ್ಪಿಕೊಳ್ಳುವ ಹಾಗೆ ಕಾಂಗ್ರೆಸ್ಸಿಗರನ್ನೂ ಸಾರ್ವಜನಿಕರನ್ನೂ ಸಜ್ಜುಗೊಳಿಸುವುದನ್ನು ಒಂದು ವ್ರತವಂತೆ ಸ್ವೀಕರಿಸಿದರು. ಆದರೂ ಅವರು, ದೇಶಕ್ಕೆ ಸ್ವಾತಂತ್ರ್ಯ ಬಂದಾಗ ದೇಶವಾಸಿಗಳನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ಸಮಾಜವಾದದ ಹೆಸರನ್ನಾಗಲಿ, ತಮ್ಮ ಆಯ್ಕೆಯ ಆರ್ಥಿಕ ನೀತಿಯನ್ನಾಗಲಿ ಹೆಸರಿಸಲಿಲ್ಲ. ಇಷ್ಟೇ ಅಲ್ಲ, ಸಂವಿಧಾನದ ಪೀಠಿಕೆಯಲ್ಲಿ ಕೂಡ 'ಸಮಾಜವಾದ' ಎಲ್ಲೂ ಕಾಣಿಸಿಕೊಳ್ಳಲಿಲ್ಲ!

ಆಮೇಲೆ ಅವರು ದೇಶದ ಮೊದಲ ಪ್ರಧಾನಿಯಾಗಿ ಚುಕ್ಕಾಣಿ ಹಿಡಿದರಲ್ಲವೇ? ಆಗಂತೂ ಅವರು ಉದ್ಯಮರಂಗಕ್ಕೆ ಸಂಬಂಧಿಸಿದಂತೆಯಾಗಲಿ, ಕೃಷಿರಂಗಕ್ಕೆ ಸಂಬಂಧಿಸಿದಂತೆಯಾಗಲಿ ಆಸ್ತಿಪಾಸ್ತಿಗಳ ರಾಷ್ಟ್ರೀಕರಣದ ಮಾತನ್ನೇ ಆಡಲಿಲ್ಲ. ಬದಲಿಗೆ ಅವರು ಆರ್ಥಿಕ ಬೆಳವಣಿಗೆ ಮತ್ತು ಉತ್ಪಾದನೆಯಲ್ಲಾಗಬೇಕಾದ ಹೆಚ್ಚಳಗಳ ಬಗ್ಗೆ ಮಾತನಾಡಲು ಶುರು ಮಾಡಿದರು. ನೆಹರು ಅವರು 'ಸಮಾಜವಾದವೇ ದೇಶದ ಅಧಿಕೃತ ನೀತಿ' ಎಂದು ಘೋಷಿಸಲು ಹೀಗೆ ಹಿಂದೇಟು ಹಾಕತೊಡಗಿದ್ದನ್ನು ಕಂಡು, ಅವರ ಸಮಾಜವಾದಿ ಸ್ನೇಹಿತರು ಮತ್ತು ಕಾಂಗ್ರೆಸ್ಸಿಗರು ದಿಗ್ಭ್ರಾಂತರಾದರು. ನೆಹರು ಅವರ ಈ ನೀತಿಯನ್ನು ಪ್ರತಿಭಟಿಸಿ ಅವರೆಲ್ಲರೂ ೧೯೫೫ರ ಜನವರಿಯಲ್ಲಿ ಮದ್ರಾಸ್ ಹತ್ತಿರದ ಆವಡಿಯಲ್ಲಿ ಸೇರಿದ್ದ ಕಾಂಗ್ರೆಸ್ ಸಮಾವೇಶದಿಂದ ಹೊರನಡೆದರು. ಆಗ ಕಾಂಗ್ರೆಸ್ ಪಕ್ಷವು ನೆಹರು ಸೂಚನೆಯ ಮೇರೆಗೆ 'ಸಮಾಜವಾದಿ ಮಾದರಿಯ ಸಮಾಜ ನಿರ್ಮಾಣವೇ ನಮ್ಮ ಗುರಿ' ಎಂಬ ತನ್ನ ಹೆಸರಾಂತ ನಿರ್ಣಯವನ್ನು ಅಂಗೀಕರಿಸಿತು. ಈ ನಡೆಯು ನೆಹರು ಅವರಿಗೆ ಚುನಾವಣೆಯಲ್ಲಿ ಲಾಭ ತಂದುಕೊಟ್ಟಿತು ಎನ್ನುವುದು ಸುಳ್ಳಲ್ಲ. ಆದರೆ ಇದರಿಂದಾಗಿ ದೇಶದ ಎಡಪಂಥೀಯರು ಕಕ್ಕಾಬಿಕ್ಕಿಯಾಗಿ ಹೋದರು. ಆಗ ನಿಜವಾದ ಸಮಾಜವಾದಿಗಳು ಸಂಸತ್ತಿನಲ್ಲಿ ಪ್ರತಿಪಕ್ಷಗಳ ಸಾಲಿನಲ್ಲಿದ್ದರೆ, 'ಸಮಾಜವಾದ' ಎನ್ನುವ ಪದವನ್ನು ಕೇಳಿಕೇಳಿ ಮಂಕಾಗಿದ್ದವರು ಆಡಳಿತ ಪಕ್ಷದ ಸಾಲಿನಲ್ಲಿದ್ದರು.

ನೆಹರು ಅವರು ಸಿದ್ಧಾಂತದ ಆಕರ್ಷಣೆ ಮತ್ತು ಅಧಿಕಾರ ತಂದೊಡ್ಡುವ ಅನಿವಾರ್ಯತೆಯ ನಡುವೆ ಸಮತೋಲನ ಸಾಧಿಸಲು ಸಾಕಷ್ಟು ಹೆಣಗಾಡುತ್ತಿದ್ದರು. ಸಮಾಜವಾದದ ಕೆಲವು ಉದ್ಧಟ ಆಯಾಮಗಳಿಂದ ತಮ್ಮನ್ನು ತಾವು ಬಿಡಿಸಿಕೊಳ್ಳಲು ಅವರು ಶಕ್ತಿಮೀರಿ ಪ್ರಯತ್ನಿಸುತ್ತಿದ್ದರು.

ಇದರ ಭಾಗವಾಗಿಯೇ ಅವರು ಪುನಃಪುನಃ 'ಸಮಾನ ಅವಕಾಶ,' 'ಪ್ರತಿಯೊಬ್ಬ ಗಂಡು, ಹೆಣ್ಣು ಮತ್ತು ಮಗು,' 'ಎಗೆಲ್ ಪ್ರಣೀತ ಸಮಾಜ,' 'ನಿರುದ್ಯೋಗದ ಮೂಲೋತ್ಪಾಟನೆ,' 'ಮಧ್ಯಮ ಮಾರ್ಗ,' 'ಮೂರನೇ ಹಾದಿ,' 'ಪ್ರಜಾಸತ್ತಾತ್ಮಕ ಸಮಾಜವಾದ,' 'ಕಲ್ಯಾಣ ರಾಜ್ಯ,' 'ಸಾಮಾಜಿಕ ಬದಲಾವಣೆ,' 'ವಿಶಾಲ ಧೋರಣೆ,' 'ಮೂಲಧೋರಣೆ,' ಮುಂತಾದ ವರ್ಣರಂಜಿತ ಪದಪುಂಜಗಳ ಮೂಲಕ ತಮ್ಮ ಸಿದ್ಧಾಂತವನ್ನು ಮಂಡಿಸುತ್ತಿದ್ದರು. ಅವರು ಹೀಗೆ ಏನೇನೋ ಕಸರತ್ತುಗಳನ್ನು ಮಾಡುತ್ತಿದ್ದರೂ ಸಮಾಜವಾದ ಸಾಗುತ್ತಿದ್ದ ದಿಸೆಯಲ್ಲಿ ಮಾತ್ರ ಕಣ್ಣಿಗೆ ಕಾಣುವಂಥ ಯಾವ ಬದಲಾವಣೆಯೂ ಬರಲಿಲ್ಲ. ಅಶೋಕ್ ಮೆಹ್ತಾ ಅವರು ಹೇಳಿರುವಂತೆ ''ಜವಾಹರಲಾಲ್ ನೆಹರು ಪಾಲಿಗೆ ಸಮಾಜವಾದವು ತಾವು ಜಾರಿಗೆ ತರಬೇಕಾದ ಸಿದ್ಧಾಂತವಾಗಿರಲಿಲ್ಲ, ಬದಲಿಗೆ ಅದು, ಅವರಿಗೆ ಜನಪ್ರಿಯತೆ ಗಿಟ್ಟಿಸಿಕೊಳ್ಳಲು ನೆರವಾಗುತ್ತಿದ್ದ ಘೋಷಣೆ ಮಾತ್ರ'' ಆಗಿತ್ತು. ಇಲ್ಲಿ ಪ್ರೊ.ಹಿರೇನ್ ಮುಖರ್ಜಿ ಹೇಳಿರುವಂತೆ ''ಭುವನೇಶ್ವರದಲ್ಲಿ ನಡೆದ ಕಾಂಗ್ರೆಸ್‌ನ ಅಧಿವೇಶನದಲ್ಲಿ ಸಮಾಜವಾದಿ ಸಿದ್ಧಾಂತವನ್ನು ಜಾರಿಗೆ ತರುವುದಾಗಿ ಹೇಳುವ ಬಹು ಉದಾರವಾದ ಮಾತುಗಳನ್ನು ಆಡಲಾಯಿತಷ್ಟೆ. ಆದರೆ ಆ ಅಧಿವೇಶನದಲ್ಲಿ ಅಂಗೀಕರಿಸಿದ ನಿರ್ಣಯಗಳಲ್ಲಾಗಲಿ, ಅಲ್ಲಿ ಮಾಡಿದ ಭಾಷಣಗಳಲ್ಲಾಗಲಿ ಇದಕ್ಕೆ ಅಗತ್ಯವಾದ ಬೌದ್ಧಿಕ ಸ್ಪರ್ಶವಾಗಲಿ, ಕ್ರಿಯಾಯೋಜನೆಯಾಗಲಿ ಲವಲೇಶವೂ ಇರಲಿಲ್ಲ.'' ಅಂದಹಾಗೆ, ಭುವನೇಶ್ವರದಲ್ಲಿ ನಡೆದ ಈ ಅಧಿವೇಶನವು ನಡೆದಿದ್ದು ಮದ್ರಾಸ್ ಬಳಿಯ ಆವಡಿ ಅಧಿವೇಶನ ನಡೆದ ಒಂಬತ್ತು ವರ್ಷಗಳ ನಂತರ! ಇದಕ್ಕೂ ಕೆಲದಿನಗಳ ಮೊದಲು ಲೋಕಸಭೆಯಲ್ಲಿ ಮಾತನಾಡಿದ್ದ ನೆಹರು ''ಪ್ರತಿಪಕ್ಷಗಳ ಸಾಲಿನಲ್ಲಿರುವ ಗೌರವಾನ್ವಿತ ಸದಸ್ಯರ ಪೈಕಿ ಯಾರಾದರೂ ನಮ್ಮ ಸರಕಾರವು ಸಮಾಜವಾದವನ್ನು ಕ್ಷಿಪ್ರಗತಿಯಲ್ಲಿ ಅನುಷ್ಠಾನಗೊಳಿಸುತ್ತಿಲ್ಲ ಎಂದು ಟೀಕಿಸಿದರೆ ಅದನ್ನು ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ನಿಜ, ನಾವು ನಾನಾ ಕಾರಣಗಳಿಂದಾಗಿ ಈ ವಿಷಯದಲ್ಲಿ ಮಂದಗತಿಯಲ್ಲಿದ್ದೇವೆ,'' ಎಂದು ವಿನಯದಿಂದ ಒಪ್ಪಿಕೊಂಡಿದ್ದರು. ಅಂದಹಾಗೆ, ನೆಹರು ಅವರಿಗೆ ಲಕ್ವಾ ಹೊಡೆದಿದ್ದು ಈ ಭುವನೇಶ್ವರ ಅಧಿವೇಶನದಲ್ಲೇ. ಇದಾದ ನಂತರ ಅವರು ಚೇತರಿಸಿಕೊಳ್ಳಲೇ ಇಲ್ಲ. ೧೯೬೨ರ ಅಕ್ಟೋಬರ್‌ನಲ್ಲಿ ಚೀನಾ ನಡೆಸಿದ ದಾಳಿಯು ನೆಹರು ಅವರ ನೀತಿಗಳಿಗೆ ಬಹುದೊಡ್ಡ ಹಿನ್ನಡೆ ತಂದಿತು ಎನ್ನುವುದು ನಿಜ. ಆದರೆ, ಸಮಾಜವಾದವನ್ನು ಅನುಷ್ಠಾನಕ್ಕೆ ತರಲಾಗದ ಅವರ ಈ ಸೋಲು ಕೂಡ ಕಮ್ಮಿಯೇನಲ್ಲ.

ಸಮಾಜವಾದದ ವಿಷಯದಲ್ಲಿ ತಮಗೆ ಸೋಲುಂಟಾಗುವುದು ಕಟ್ಟಿಟ್ಟ ಬುತ್ತಿ ಎನ್ನುವುದು ನೆಹರೂ ಅವರಿಗೂ ಗೊತ್ತಿತ್ತು. ಆದರೂ ಅವರು, ''ಭಾರತವಷ್ಟೇ ಅಲ್ಲ, ಇಡೀ ಜಗತ್ತಿನ ಮುಂದಿರುವ ಏಕೈಕ ಆಯ್ಕೆಯೆಂದರೆ ಸಮಾಜವಾದ ಒಂದೇ,'' ಎಂಬ ನಂಬಿಕೆಗೆ ಅಂಟಿಕೊಂಡಿದ್ದರು. ತಾವು ಕೊನೆಯುಸಿರೆಳೆಯುವ ಕೇವಲ ಆರು ತಿಂಗಳ ಮೊದಲೂ ಲೋಕಸಭೆಯಲ್ಲಿ ಮಾತನಾಡುತ್ತ ಅವರು ''ಸಮಾಜವಾದಿ ಮಾರ್ಗ ನಮಗೆ ಅನಿವಾರ್ಯ. ಇದನ್ನು ಬಿಟ್ಟು ಬೇರ್‍ಯಾವ ದಾರಿಯೂ ನಮ್ಮ ಮುಂದಿಲ್ಲ. ನಾವೇನಾದರೂ ಬಂಡವಾಳಶಾಹಿ ಮಾರ್ಗವನ್ನು ತುಳಿದರೆ ಅದರಿಂದ ಖಂಡಿತವಾಗಿಯೂ ನಮ್ಮ ಉದ್ಧಾರ ಸಾಧ್ಯವಿಲ್ಲ ಎನ್ನುವುದನ್ನು ನಾನು ತುಂಬಾ ವಿಶ್ವಾಸದಿಂದ ಈ ಸದನಕ್ಕೆ ಹೇಳುತ್ತಿದ್ದೇನೆ,'' ಎಂದಿದ್ದರು. ಇದಕ್ಕೂ ನಾಲ್ಕು ತಿಂಗಳು ಮೊದಲು ಕೂಡ ಅವರು ''ಸಮಾಜವಾದವನ್ನು ಬಿಟ್ಟು ಬೇರೆನ್ನೊಂದು ಆಯ್ಕೆ ನಮ್ಮ

ಮುಂದಿಲ್ಲ ಎನ್ನುವುದು ನನಗೆ ಮನದಟ್ಟಾಗಿದೆ. ಯಾವ ಶಕ್ತಿಯೂ ಸಮಾಜವಾದದ ಕಡೆಗಿನ ದೇಶದ ನಾಗಾಲೋಟವನ್ನು ನಿಲ್ಲಿಸಲಾಗದು,'' ಎಂದಿದ್ದರು. ೧೯೫೬ರ ಏಪ್ರಿಲ್‌ನಲ್ಲಿ ಸ್ವತಃ ನೆಹರು ಅವರೇ ಆಡಿದ್ದ ಮಾತುಗಳೊಂದಿಗೆ ಇದನ್ನು ನೆನಪು ಮಾಡಿಕೊಳ್ಳಬಹುದು. ಆಗ ಅವರು ''ನಮಗೀಗ ಸಮಾಜವಾದಿ ಮಾದರಿಯ ಸಮಾಜ ಬೇಕಾಗಿದೆ. ಒಂದೇ ಒಂದು ಪದದಲ್ಲಿ ಹೇಳುವುದಾದರೆ ಅದನ್ನು 'ಸಮಾಜವಾದ' ಎನ್ನಬಹುದು. ಸಮಾಜವಾದವನ್ನು ಬಿಟ್ಟು ಬೇರೆ ಇನ್ನೇನನ್ನೋ ಕಲ್ಪಿಸಿಕೊಳ್ಳಬೇಡಿ. ಈ ಸಮಾಜವಾದಿ ಮಾದರಿಯು ಸಮಾಜವಾದವಲ್ಲದೆ ಬೇರೇನೂ ಅಲ್ಲ'' ಎಂದಿದ್ದರು.

ವಿಚಿತ್ರವೆಂದರೆ, ಅವರು ''ಸಮಾಜವಾದಿ ಮಾದರಿಯ ಸಮಾಜಕ್ಕೂ ಸಮಾಜವಾದಕ್ಕೂ ಯಾವ ಸಂಬಂಧವೂ ಇಲ್ಲ!'' ಎಂದು ಕೂಡ ಹೇಳಿರಬಹುದು. ಏಕೆಂದರೆ, ಅವರು ಸಮಾಜವಾದದ ಪರಿಕಲ್ಪನೆ ಮತ್ತು ಅದರ ವಾಸ್ತವಗಳ ನಡುವೆ ನಜ್ಜುಗುಜ್ಜಾಗಿದ್ದರು. ನೆಹರು ಬಗ್ಗೆ ತಲಸ್ಪರ್ಶಿಯಾಗಿ ತಿಳಿದುಕೊಂಡಿದ್ದ ಮತ್ತು ಅವರ ಬಗ್ಗೆ ಸಹಾನುಭೂತಿಯನ್ನೂ ಹೊಂದಿದ್ದ ಅವರ ಜೀವನಚರಿತ್ರಕಾರರಾದ ರಷ್ಯಾದ ಡಾ.ಒರೆಸ್ಟ್ ಮಾರ್ಟಿಶಿನ್ ಹೇಳುವ ಪ್ರಕಾರ ''೧೯೨೦ರ ದಶಕದ ಉತ್ತರಾರ್ಧ ಮತ್ತು ೧೯೩೦ರ ದಶಕದ ಪೂರ್ವಾರ್ಧಗಳಲ್ಲಿ ಇದ್ದ ನೆಹರು ಅವರು ೧೯೪೦ರಿಂದ ೧೯೬೦ ದಶಕಗಳಲ್ಲಿ ಕಂಡುಬಂದ ನೆಹರು ಅವರ ಪ್ರತಿವಾದಿಯಾಗಿದ್ದರು.'' ಮಾರ್ಟಿಶಿನ್ ಬರೆದಿರುವ ಅತ್ಯಂತ ಮುಖ್ಯವಾದ ನೆಹರು ಜೀವನಚರಿತ್ರೆಗೆ ಮುನ್ನುಡಿ ಬರೆದಿರುವ ಪ್ರೊ.ಆರ್. ಉಲ್ಯನೋವ್ಸ್ಕಿ ಅವರು ಅತ್ಯಂತ ಸ್ಪಷ್ಟವಾಗಿ ''ನೆಹರು ಅವರು ಪ್ರಧಾನಮಂತ್ರಿಯಾದ ಕೂಡಲೇ ಅವರ ರಾಜಕೀಯ ಬದುಕಿನಿಂದ 'ಸಮಾಜವಾದ' ಎನ್ನುವ ಪದ ಬಿದ್ದುಹೋಯಿತು. ೧೯೫೦ರ ದಶಕದಲ್ಲಿ ಪುನಃ ಸಮಾಜವಾದದ ಘೋಷಣೆ ಕೇಳಿಬರತೊಡಗಿದರೂ ಅದರ ದೃಷ್ಟಿಯೇ ಬೇರೆಯಾಗಿತ್ತು. ಅವು ಕ್ರಾಂತಿಯ ಉದ್ದೇಶವನ್ನಾಗಲಿ, ರಾಷ್ಟ್ರೀಯ-ಪ್ರಜಾಸತ್ತಾತ್ಮಕ ಉದ್ದೇಶವನ್ನಾಗಲಿ ಹೊಂದಿರಲಿಲ್ಲ. ಬದಲಿಗೆ ಅವೆಲ್ಲವೂ ಸುಧಾರಣಾವಾದಿ ಉದ್ದೇಶದಿಂದ ಕೂಡಿದ್ದವು.'' ಎಂದು ಹೇಳಿದ್ದಾರೆ. ಜತೆಗೆ ಅವರು ''ಸ್ವತಃ ತಾವೇ ಒಂದು ಕಾಲದಲ್ಲಿ ಪ್ರಬಲವಾಗಿ ಪ್ರತಿಪಾದಿಸಿದ ತತ್ತ್ವದಿಂದ ನೆಹರು ಎಷ್ಟು ಸಲೀಸಾಗಿ ಹಿಂದೆ ಸರಿದರು ಎಂದು ಅವರನ್ನು ಜರೆಯುವುದು ಸುಲಭ. ಇಡಿಯಾಗಿ ನೋಡಿದರೆ, ಈ ಟೀಕೆಯಲ್ಲಿ ತಪ್ಪೇನಿಲ್ಲ. ಆದರೆ ಅದಷ್ಟೇ ನಿಜವಲ್ಲ...'' ಎಂದೂ ಬರೆದಿದ್ದಾರೆ.

ಸಮಾಜವಾದಿ ದೇಶವಾದ ರಷ್ಯಾದ ಈ ಇಬ್ಬರು ಅಭಿಮಾನಿಗಳಿಗೆ ಕಂಡಂತೆಯೇ ಇನ್ನಿತರರಿಗೂ ನೆಹರು ಒಂದು ಒಗಟಾಗಿ ಕಂಡಿದ್ದಾರೆ. ಅವರ ಪ್ರಕಾರ, ''ಇಡೀ ಭಾರತ ದೇಶವೇ ಒಂದು ಮಹಾಒಗಟು. ನೆಹರು ಈ ಭಾರತವನ್ನೇ ಪ್ರತಿನಿಧಿಸುತ್ತಾರೆ.'' ನೆಹರು ಅವರ ೧೦೦ನೇ ಹುಟ್ಟುಹಬ್ಬದ ದಿನವಾದ ೧೯೮೮ರ ನವೆಂಬರ್ ೧೪ರಂದು 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯಲ್ಲಿ ಬಂದಿರುವ ಪ್ರಗಲ್ಭವಾದ ಸಂಪಾದಕೀಯದಲ್ಲಿ ಕೂಡ ನೆಹರು ಅವರ ನೀತಿಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ಇರುವ ಕಷ್ಟಗಳನ್ನು ಪ್ರಸ್ತಾಪಿಸಿದೆ. ಅದರಲ್ಲಿ ''ಆದರ್ಶಗಳಿಂದಲೇ ತುಂಬಿರುವ ಕ್ರಾಂತಿಕಾರಕತೆ ಮತ್ತು ಕಟುವಾಸ್ತವಗಳ ನಡುವೆ ಯಾವುದಾದರೂ ಒಂದನ್ನು ಆರಿಸಿಕೊಳ್ಳುವ ಪ್ರಮೇಯ ಬಂದರೆ ನೆಹರು ಅವರು ಅನಿವಾರ್ಯವಾಗಿ ಎರಡನೆಯದನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದರು. ೧೯೨೦ರ ದಶಕದಲ್ಲಿ ನಡೆದ ಚೌರಿಚಾರಾ ಘಟನೆಯ ನಂತರ

ಮಹಾತ್ಮ ಗಾಂಧೀಜಿಯವರು ಬ್ರಿಟೀಷರ ವಿರುದ್ಧದ ಅಸಹಕಾರ ಚಳವಳಿಯನ್ನು ಹಿಂತೆಗೆದುಕೊಳ್ಳುವಂತೆ ಕರೆ ಕೊಟ್ಟಾಗಲೂ ನೆಹರೂ ಅವರಿಗೆ ಅದು ಒಪ್ಪಿಗೆ ಇರಲಿಲ್ಲ. ಆದರೂ ಅವರು ಅನಿವಾರ್ಯವಾಗಿ ಮಹಾತ್ಮ ಗಾಂಧೀಜಿಯವರ ನಾಯಕತ್ವಕ್ಕೆ ತಲೆಬಾಗಿ ನಡೆದುಕೊಂಡರು. ಕಾಂಗ್ರೆಸ್ ಪಕ್ಷದಲ್ಲಿದ್ದ ಸಮಾಜವಾದಿಗಳು ಮತ್ತು ಗಾಂಧೀಜಿಯನ್ನು ಯಾವಾಗಲೂ ಕಟುವಾಗಿ ಟೀಕಿಸುತ್ತಿದ್ದ ಕಮ್ಯುನಿಸ್ಟರು ಮಾಡುತ್ತಿದ್ದ ಟೀಕೆಗಳನ್ನು ಅವರು ಎಷ್ಟೋ ಸಲ ಒಪ್ಪಿಕೊಳ್ಳುತ್ತಿದ್ದರು. ಆದರೂ ಅವರು ಗಾಂಧೀಜಿಯವರ ವಿಚಾರಕ್ಕೆ ಸಂಬಂಧಿಸಿದಂತೆ ಅಪ್ಪಿತಪ್ಪಿಯೂ ಸಮಾಜವಾದಿಗಳ ಜತೆಯಾಗಲಿ, ಕಮ್ಯುನಿಸ್ಟರ ಜತೆಯಾಗಲಿ ಕೈಗೂಡಿಸಲಿಲ್ಲ...'' ಎಂದು ಹೇಳಲಾಗಿದೆ. ಆದರೆ, ಈ ಸಂಪಾದಕೀಯ ಇಷ್ಟಕ್ಕೇ ನಿಂತಿಲ್ಲ. ಅದು ಹಾಗೆಯೇ ಮುಂದುವರಿದು ''ಅಸಾಂಗತ್ಯಗಳ ದೇಶವಾಗಿರುವ ಭಾರತಕ್ಕೆ ಸಂಬಂಧಿಸಿದಂತೆ ನೆಹರು ಅವರು ಒಂದಕ್ಕೊಂದು ತದ್ವಿರುದ್ಧವಾಗಿದ್ದ ಎಳೆತ-ಸೆಳೆತಗಳಲ್ಲಿ ಸಿಲುಕಿ ಹಾಕಿಕೊಂಡು, ಅದರಿಂದ ತಾವು ಬಯಲಾದರು. ಅವರೇನೂ ಪ್ರಾಮಾಣಿಕವಾದ ವ್ಯಕ್ತಿಯಾಗಿರಲಿಲ್ಲ. ಏಕೆಂದರೆ, ಒಂದು ಸಮಾಜವಾಗಿ ಇಡೀ ಭಾರತವೇ ಪ್ರಾಮಾಣಿಕವಾಗಿಲ್ಲ'' ಎಂದೂ ಭಾವೋತ್ತೇಜಕವಾಗಿ ವಿಶ್ಲೇಷಿಸಿದೆ.

ಬಹುಶಃ, ತಮಗೆ ಸಂಬಂಧಿಸಿದ ಈ ವಿಶ್ಲೇಷಣೆಯನ್ನು ನೆಹರು ಅವರು ಇದ್ದಿದ್ದರೆ ಅವರೇನೂ ಅಲ್ಲಗಳೆಯುತ್ತಿರಲಿಲ್ಲ ಎನಿಸುತ್ತದೆ. ಏಕೆಂದರೆ, ಅಹಮದ್‌ನಗರದ ಕೋಟೆಯಲ್ಲಿದ್ದ ಕಾರಾಗೃಹದಲ್ಲಿ ತಾವು ಬಂಧಿಗಳಾಗಿದ್ದಾಗ ಬರೆದಿರುವ ದಿನಚರಿಯಲ್ಲಿ ಸ್ವತಃ ನೆಹರು ಅವರೇ ಈ ಧಾಟಿಯಲ್ಲಿ ಕೆಲವು ಸಾಲುಗಳನ್ನು ಬರೆದುಕೊಂಡಿದ್ದಾರೆ. ಆಗ ಬ್ರಿಟೀಷರ ವಿರುದ್ಧ ನಡೆಯುತ್ತಿದ್ದ 'ಕ್ವಿಟ್ ಇಂಡಿಯಾ' ಚಳವಳಿಯನ್ನು ನಿಲ್ಲಿಸಿ, ಮಹಾತ್ಮ ಗಾಂಧೀಜಿಯವರು ಬ್ರಿಟೀಷ್ ವೈಸ್‌ರಾಯ್ ಅವರನ್ನು ಭೇಟಿ ಮಾಡಲು ಹೊರಟಿದ್ದಾರೆಂಬ ವಿಷಯ ತಿಳಿದಾಗ ನೆಹರು ಅವರು ಅದುವರೆಗೂ ತಾವು ಅದುಮಿಟ್ಟುಕೊಂಡಿದ್ದ ಭಾವನೆಗಳಿಗೆ ಅಕ್ಷರರೂಪ ಕೊಟ್ಟಿದ್ದಾರೆ. ಅವರ ಆಗಿನ ದಿನಚರಿಯಲ್ಲಿರುವ ಸಾಲುಗಳು ಹೀಗಿವೆ-

''ಗಾಂಧೀಜಿಯವರಿಗೆ ಹಲವು ದೊಡ್ಡಗುಣಗಳಿವೆ ಎನ್ನುವುದು ನಿಜ. ಆದರೆ ತಮ್ಮ ಚಂಚಲತೆ ಮತ್ತು ಪದೇಪದೇ ತೀರ್ಮಾನಗಳನ್ನು ಬದಲಿಸುವ ಮೂಲಕ ಅಂತಿಮವಾಗಿ ಅವರು ತಾವೊಬ್ಬ ದುರ್ಬಲ ನಾಯಕ ಎಂಬುದನ್ನು ಸಾಬೀತುಪಡಿಸಿದ್ದಾರೆ. ಯುದ್ಧ ಶುರುವಾದ ಕಳೆದ ನಾಲ್ಕು ವರ್ಷಗಳಲ್ಲಿ ಅವರು ಅದೆಷ್ಟೊಂದು ಸಲ ಹೀಗೆಯೇ ತಮ್ಮ ಮನಸ್ಸನ್ನು ಬದಲಾಯಿಸಿದ್ದಾರಲ್ಲವೇ? ಇದು ನಿಜಕ್ಕೂ ದುಃಖದ ವಿಷಯ. ಇದು ಬಹುದೊಡ್ಡ ವ್ಯಕ್ತಿಯೊಬ್ಬನ ಅಧಃಪತನವಷ್ಟೆ. ಅವರ ವ್ಯಕ್ತಿತ್ವದ ದೊಡ್ಡತನ ಇನ್ನೂ ಹಲವು ರೂಪಗಳಲ್ಲಿ ಉಳಿದುಕೊಂಡಿರಬಹುದು. ಆದರೆ ಅವರು ಸರಿಯಾದ ದಾರಿಯಲ್ಲಿ ಸಾಗುತ್ತಿದ್ದಾರೆ ಎನ್ನುವುದಕ್ಕೆ ಪುರಾವೆಗಳಾದ ವ್ಯಾವಹಾರಿಕ ವಿವೇಕವಾಗಲಿ, ಪ್ರತ್ಯಕ್ಷಜ್ಞಾನದ ಅಂತರ್ಬೋಧೆಯಾಗಲಿ ಈಗ ಕಾಣುತ್ತಿಲ್ಲ.''

೧೯೪೪ರ ಆಗಸ್ಟ್ ೫ರಂದು ಕೂಡ ನೆಹರು ತಮ್ಮ ದಿನಚರಿಯಲ್ಲಿ ಗಾಂಧೀಜಿಯವರ ಬಗೆಗಿನ ತಮ್ಮ ಮಾತುಗಳನ್ನು ಇನ್ನೂ ತೀಕ್ಷ್ಣವಾಗಿ ಬರೆದಿದ್ದಾರೆ. ಈ ಸಾಲುಗಳನ್ನು ಬರೆದಾಗ ಕೂಡ ಅವರು ಇನ್ನೂ ಜೈಲಿನಲ್ಲೇ ಇದ್ದರು. ಆ ಸಾಲುಗಳನ್ನು ನೋಡಿ-

''ನನ್ನ ಮನಸ್ಸೀಗ ೧೯೩೬-೩೭ರಿಂದ ಈಗಿನವರೆಗೂ ನನ್ನ ಮತ್ತು ಗಾಂಧೀಜಿಯ ನಡುವೆ ಇರುವ ಭಿನ್ನಮತಗಳನ್ನು ನೆನಪಿಸಿಕೊಂಡು ಹಿಂದಕ್ಕೆ ಹೋಗುತ್ತಿದೆ. ಮತ್ತೀಗ ಏನಾಗುತ್ತಿದೆ? ಇದೇನಿದು, ಕೊನೆಯಿಲ್ಲದ ವಿವರಣೆಗಳನ್ನು ನೀಡುವುದು ಮತ್ತು ಎಲ್ಲವನ್ನೂ ತಗ್ಗಿಸುವುದು, ವೈಸ್‌ರಾಯ್ ಮತ್ತು ಜಿನ್ನಾ ಎದುರು ದೈನ್ಯವಾಗಿ ನಿಲ್ಲುವುದು? ಇದೆಲ್ಲ ಸತ್ಯಾಗ್ರಹದ ಉಪಾಯವೇ ಇರಬಹುದು. ಇದು ನಿಜವೇ ಆಗಿದ್ದಲ್ಲಿ, ನನಗೆ ಇದು ಒಗ್ಗುವುದಿಲ್ಲ. ಈ ಉಪಾಯವು ಘನತೆಗೆ ಕೂಡ ಕುಂದು ತರುವಂತಹುದು... ಬಹಳ ದೊಡ್ಡದೊಡ್ಡ ಮಾತುಗಳನ್ನಾಡುವುದು, ನಂತರ ಅದನ್ನು ಮಾಫು ಮಾಡುವುದು, ವಿವರಣೆ ಕೊಡುವುದು ಮತ್ತು ದೈನ್ಯತೆಯಿಂದ ನಿಲ್ಲುವುದು.''

''ಜೈಲಿನಿಂದ ಬಿಡುಗಡೆಯಾದ ನಂತರ ನಾನು ಏನು ಮಾಡುತ್ತೇನೆನ್ನುವುದು ನನಗೆ ಗೊತ್ತಿಲ್ಲ. ಆದರೆ ನಾನು ಈ ಬಗೆಯ ಅಸ್ಪಷ್ಟ ಮತ್ತು ನಮ್ಮ ಘನತೆಗೆ ತಕ್ಕದಲ್ಲದ ಚಿಂತನೆಗಳಿಂದ ದೂರವಾಗಲೇಬೇಕು. ಅಂದರೆ, ಗಾಂಧೀಜಿಯ ಜೊತೆಗಿನ ನನ್ನ ಸಂಬಂಧವನ್ನು ಕಡಿದು ಕೊಳ್ಳಬೇಕೆಂದೇ ಅರ್ಥ. ಜೈಲಿನಿಂದ ಬಿಡುಗಡೆಯಾದರೆ ತಕ್ಷಣವೇ ಹೋಗಿ ಗಾಂಧೀಜಿಯನ್ನು ನೋಡುವ ಆಸೆಯಾಗಲಿ, ಅವರೊಂದಿಗೆ ಏನನ್ನಾದರೂ ಚರ್ಚಿಸುವ ಬಯಕೆಯಾಗಲಿ ನನಗಿಲ್ಲ. ಅಂತಹ ಚರ್ಚೆಗಳು ನಮ್ಮನ್ನು ಎಲ್ಲಿಗೆ ಕರೆದುಕೊಂಡು ಹೋಗುತ್ತವೆ?''

ನೆಹರು ಅವರ ಈ ಸ್ವಗತದ ಚೆಲುವು ''ಏನೇ ಆಗಲಿ, ನಾನು ಅವರನ್ನು (ಗಾಂಧೀಜಿಯನ್ನು) ನೋಡಬೇಕಾಗುತ್ತದೆ,'' ಎಂಬ ಮುಂದಿನ ಇನ್ನೊಂದು ಸಣ್ಣ ವಾಕ್ಯದಲ್ಲಿದೆ. ಅವರ ಈ ಮಾತುಗಳಲ್ಲಿರುವ ಭಾವನೆಗಳು, ಅವರ ಈ ದೃಷ್ಟಿ ನೆಹರು-ಗಾಂಧಿ ಬಾಂಧವ್ಯಕ್ಕೆ ಸಂಬಂಧಪಟ್ಟಿದ್ದೇ ಇರಬಹುದು. ಆದರೆ, ಇದು ವೈಯಕ್ತಿಕ ಸಂಬಂಧಗಳ ವಿಚಾರವಾಗಿ ಅವರಿಗಿದ್ದ ದ್ವಂದ್ವಾತ್ಮಕ ದೃಷ್ಟಿಗೊಂದು ಒಳ್ಳೆಯ ನಿದರ್ಶನವಾಗಿ ನಿಲ್ಲುತ್ತದೆ. ವೈಯಕ್ತಿಕ ಸಂಬಂಧಗಳಲ್ಲಿ ಬರುವ ಅಪ್ಪಟ ಭಿನ್ನಮತಗಳು ಅವರ ನಡುವಿನ ಅಪ್ಪಟ ಪ್ರೀತಿ-ವಿಶ್ವಾಸಗಳಲ್ಲಿ ಮುಳುಗಿ ಹೋಗುತ್ತವೆ; ಆಲೋಚನೆಗಳು ಭಾವನೆಗಳಲ್ಲಿ ಕರಗಿ ಹೋಗುತ್ತವೆ; ಒಂದು ವಿಚಾರಕ್ಕೆ ಸಂಬಂಧಿಸಿದಂತೆ ಏಳುವ ವಿಭಿನ್ನ ದೃಷ್ಟಿಕೋನಗಳು ಸಮಾಜದ ಬಗ್ಗೆ ಇರುವ ಬದ್ಧತೆಯ ಮುಂದೆ ನಗಣ್ಯವಾಗುತ್ತವೆ. ನಾನು ಈ ಹಿಂದೆ ಉಲ್ಲೇಖಿಸಿದ 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯ ಸಂಪಾದಕೀಯವು ತನ್ನ ಕೊನೆಯ ಮಾತುಗಳಲ್ಲಿ ಹೇಳುವಂತೆ ''ಒಂದು ನಾಗರಿಕತೆಯು ತನ್ನೊಳಗಿನಿಂದಲೇ ದೃಢವಾಗಿರಬೇಕು. ಅದು ತೇಪೆ ಹಾಕಿದ ಹರುಕು ಬಟ್ಟೆಯಂತಿರಬಾರದು. ಭಾರತವು ಮೂರು ನಾಗರಿಕತೆಗಳ ಯುದ್ಧಭೂಮಿಯಾಗಿಯೇ ಉಳಿದುಕೊಂಡಿದೆ. ಒಬ್ಬ ವ್ಯಕ್ತಿಯಾಗಿ ನೆಹರು ಅವರ ವ್ಯಕ್ತಿತ್ವ ಕೂಡ ಇಂಥ ಸಂಘರ್ಷಗಳಿಂದಲೇ ಕೂಡಿತ್ತು. ಆದರೆ ಪರಸ್ಪರ ಎದುರಾಳಿಗಳಾಗಿದ್ದ ಈ ನಾಗರಿಕತೆಗಳನ್ನು ಅವರು ನಮ್ಮಲ್ಲಿನ ಹೆಚ್ಚಿನವರಿಗಿಂತ ಚೆನ್ನಾಗಿ ಸಮನ್ವಯಗೊಳಿಸಿದರು.''

ಪ್ರಾಯಶಃ ಗಾಂಧೀಜಿ ಮತ್ತು ಸರ್ದಾರ್ ವಲ್ಲಭಭಾಯಿ ಪಟೇಲರ ಸಾವು, ಜತೆಗೆ ತಮಗೆ ಜಯಪ್ರಕಾಶ ನಾರಾಯಣ, ರಾಮ್‌ಮನೋಹರ್ ಲೋಹಿಯಾ, ಆಚಾರ್ಯ ಕೃಪಲಾನಿ, ರಾಜಾಜಿ ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮೊಂದಿಗಿದ್ದ ಅನೇಕ ಗೆಳೆಯರೊಂದಿಗೆ ಬೆಳೆಯುತ್ತಿದ್ದ ಭಿನ್ನಾಭಿಪ್ರಾಯಗಳಿಂದಾಗಿ ನೆಹರು ಅವರು ಏಕಾಂಗಿಯಾದರೆನಿಸುತ್ತದೆ. ಜತೆಗೆ ಅವರನ್ನು ಸುತ್ತುವರಿದಿದ್ದ ಕ್ಷುದ್ರವ್ಯಕ್ತಿಗಳು ಕೂಡ ನೆಹರು ಅವರ ಬೌದ್ಧಿಕ, ಭೌತಿಕ ಮತ್ತು ಆಧ್ಯಾತ್ಮಿಕ ಸಂಪನ್ಮೂಲಗಳೆಲ್ಲ ಬರಿದಾಗಲು ತಮ್ಮದೇ ಆದ ಕಾಣಿಕೆ ನೀಡಿರಬೇಕು. ಒಟ್ಟಿನಲ್ಲಿ ಭಾರತದಂತಹ

ತುಂಬಾ ಸಂಕೀರ್ಣವಾದ ದೇಶಕ್ಕೆ ಮಾರ್ಗದರ್ಶನ ನೀಡುವ ಮತ್ತು ಇದರ ಆಡಳಿತ ನಡೆಸುವ ಭಾರಿ ಹೊಣೆಯನ್ನು ತಾವೊಬ್ಬರೇ ಹೊತ್ತಿದ್ದ ನೆಹರು ಅದರ ಭಾರದಡಿ ನಲುಗಿಹೋದರು.

ಚಿಂತಕ ಪ್ಯಾಸ್ಕಲ್ ಹೇಳಿರುವಂತೆ ''ನಮ್ಮ ಎಲ್ಲ ತರ್ಕಗಳೂ ಅಂತಿಮವಾಗಿ ಭಾವನೆಗಳ ಎದುರಿನ ಶರಣಾಗತಿಯೇ ಆಗಿರುತ್ತದೆ.'' ನೆಹರು ಅವರ ವಿಚಾರದಲ್ಲಂತೂ ಈ ಮಾತು ನೂರಕ್ಕೆ ನೂರರಷ್ಟು ಹೊಂದಿಕೊಳ್ಳುತ್ತದೆ. ನೆಹರು ಅವರು ಪ್ರತಿಯೊಂದನ್ನೂ ತಮ್ಮ ಹೃದಯದಾಳದಿಂದ ವಿಚಾರಿಸುತ್ತಿದ್ದರು ಎನ್ನುವುದು ಸತ್ಯಕ್ಕೆ ದೂರವಾದ ಮಾತೇನಲ್ಲ. ಯಾವುದೇ ವಿಚಾರಕ್ಕೆ ಸಂಬಂಧಿಸಿದಂತೆ ಅವರ ಗೆಲುವನ್ನಾಗಲಿ, ಸೋಲನ್ನಾಗಲಿ ಅನುಸರಿಸಿ ಬೆನ್ನಹಿಂದೆಯೇ ಬರುತ್ತಿದ್ದ ಅವರ ಪ್ರಾಮಾಣಿಕವಾದ ಆಲೋಚನೆಗಳಿಗಾಗಿ ಅವರನ್ನು ಮೆಚ್ಚಲೇಬೇಕು. ಅದನ್ನೆಲ್ಲ ಅವರು ಹೇಗೆ ವ್ಯಕ್ತಪಡಿಸುತ್ತಿದ್ದರು ಎನ್ನುವುದು ಚರ್ಚಾಸ್ಪದ ವಿಷಯ. ತಮ್ಮ ಆಲೋಚನೆಗಳನ್ನೆಲ್ಲ ಅವರು ನೇರವಾಗಿ ಹೊರಹಾಕುತ್ತಿದ್ದರೇ? ಸುತ್ತಿಬಳಸಿ ಹೇಳುತ್ತಿದ್ದರೇ? ಅಥವಾ ಏನನ್ನಾದರೂ ಗುಟ್ಟಾಗಿಡುತ್ತಿದ್ದರೇ? ಎನ್ನುವ ಪ್ರಶ್ನೆಗಳು ಇದ್ದೇ ಇವೆ. ಪ್ರಾಯಶಃ ಅವರು ತಮ್ಮೊಂದಿಗೆ ತಾವೇ ಸಂಧಾನದ ಅವಸ್ಥೆಯಲ್ಲಿ ಇರುತ್ತಿದ್ದರು ಎನಿಸುತ್ತದೆ. ತಮ್ಮ ಮನಸ್ಸಿಗೆ ಹೊಳೆಯುತ್ತಿದ್ದ ಸಂಗತಿಗಳನ್ನು ಕೂಡಲೇ ಹೊರಹಾಕುತ್ತಿದ್ದ ಅವರು, ಅದರ ಮೂಲಕ ದೇಶದ ಜನತೆಗೆ ಅರಿವು ಮೂಡಿಸಲು ಯತ್ನಿಸುತ್ತಿದ್ದರು. ಇದನ್ನು ಅವರ ಆಲೋಚನೆ ಮತ್ತು ನಡೆಗಳಲ್ಲಿದ್ದ ದ್ವಂದ್ವಾತ್ಮಕತೆ ಎಂದೂ ಕರೆಯಬಹುದು.

ಆಧಾರಗಳು

೧. ೧೯೪೯ರ ಮೇ ೧೬ರಂದು ನೆಹರು ಅವರು ಮಾಡಿದ ಭಾಷಣ.

೨. ೧೯೪೯ರ ಮೇ ೨ರಂದು ನೆಹರು ಅವರು ಮಾಡಿದ ಭಾಷಣ.

೩. ೧೯೪೯ರ ಮೇ ೧೭ರಂದು ನೆಹರು ಅವರು ಮಾಡಿದ ಭಾಷಣ.

೪. ೧೯೪೬ರ ಸೆಪ್ಟೆಂಬರ್ ೭ರಂದು ನೆಹರು ಅವರು ಮಾಡಿದ ಭಾಷಣ.

೫. ೧೯೬೪ರ ಜನವರಿಯಲ್ಲಿ ನೆಹರು ಅವರು ಮಾಡಿದ ಭಾಷಣ.

೬. ೧೯೬೩ರ ಆಗಸ್ಟ್ ೨೨ರಂದು ನೆಹರು ಅವರು ಮಾಡಿದ ಭಾಷಣ.

೭. ೧೯೬೩ರ ಡಿಸೆಂಬರ್‌ನಲ್ಲಿ ನೆಹರು ಅವರು ಮಾಡಿದ ಭಾಷಣ.

೮. ೧೯೬೩ರ ಆಗಸ್ಟ್ ೨೨ರಂದು ನೆಹರು ಅವರು ಮಾಡಿದ ಭಾಷಣ.

೯. ಒರೆಸ್ಟ್ ಮಾರ್ಟಿಶಿನ್ ೧೯೮೯ರಲ್ಲಿ ಹೊರತಂದ 'ಜವಾಹರಲಾಲ್ ಅಂಡ್ ಹಿಸ್ ಪೊಲಿಟಿಕಲ್ ವ್ಯೂಸ್' ಕೃತಿ, ಪುಟ ೧೨೨, ಪ್ರೋಗ್ರೆಸ್ ಪಬ್ಲಿಷಿಂಗ್, ಮಾಸ್ಕೊ.

೧೦. ಅದೇ, ಪುಟ ೧೧

೧೧. ಎಸ್ ಗೋಪಾಲ್ ಅವರ 'ಸೆಲೆಕ್ಟೆಡ್ ವರ್ಕ್ಸ್ ಆಫ್ ಜವಾಹರಲಾಲ್ ನೆಹರು' (ಸಂಪುಟ ೧೩)

ಎಚ್.ಎಸ್. ಶಿವಪ್ರಕಾಶರ ಮೂರು ಪದ್ಯಗಳು

೧

ಗುರುವಿನ ಹುಣ್ಣಿಮೆ

ಹೊರಗಿನ ಚಂದಿರನು ಬಿಳಿಬೆಳಕ ಬೀರುತ್ತ
ಏರುವನು ಬಾಂದಳದ ಮೇಲೆ
ಗುರುವೆಂಬ ಚಂದಿರನು ತಿಮಿರದಾಳದಿಂದ
ಏರುವನು ನಮ್ಮ ಭ್ರೂಮಧ್ಯಕೆ

ಸ್ವಾಗತ ಹಾಡಿದವು ಸುತ್ತ ಉಡುಗಣವೆಲ್ಲ
ಪೂರ್ಣಚಂದಿರಗೆ ಮೌನದಲ್ಲಿ
ಸ್ವಾಗತ ಹಾಡಿದವು ಅರಿವಿನ ಕಣಗಳು
ಒಳಚಂದಿರಗೆ ಓಂಕಾರದಲ್ಲಿ

ನಂಜಾದ ಕಡಲ ಕಲ್ಲಾದ ಹೃದಯವ
ನೋಡಿಯೂ ಹೊರಚಂದ್ರ ಬೆಳಗುತಿದ್ದ
ತಬ್ಬಲಿಯ ಅಳಲು ಹೆಬ್ಬುಲಿಗಳಬ್ಬರ
ಎರಡಕೂ ಕಿವಿಗೊಡದೆ ಮೌನವಿದ್ದ

ನಂಜುಂಡನಾಗಿದ್ದ ಕಲ್ಲ ಕರಗಿಸತಿದ್ದ
ಗುರುಚಂದ್ರ ಲೋಕಕಾರುಣ್ಯದಿಂದ
ತಬ್ಬಲಿಯ ಹೆಬ್ಬುಲಿ ಎರಡನೂ ತಬ್ಬಿ
ಬೋಧಿಸತ್ವನ ಹುಚ್ಚು ಕೆಚ್ಚಿನಿಂದ

ಗುರುಚಂದ್ರ ಮೂಡ್ಯಾನೆ ನಭದಮಸ್ತಕದಲ್ಲಿ
ಗುರುವಿನ ಹುಣ್ಣಿಮೆಯ ಇರುಳಿನಲ್ಲಿ
ತೊಳದಾನೆ ನೆಲ-ಕಡಲ ಕೇಡುಕೊಳಕನ್ನೆಲ್ಲ
ಶಿವಲಿಂಗನೆಂಬ ತಿಳಿವ ನೀರಿನಲ್ಲಿ

೨

ನಾನು ಒದಿಸ್ಯೂಸ್ ನ ಹಾಗೆ
ಅಡ್ಡ ಬಂದವು
ಒಕ್ಕಣ್ಣ ಸೈಕ್ಲೋಪಗಳು
ಷಿಲಾ–ಚರಿಬ್ದಿಸ್ ರಕ್ಕಸ ಬಂಡೆಗಳು
ಗಂಡಸರನ್ನು ನಾಯಾಗಿ ಮಾಡಿ ಮಜಾ ತೆಗೆದುಕೊಳ್ಳುವ ಮಾಯಾಂಗನೆಯರು

ನಿನ್ನ ಕಡೆ ನಾನು ಬರುವಾಗ

ನಾನು ಧರ್ಮರಾಜನ ಹಾಗೆ
ಅಡ್ಡಬಂದವು
ವನವಾಸ ಅಜ್ಞಾತವೇಷ
ಸೋದರಹತ್ಯೆಯ ರಕ್ತಸಾಗರಪ್ರವಾಸ

ನಿನ್ನ ಕಡೆ ನಾನು ಬರುವಾಗ

ನಾನು ಏನಸ್ಸನ ಹಾಗೆ
ಅಡ್ಡ ಬಂತು
ಟ್ರಾಯ್ ಉರಿಯಲ್ಲಿ ಬೇಯುತ್ತಿದ್ದ ತಂದೆಯನ್ನು ಉಳಿಪಿಕೊಳ್ಳಲಾಗದ ದುರಂತ
ನಿನ್ನ ಕಡೆ ನಾನು ಬರುವಾಗ

ಕೊನೆಗೆ ನಾನಾದ ಗಿಲ್ಗಮಿಷನ ಹಾಗೆ
ಅಡ್ಡಬಂತು
ಸತ್ತವರ ಜಗತ್ತಿಂದ ಜೀವಗೆಳೆಯನನ್ನು
ವಾಪಸು ತರಲಾಗದೆ
ಸಾವ ಲೋಕಕ್ಕೆ ಹಿಂದಿರುಗಿ ತಡಬಡಗುಡುವ
ನೀಳನಿರಾಶೆ
ನಿನ್ನ ಕಡೆ ನಾನು ಬರುವಾಗ

ಆದರೂ ನಾನಲ್ಲ ಅವರ ಹಾಗೆ
ಪುರಾಣೇತಿಹಾಸಾನುಕೀರ್ತಿತ ದಿವ್ಯಪುರುಷ:
ತಲುಪಿದ್ದೇನೆ ನಿನ್ನನ್ನು ನನ್ನ ಕಲ್ಪನೆಯ
ನಿರಂತರವಸಂತಗಳ ನಾಡನ್ನು

೩

ಎಲ್ಲಾ ಬಾಡಿಗೆ ತಂಗಿ ಎಲ್ಲಾ ಬಾಡಿಗೆ
ಇಲ್ಲಿ ಸ್ವಂತದ್ಯಾವುದೈತೆ ಎಲ್ಲಾಬಾಡಿಗೆ

ಗಂಡನ ಮನೆಗೆ ಹೋಗುವನಕ ತಂಗಿ ಬಾಡಿಗೆ
ಸುಡುಗಾಡಿಗೆ ಹೋಗುವನಕ ಗಂಡ ಬಾಡಿಗೆ

ಉಸಿರು ತಾನುಆಡುವನಕ ಮೈಯಿ ಬಾಡಿಗೆ
ಜೀವ ತಾವಲಿರುವಕ ಉಸಿರು ಬಾಡಿಗೆ

ಬೆಳೆದು ತಾನು ನಿಲ್ಲುವನಕ ಮಗನು ಬಾಡಿಗೆ
ಒಲಿದ ಪುರುಷನ ಸೇರುವನಕ ಮಗಳು ಬಾಡಿಗೆ

ಮರಣ ತಾನು ಬರುವತನಕ ಅರಸ ಬಾಡಿಗೆ
ಅವನ ರಾಣಿವಾಸ ಸೇನೆ ಎಲ್ಲಾಬರೀ ಬಾಡಿಗೆ

ಆಸ್ತಿಪಾಸ್ತಿ ವಡವೆವಸ್ತ್ರ ಪೂರ್ತಿ ಬಾಡಿಗೆ
ಶಾಸ್ತ್ರಪಾಸ್ತ್ರ ಪುರಾಣ ಇತ್ಯಾದಿ ಬರೀ ಬಾಡಿಗೆ

ಭೀತಮನದ ಒಳಗೇ ದೇವರೆಂಬ ಬಾಡಿಗೆ
ಆತುಮನ ಅರಿಯುವನಕ ಗುರುವೂ ಬಾಡಿಗೆ

ಅರಿವಿನೊಳಗೆ ಗುರುಮಂತ್ರ ಎಂಬ ಬಾಡಿಗೆ
ಶಿವಲಿಂಗ ನಾಮದಲಿ ನಾನೂ ಬಾಡಿಗೆ

ಅಧ್ಯಾಪಕರು, ಜೆ.ಎನ್.ಯು.
ನವದೆಹಲಿ
ಫೋನ್: ೯೯೧೦೨ ೧೯೩೦೯

ಜಿ. ಕೆ. ರವೀಂದ್ರಕುಮಾರ್
ಮೂರು ಪದ್ಯಗಳು

ರ್‍ಯಾಂಪ್

ಅವರು ಬರುತ್ತಿದ್ದಾರೆ ಒಬ್ಬರ ಹಿಂದೊಬ್ಬರು
ತರಹೆವಾರಿ ವಿನ್ಯಾಸದ ಹರಿತ ರೇಖೆಗಳಂತೆ
ಎದೆ ಮುಂದಲ ವಿಶ್ವಕ್ಕೆ ಸೆಟೆದ ಕಾಲದ ಉತ್ತರದಂತೆ
ತಿರುಗಿ ಹೋಗುವ ಮೊದಲು ಒಂದು ಮೊನಚು ನೋಟ
ಮುನಿಸಿಕೊಂಡ ಭಾವ ಕೊಡವಿ
ಸೋತ ಪರಾಕ್ರಮಿಯ ಗೆಲುವ ಛಲ್ಲಿನಲ್ಲಿ

ಅಲ್ಲಿ ಮತ್ತೊಬ್ಬರು ಹಿಂದೆ ಇನ್ನೊಬ್ಬರು
ಮಾತಿಲ್ಲ ಕತೆಯಿಲ್ಲ ನಗೆಯಿಲ್ಲ ಬಗೆಯಿಲ್ಲ
ಏನೋ ತೋರುವ ಧಾವಂತದಲ್ಲಿ
ಕಳೆದುಕೊಂಡ ಆತ್ಮದ ಉಳಿದ ಚೂರು ವಿಶ್ವಾಸದ ಹಾಗೆ

ಮಾತಾಡಬಹುದಿತ್ತೇನೋ ಉಳಿಯಬಹುದಿತ್ತೇನೋ
ಅವರು ಅವರಲ್ಲದಂತೆ ಬರುವಲ್ಲಿ
ಬಂದವರು ಬಂದವರಲ್ಲದಂತೆ ಹೋಗುವಲ್ಲಿ
ತಿಳಿಯದವರೂ ತಿಳಿದವರಂತೆ ಕೇಕೆ ಹಾಕುವಲ್ಲಿ
ಏನೂ ಆಗಬಹುದಿತ್ತೇನೋ

ಅವರು ಏನೋ ತೋರಿದರು
ಇವರು ಏನೋ ನೋಡಿದರು
ಪ್ರಶ್ನೆ ಉತ್ತರ ಪರೀಕ್ಷೆ ಯಾವುದೂ ಇಲ್ಲ
ತೋರಿದ ಬೇಲಿಗೊಂದು ನೋಡಿದ ಸಾಕ್ಷಿ
ಇಣುಕಿದ ಬೆಕ್ಕೂ ಹಾಕಿಕೊಂಡ ಚಪ್ಪಾಳೆ

ಹೀಗೆ ಯಾರೋ ಯಾಕೋ ದಿನವೂ ನಡೆದಾಡುತ್ತಿದ್ದಾರೆ
ನನ್ನ ಹಿಂದೆ ಮುಂದೆ ಏನೋ ಹಿಡಿದು
ಮಾತಾಡದೆ ಮಾತಾಡಿಸದೆ
ಶಬ್ದವಿಲ್ಲದ ಸೂತಕದ ನೆಂಟರಂತೆ
ಆದರೂ ಏನೋ ಹೇಳಿದಂತೆ ತೋರಿದಂತೆ
ನನ್ನೆದೆಯ ಕದವನ್ನು ತಾವೇ ತೆರೆದು ಹುಡುಕುವಂತೆ

ಮೊನ್ನೆ ಬಂದವರು ಯಾಕೋ ಹೋಗಿಯೇ ಇಲ್ಲ
ಈಗ ನಾವೂ ಹೆಜ್ಜೆ ಹಾಕಬೇಕಂತೆ
ನಾವೂ ಅವರ ಹಾಗೆ ಅವರೂ ನಮ್ಮ ಹಾಗಂತೆ
ಕೈಯೊಳಗೆ ಕೈಯಿಟ್ಟು ಭುಜಕ್ಕೆ ಭುಜವಿಟ್ಟು

ಇದೆಲ್ಲ ಯಾಕೆ? ಹೊರಬರದ ಮಾತು
ಬಂದವರ ಕನಸಿಗೆ ಇದು ಇದ್ದವರ ಜೊತೆಯಂತೆ
ಇರುವವರು ಇರುವವರಿಂದ ಬಂದವರಿಗಾಗಿ ಬಾಳುವುದು
ಚಲನೆಯ ಹೊಸ ನಿಯಮವಂತೆ

ಈಗ ನಾವೂ ಅವರೊಡನೆ
ಇಲ್ಲಿಂದ ಅಲ್ಲಿಗೆ ಅಲ್ಲಿಂದ ಇಲ್ಲಿಗೆ ನಿಲದಂತೆ
ನಡೆದೂ ನಡೆದೂ
ಇರುವ ಜಾಗದಲ್ಲೇ ಮೈಲುಗಟ್ಟಲೆ ದೂರ
ಭೂಗೋಳ ಪೂರ

ಇಷ್ಟು ತಿರುಗಿದರು ನಮ್ಮ ಊರೇ ಪತ್ತೆಯಾಗುತ್ತಿಲ್ಲ
ಅದು ಹೇಗೆ?
ಇಲ್ಲೇ ಇತ್ತಲ್ಲಾ
ಪಾಪ, ಸಾಕಾದ ಇಬ್ಬರು ಅಲ್ಲೇ ಕೂತರು
ಅವರನ್ನು ಕೇಳಬಹುದು
ಅರೇ, ಅವನು ಬಸವ ಇವಳು ಕಮಲಾ
ಅಲ್ಲವಾ...

ಜೂಟ್ ಎಂದು ಕರೆದಾಗ

ಎಲ್ಲೋ ಹೇಗೋ ಅವರು ಸುಖವಾಗಿದ್ದಾರೆ ಎಂಬ ಒಂದು ನಂಬಿಕೆ
ಈ ಜನುಮದೊಳಗೆ ನೋಡುವ ವಿಶ್ವಾಸವಿಲ್ಲದಾಗಲೂ
ಅಕಸ್ಮಾತ್ ಕಾಣಬಹುದೇನೋ ಎಂದು ಹುಡುಕುವ ಉಮೇದಿಲ್ಲದಾಗಲೂ

ಯಾರು ಯಾರೋ ಧುತ್ತನೆ ಸಿಗುವಾಗ ಅವರೇಕೆ ಸಿಗುವುದಿಲ್ಲವೋ
ಬೇಕಾದ ಒಬ್ಬರು ಸದಾ ಹೀಗೆ ತಪ್ಪಿಸಿಕೊಂಡೇ ಬಾಳುವಲ್ಲಿ
ಉಳಿದುಬಿಟ್ಟ ಮಾತಿನ ತೂಬು ಮುಚ್ಚಿಕೊಂಡೇ ಇರುವಲ್ಲಿ

ಎದೆಕೋಣೆಯ ಪಿಸು ನಕ್ಷತ್ರಗಳು ಚದುರಿ ಚಲ್ಲಾಪಿಲ್ಲಿಯಾಗಿ
ನೂರುಸಲ ಹಳೆಪಳೆಯ ಬಿಸಾಕಿದಾಗಲೂ ಉಳಿಸಿಕೊಂಡ ಅಕ್ಷರ ಪತ್ರ ಇತ್ಯಾದಿ
ಅವರ ಕಾಣದೆಯೂ ಕಂಡ ಸುಖ ಎಂದು ಯಾರಿಗೂ ಹೇಳದಾಗಲೂ

ಯಾವುದೋ ಮೀಟಿಂಗು ಎಲ್ಲಿಯೋ ಸೆಮಿನಾರು ನೂರು ಧಾವಂತದೊಳಗೆ
ಯಾವುದೋ ಸಾವು, ಯಾರದೋ ಸೀಮಂತ ಆಪ್ತ ತಾಪತ್ರಯ ತೆಕ್ಕೆಯೊಳಗೆ
ಜೂಟ್ ಎಂದು ಕೂಗಿ ತಪ್ಪಿಸಿಕೊಂಡಂತೆ ಅವರು ಯಾಕೆ ಹಾಗೆ?

ಅದು ಹಾಗೇ ಎಂದು ನೇವರಿಸುವ ನಿಟ್ಟುಸಿರು ನಮ್ಮ ತಾಯಂದಿರಿಗೂ ಮಿಗಿಲು
ನಿಂತೇ ಬಿಟ್ಟ ಹೆಜ್ಜೆಯನ್ನು ಮತ್ತೆ ಇರಿಸುವ ಬೆಚ್ಚಗಿನ ಕಕ್ಕುಲಾತಿಯಲ್ಲಿ
ಹೋದ ಉಸಿರಿಗೂ ನಾವೇ ಬಂದ ಉಸಿರಿಗೂ ನಾವೇ ಏನು ಮನದ ಬಳ್ಳಿಯೋ

ಮತ್ತೆ ವಿಷಯಕ್ಕೆ ಬಂದರೆ ಎಂದಾದರೂ ಹುಡುಕಬಹುದಿತ್ತಲ್ಲಾ ಎಂದು ನೀವು
ಹಾಗೆ ಸಿಕ್ಕ ಕೆಲವರೂ ಮಾತು ಸೋತವರಂತೆ ಮುಂದೇನು ಎಂದು ನಿಂತು ನಕ್ಕಾಗ
ಸಿಗಬೇಕಾದವರು ಸಿಗದೆ ಇರುವಲ್ಲಿಯೇ ಜೀವನದ ಸುಖವಿರುವುದೇನೋ

ಗೊತ್ತಿಲ್ಲ ನಮಗೆ ಯಾರು ಕಂಡಿಲ್ಲವೋ ಅವರು ಮಾತನಾಡುತ್ತಿದ್ದರು
ಕಟ್ಟಿಕೊಳ್ಳುತ್ತಿದ್ದರು ನಮಗಾಗಿಯೇ ಅವರು ಕಾಯುತ್ತಿದ್ದರು
ಅವರು ಒಳ್ಳೆಯವರು ಮತ್ತು ಮತ್ತು ಖಾಲಿ ಬಿಟ್ಟಗೆರೆ ಬಹಳ ದೊಡ್ಡದು

ಅವಳು ಹೋಗಿಬಿಟ್ಟಳಂತೆ ಕಣೇ ಕೊನೆಗೂ ಸಿಗದೆ ಕೆಲ ತಿಂಗಳ ಹಿಂದೆಯೇ ಎಂದು
ಇಂದು ಹೆಂಡತಿಗೆ ಹೇಳುವಾಗ ಕತೆಯೂ ಅಲ್ಲದ ಕವಿತೆಯೂ ಅಲ್ಲದ
ಮೀಟು ಮಿಡಿತವೊಂದು ಹೀಗೆ ಒಮ್ಮೆಗೆ ಸುಮ್ಮನಾದ ಮೌನದಲ್ಲಿ

ಚಹಾ ಕುಡಿಯುತ್ತಿದ್ದೇವೆ ಒದ್ದೆಗೊಳ್ಳುತ್ತ, ಒರೆಸಿಕೊಳ್ಳುತ್ತ ಮುಖವ ನೋಡುತ್ತ
ಬೇಕಾದ ಒಬ್ಬರು ಹೀಗೆ ತಪ್ಪಿಸಿಕೊಂಡೇ ಹೋಗಿ ಬಿಡುವಲ್ಲಿ
ಜೂಟ್ ಎಂದು ಯಾರು ಅಂದರೂ ಎಲ್ಲರೂ ಏಕೆ ತಿರುಗುತ್ತೇವೆ?

ಒಂದೊಂದು ಸಹಿಯೂ ಒಂದೊಂದು ಥರ

ಒಂದೊಂದು ಸಹಿಯೂ ಒಂದೊಂದು ಥರ
ಯಾವುದೋ ಅಕ್ಷರ ಎಂಥದೋ ರೂಪ ವಕ್ರಗತಿ
ಹೇಗೋ ಬಾಗು ಅಂತೇ ಬಳುಕು ವೇಗದ ಛಾಪು

ಹಾಕಿದ ಮೇಲೆ ಅದನ್ನು ಓದುವುದು ಉಂಟೇ
ರಂಗೋಲಿಯಿಟ್ಟವರು ಅದರ ಚುಕ್ಕಿಗಳ ತೋರುವ ರೀತಿ
ಚಿತ್ರ ಬಿಡಿಸಿದವರು ಬಣ್ಣಗಳ ವಿವರಿಸುವ ಹಾಗೆ
ಸಹಿಯೊಳಗಿನ ಅಕ್ಷರವ ಕಾಣಿಸುವುದು ಉಂಟೇ

ಹಾಕುತ್ತ ಹಾಕುತ್ತ ಅದು ಹಾಕಿದವನಿಗೂ ಒಗಟು
ಬಗೆದು ನೋಡಲಾಗದ ಗಂಟು
ಬರೆದು ತೋರಲಾರದ ಬಿಕ್ಕಟ್ಟು
ಯಾಕೆ ಹಾಗಾಯಿತೋ ಹಾಕುತ್ತ ಹಾಕುತ್ತ
ಇನ್ನು ಹೇಗಾಗುವುದೋ

ಕೈ ಮೀರಿದ ರೂಹನ್ನು ಕೈಯೊಳಗೆ ಕಾಪಿಟ್ಟು
ಕಣ್ಣುಕಟ್ಟಿನ ರೂಪಕ್ಕೆ ಅಂಟಿಕೊಂಡು ತಾನು
ಅಡಗಿ ಅಲ್ಲಿ ಕೆತ್ತಿಕೊಂಡ ಸಂಕೇತ

ತನಗೇ ತಾನೆಂಬ ಚಹರೆ

ಒಂದು ಅಸ್ತವ್ಯಸ್ತತೆಯಲ್ಲೂ ಗುರುತು ಕಾಣುವ ಇರವ ಇರಾದೆ
ಹೀಗೇ ಇರಬೇಕೆಂಬ ಬದುಕ ಅಣಕಿಸುವ ಮೊಹರು
ಅಸ್ತವ್ಯಸ್ತವನ್ನೂ ಹಾಗೇ ಕಾದಿಡುವ ಜೀವ ಜಮಾಬಂದಿ

ಒಬ್ಬರ ಸಹಿಯನ್ನು ಇನ್ನೊಬ್ಬರ ಸಹಿ ದಢೀಕರಿಸುವಲ್ಲಿ
ಒಬ್ಬರ ಮಾತು ಇನ್ನೊಬ್ಬರ ಇರವನ್ನು ಒಪ್ಪಿಸದಿರುವಲ್ಲಿ
ರುಜುವೆಂಬ ಉಳಿವಿಗೆ ಶರಣಾದ ಬಾಳ ಪಹಣಿ

ಗೊತ್ತುಗಾಣಿಸುವ ಉಮೇದಲ್ಲಿ ಗೊತ್ತುಗಾಣದಂಥ ಇರವು
ಗೊತ್ತುಗಾಣದೆಯೂ ತೋರಿಕೊಳ್ಳಲೇಬೇಕಾದ ಜಗದ ಜಬರು
ಉಸಿರ ಕಟಕಟೆಯಲ್ಲಿ ಸಹಿಯ ಪಾಟಿ ಸವಾಲು

ಅಪ್ಪ ಅಮ್ಮ ಹಾಕಿದ ಸಹಿ
ಇಂತು ಓಡಾಡಿಕೊಂಡು ಇರುವಲ್ಲಿ
ಯಾರೋ ವಿವರಿಸುತ್ತ ನೇವರಿಸುತ್ತ ಹುಡುಕಾಡುತ್ತ
ನೆತ್ತಿ ಕನಸ ಪೊರೆಯುತ್ತಿದ್ದಾರೆ ಬೆಚ್ಚಗಿನ ಕೈಯಲ್ಲಿ
ಸಹಿ ಕಳೆದುಕೊಂಡ ಊರಿನಲ್ಲಿ

ಉಪನಿರ್ದೇಶಕರು, ಆಕಾಶವಾಣಿ, ಭದ್ರಾವತಿ
ಮೊಬೈಲ್: ೯೮೪೫೧೮೧೬೨೨

ಪ್ರತಿಕ್ರಿಯೆ

ಪ್ರಿಯ ಪ್ರಹ್ಲಾದ ಸರ್,

ಚಿತ್ತಾಲ ಸಂಚಿಕೆ ಚೆನ್ನಾಗಿ ಬಂದಿದೆ.

ಆದರೆ ಚಿತ್ತಾಲರಂತಹ ಲೇಖಕರನ್ನು ನಾವು ಪ್ರಶ್ನಿಸಬೇಕಾದ ಕೆಲವು ಮೂಲಭೂತ ಪ್ರಶ್ನೆಗಳು ಇವೆ. ನಾನು ಅವರ ಮನೆಗೆ ೨-೩ ಸಲ ಹೋದಾಗ ಆ ಬಗೆಗೆ ಚರ್ಚೆಯನ್ನೂ ಮಾಡಿದೆ, ನನ್ನ ಒಂದು ವಾದ ಹೀಗಿತ್ತು ''ಸಾಹಿತ್ಯದಿಂದ ಆಗುವ ಅತಿ ದೊಡ್ಡ ಲಾಭವೆಂದರೆ ಸಾಹಿತ್ಯದಿಂದ ಜೀವನದ ಯಾವದೇ ದುಖದ ನಿವಾರಣೆಯೂ ಆಗುವದಿಲ್ಲ ಎಂಬುದು ಅನುಭವ -ಸಿದ್ದವಾದ ಸತ್ಯವಾಗಿ ದೊರೆಯುತ್ತದೆ. ಅಷ್ಟರ ಮಟ್ಟಿಗೆ ಮಾತ್ರ ಸಾಹಿತ್ಯಕ್ಕೆ ಒಂದು ಶಾಬ್ದಿಕ -ಕಲೆಯಾಗಿ ಬೇಲೆ ಇದೆ ಬಹಳ ದೊಡ್ಡ ಲೇಖಕನ ಬಹಳ ದೊಡ್ಡ ಸಾಧನೆ ಎಂದರೆ ಸಾಹಿತ್ಯದಿಂದ ಏನೇನೂ ಸಾಧ್ಯವಿಲ್ಲ ಎಂಬುದನ್ನು ಆತ ಅನುಭವಗಳ ಮೂಲಕವೇ ಕಟ್ಟಿ ಕೊಡುತ್ತಾನೆ ಕಾವ್ಯದ ಬದಲು ಫಿಕ್ಷನ್ ಅನ್ನು ತನ್ನ ಮಾಧ್ಯಮವನ್ನಾಗಿ ಮಾಡಿಕೊಂಡವರಿಗಂತೂ ಇದು ಬಹಳ ಬೇಗ ತಿಳಿಯುತ್ತದೆ'' ಎಂದು ನಾನು ಅಂದೆ. ಚಿತ್ತಾಲರು ''ಹಾಗಾದರೆ ಸಾಹಿತ್ಯವೆಂಬ ಕಲೆಗೆ ಪರ್ಯಾಯವೆಂದು ನೀವು ಯಾವುದನ್ನು ಗುರುತಿಸುತ್ತೀರಿ?'' ಎಂದು ಕೇಳಿದರು ನಾನು ತಕ್ಷಣ ''ಅದು ತತ್ವ'' ಅಂದೆ. ಚಿತ್ತಾಲರು ''ಅವುಗಳ ನಡುವೆ ಇರುವ ಅಂತರವೇನು?'' ಎಂದರು ನಾನು ಒಂದೇ ಮಾತಿನಲ್ಲಿ ಹೇಳಿದೆ ''ಕಲೆ ಜಗತ್ತನ್ನು ಕ್ಷಮಿಸಿ ದೊಡ್ಡದಾಗಲು ಹೋಗುತ್ತದೆ ಆದರೆ ತತ್ವ ಜಗತ್ತಿಗೆ ತಾನೇ ಕ್ಷಮೆ ಕೇಳಿ -ಅದರ ಪ್ರತಿಕ್ರಿಯೆಗೆ ಕಾಯದೆ -ಮೌನವಾಗುತ್ತದೆ'' ಎಂದೇ

ಚಿತ್ತಾಲರು ಒಂದು ಕ್ಷಣ ಮೌನವಾಗಿ ಕೊನೆಗೆ ''ಈ ದರ್ಶನ ನನಗೂ ಒಳಗೆ ಒಪ್ಪಿಗೆ ಆಗುತ್ತದೆ ಆದರೆ ಅದನ್ನು ಒಪ್ಪಿ ಬೆಳೆಸಿಕೊಳ್ಳುವ ಬಗೆ ತಿಳಿಯುತ್ತಿಲ್ಲ'' ಎಂದರು. ನಾನು ''ನಮ್ಮ ಉಪನಿಷತ್ತು ಗಳು ಈ ಮಾತನ್ನು ಅನುಭವಕ್ಕೆ ತಂದುಕೊಡುತ್ತವೆ'' ಎಂದೇ .

ಚಿತ್ತಾಲರು ''ನಾನೂ ಓದಬೇಕು ನಮ್ಮ ಅಣ್ಣ ಗಂಗಾಧರ ಅವುಗಳನ್ನೇ ಓದುತ್ತಿದ್ದ'' ಎಂದರು

ಅವರ 'ಶಿಕಾರಿ'ಯಲ್ಲಿ ಚಿತ್ರಿತವಾದ ಹೊರಾಂಗಣ ಬೇಟೆಗಿಂತ ನಾಗಪ್ಪನ ಒಳಾಂಗಣದಲ್ಲಿ ನಡೆಯುವ ಇನ್ನೊಂದು ಬಗೆಯ ಬೇಟೆ ಇದೆ ಆ ಬಗೆಯ ನೋಟದ ವಿಮರ್ಶೆಯನ್ನು ನಾನು ನೋಡಿಲ್ಲ.

• **ಆನಂದ ಝುಂಜರವಾಡ**
ಸ್ನೇಹದೀಪ, ಆನಂದ ನಗರ
ಮುಧೋಳ - ೫೮೭ ೩೧೩

ನಮಸ್ತೆ ಸಂಪಾದಕರಿಗೆ,

ಈ ಸಲದ ಸಂಚಯ ಸಂಪಾದಕೀಯ ತುಂಬ ಚೆನ್ನಾಗಿದೆ. ನಿಜ ಯಾವ ಪಂಥಕ್ಕೂ ಸೇರದ ಜನರಿಗೆ ಜಿಗುಪ್ಸೆ ತರುವಂಥ ದುಃಸ್ಥಿತಿಯಲ್ಲಿದ್ದೇವೆ. 'ಡೋಳ್ ಡೋಳ್ ನಾಗಂದಿರು ಎಲ್ಲೆಡೆ...' ಸಾಹಿತ್ಯದ ಕೆಲಸಕ್ಕೆ ಶುಭಹಾರೈಕೆಗಳು

• **ದೀಪಾ ಫಡ್ಕೆ**
ಆರ್.ಟಿ. ನಗರ, ಬೆಂಗಳೂರು - ೫೬೦೦೩೨




ಸಂಚಯ
ಗ್ಯಾಲರಿ

SANCHAYA
Edited, Printed & Published by: D.V. PRAHLAD, No. 100, 2nd Main, 6th Block, 3rd Stage, 3rd Phase, Banashankari, Bangalore - 560 085, Ph: 080-2679 1925

Consciousness is not an act, not an idea, not even a quality- it is the very besis of creation.

Sadguru

